**ವಿದ್ಯಾಕಾಶಿ Current Affairs**

ಸಂಪುಟ-2 ಸಂಚಿಕೆ – 2 ಅಗಸ್ಟ್-2022

**ಪ್ರಧಾನ ಸಂಪಾದಕರು**

ಶ್ರೀ ಮಲ್ಲಿಕಾರ್ಜುನಗೌಡ ಪೋಲೀಸ್‌ಪಾಟೀಲ್ MBA

**ಸಂಪಾದಕರು**

ಡಾ. ಪ್ರಶಾಂತ ಮಾಂಡ್ರೆ MA, PhD

ಶ್ರೀ ಶಿವರಾಜ ಬಡಿಗೇರ M.Com

**ಉಪಸಂಪಾದಕರು**

ಶ್ರೀ ಮಲ್ಲಿಕಾರ್ಜುನ ಗೌಂಡಿ MA

**ಗೌರವ ಸಲಹೆಗಾರರು**

ಶ್ರೀ ನಾನಾಗೌಡ ಬಿರಾದಾರ(ಡೊಮನಾಳ)

ಶ್ರೀ ರಾಯಪ್ಪ ಹುಣಸಗಿ (AC Revenue)

ಡಾ. ಬಸವರಾಜ ತಲ್ಲೂರ MA, PhD

ಶ್ರೀ ಗಡೆಪ್ಪ ಗುಂಜುಟಗಿ PSI

ಶ್ರೀ ಕೃಷ್ಣೆಗೌಡ ಅರಕೇರಿ PSI

ಶ್ರೀ ಜ್ಞಾನೇಶ ತಿಪ್ಪಣ್ಣನವರ ಕೆಎಎಸ್(ಎಸಿ)

ಶ್ರೀ ಕಲ್ಲೇಶಪ್ಪ DYSP

ಶ್ರೀ ಸಿದ್ದರಾಮಪ್ಪ ಮಾರಿಹಾಳ KAS

ಶ್ರೀ ಭರತ ತಳವಾರ DYSP

ಶ್ರೀ ಲಿಂಗಣ್ಣ ಬಿರಾದಾರ KAS

ಡಾ. ನಾಗವೇಣಿ ತಹಶೀಲ್ದಾರ KAS

ಡಾ. ಸಂಗೀತಾ ಕಟ್ಟಿಮನಿ MA, PhD

ಡಾ. ಮಹೇಶ ಬಾಳಗಿ MA, PhD

**ಸಂಪಾದಕ ಸಲಹಾ ಮಂಡಳಿ**

ಶ್ರೀ ಶಶಿಕುಮಾರ ಹರಳಯ್ಯ MA, B.Ed

ಶ್ರೀ ಸಚಿನ್ ಚೆಣ್ಣದಾಸರ MA

ಶ್ರೀ ಡಿ.ಸಿ. ದುರದುಂಡಿಮಠ MA, B.ED

ಶ್ರೀ ಶ್ರೀಕಾಂತ ರೆಡ್ಡಿ MA

ಶ್ರೀ ಹನುಮಂತ ಇಳಿಗಾವಂ MA, B.ED

**ವ್ಯವಸ್ಥಾಪಕರು**

ಡಾ. ಪ್ರಶಾಂತ ಮಾಂಡ್ರೆ MA, PhD

**ಪ್ರಕಾಶಕರು, ಮುದ್ರಕರು**

ಶ್ರೀ ಮಲ್ಲಿಕಾರ್ಜುನ ಪೋಲೀಸ್‌ಪಾಟೀಲ್

ವಿದ್ಯಾಕಾಶಿ ಪಬ್ಲಿಕೇಷನ್, ಧಾರವಾಡ

**ಪುಟ ವಿನ್ಯಾಸ**

ಡಾ. ಪ್ರಶಾಂತ ಮಾಂಡ್ರೆ MA, PhD

**ಪ್ರಸರಣ ಅಧಿಕಾರಿ**

ಶ್ರೀ ನಿಂಗರಾಜ ಮಾಳಗಿ

**ಕಚೇರಿ ವಿಳಾಸ**

ವಿದ್ಯಾಕಾಶಿ ಕರೆಂಟ್ ಅಫೇರ್ಸ್

ಕಾರ್ಯಾಲಯ, ವೀರ ಹೈಟ್ಸ್, ಪರಿಸರ

ಭವನದ ಹತ್ತಿರ, ಶ್ರೀ ನಗರ ಸರ್ಕಲ್,

ಧಾರವಾಡ – 580003

ದೂರವಾಣಿ: 9611519475

9611904354

# ಸಂಪಾದಕೀಯ



ಪ್ರೀಯ ಓದುಗರೇ,

ನಿಮ್ಮ ಪ್ರೋತ್ಸಾಹಕ್ಕೊಂದು ಸಲಾಂ, ಆತ್ಮೀಯ ಓದುಗರೆ ಒಂದು ವರ್ಷದ ನಂತರ ಪತ್ರಿಕೆಯನ್ನು ಮರಳಿ ಪ್ರಾರಂಭಿಸಿದಾಗ ಸಹಜವಾಗಿಯೇ ಒಂದು ರೀತಿಯ ಭಯ ಮೂಡಿತ್ತು. ಆದರೆ ನೀವು ಪ್ರಥಮ ಪತ್ರಿಕೆಗೆ ನೀಡಿದ ಪ್ರತಿಕ್ರಿಯೆಯಿಂದ ಆ ದುಗುಡ ದೂರವಾಯಿತು. ಪ್ರಥಮ ಪತ್ರಿಕೆಯನ್ನು ಆನ್‌ಲೈನ್ ಮುಖಾಂತರ ನೀಡಲಾಗಿತ್ತು. ಈ ತಿಂಗಳಿನಿಂದ ನಿಮ್ಮ ಮುಂದೆ ಪತ್ರಿಕೆಯನ್ನು ತರಲಿದ್ದೇವೆ.

ಪ್ರತಿಯೊಬ್ಬ ವ್ಯಕ್ತಿಯಲ್ಲಿ ಏನಾದರೂ ಮಾಡಬೇಕೆಂಬ ಹಂಬಲವಿರುತ್ತದೆ ಯಾವುದೋ ಒಂದು ಸಮಸ್ಯೆಯಿಂದ ಅವನು ಅದನ್ನು ಬದಿಗಿಟ್ಟು ಬದುಕಿನ ಜಂಜಾಟದಲ್ಲಿ ಮುಳುಗಿ ಹೋಗುತ್ತಾನೆ. ಆದರೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಈ ರೀತಿಯ ಜಂಜಾಟದಿಂದ ದೂರವಿದ್ದು, ಕೇವಲ ಓದಿನ ಕಡೆಗೆ ಮಾತ್ರ ಗಮನ ಹರಿಸಬೇಕು. ಮನಸ್ಸಿಟ್ಟು ಓದಿದರೆ ಸಾಧಿಸಲಾರದ್ದು ಯಾವುದು ಇಲ್ಲ. ಪ್ರತಿಕ್ಷಣ ಗುರಿ ಮುಟ್ಟುವ ಪ್ರಯತ್ನದಲ್ಲೇ ಇರಬೇಕು. ಸತತ ಪ್ರಯತ್ನದಿಂದ ಸ್ಪರ್ಧಾರ್ಥಿಗಳು ಯಾವ ಪರೀಕ್ಷಯನ್ನಾದರೂ ಪಾಸು ಮಾಡಬಹುದು.

ಸ್ಪಧಾರ್ಥಿಗಳು ಯಾವಾಗಲೂ ಸಕಾರಾತ್ಮಕ ಚಿಂತನೆಗಳನ್ನು ಮಾಡುತ್ತೀರಬೇಕು. ನಕಾರಾತ್ಮಕವಾಗಿ ಯೋಚನೆ ಮಾಡದೇ ತಮ್ಮ ಕಾರ್ಯವನ್ನು ನಿಷ್ಠಯಿಂದ ಮಾಡುವುದರಿಂದ ಜೀವನದಲ್ಲಿ ಯಶಸ್ಸನ್ನು ಪಡೆಯಬಹುದು. ಸ್ಪಧಾತ್ಮಕ ಪರೀಕ್ಷೆಯನ್ನು ಬರೆಯುತ್ತೀರುವವರು ಯಾವಾಗಲೂ ಓದಿನ ಕಡೆಗೆ ಗಮನ ಕೊಡಬೇಕು. ಸತತ ಪಯತ್ನ ಮತ್ತು ರಿವಿಜನ್ ಮಾಡುತ್ತೀರಬೇಕು.

ವಿದ್ಯಾಕಾಶಿ ಕರಿಯರ್ ಅಕಾಡೆಮಿಯು ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಪ್ರಮುಖ ವಿಷಯಗಳ ಪುಸ್ತಕಗಳನ್ನು ಹೊರತಂದಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಸಂಸ್ಥೆಯ ಪುಸ್ತಕ ಮಳಿಗೆಯಲ್ಲಿ 50% ರಿಯಾಯತಿಯಲ್ಲಿ ಪುಸ್ತಕಗಳನ್ನು ಪಡೆಯಬಹುದು.

ಈ ತಿಂಗಳಿನಿಂದ ಪ್ರತಿ ತಿಂಗಳು ವಿದ್ಯಾಕಾಶಿ ಕರೆಂಟ್ ಅಫೇರ್ಸ್ ಪತ್ರಿಕೆಯು ನಿಮ್ಮ ಮುಂದೆ ಬರಲಿದೆ. ಪ್ರಚಲಿತ ಘಟನೆಗಳ ವಿಷಯಗಳ ಕಣಜ ಇದಾಗಿದೆ. ನಿಮ್ಮ ಪ್ರೋತ್ಸಾಹ ಇದೇ ರೀತಿ ಮುಂದೆವರೆಯಲೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇಂತಿ ತಮ್ಮ

ಧನ್ಯವಾದಗಳೊಂದಿಗೆ

ಶ್ರೀ ಮಲ್ಲಿಕಾರ್ಜುನಗೌಡ ಪೋಲೀಸ್‌ಪಾಟೀಲ್

ಪ್ರದಾನ ಸಂಪಾದಕರು ಮತ್ತು ನಿರ್ದೇಶಕರು

ವಿದ್ಯಾಕಾಶಿ ಕರಿಯರ್ ಅಕಾಡೆಮಿ, ಧಾರವಾಡ

# ಒಳಪುಟಗಳಲ್ಲಿ


ಜೀವಧ್ವನಿ.............................................................

ಸಂಪಾದಕೀಯ ..........................................................1

ಪರಿವಿಡಿ..................................................................2

ಭಾರತದ 15ನೇ ರಾಷ್ಟ್ರಪತಿ ದ್ರೌಪದಿ ಮುರ್ಮು.................3

ಶಿಂಜೋ ಅಬೆ ನಿಧನ......................................................6

ನಾಲ್ವರು ರಾಜ್ಯಸಭೆಗೆ ನಾಮನಿರ್ದೇಶನ.........................9

2022ರ ಫೀಲ್ಡ್ಸ್ ಪದಕ...............................................13

68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ..............................14

ಯುಎಸ್‌ಎ ಗೆ 120ಟನ್ ತಂಬಾಕು ರಫ್ತು.........................15

ಅಲ್ಲೂರಿ ಸೀತಾರಾಮ ರಾಜು ಅವರ 30ಅಡಿ ಪ್ರತಿಮೆ.......16

ನೂತನ ಸಂಸತ್ ಭವನಕ್ಕೆ ರಾಷ್ಟ್ರಲಾಂಛನ......................17

ರಾಷ್ಟ್ರೀಯ ಪ್ರಚಲಿತ ಘಟನೆಗಳು...........................19–33

ರಾಜ್ಯ ಪ್ರಚಲಿತ ಘಟನೆಗಳು..................................34–42

ಅಂತರಾಷ್ಟ್ರೀಯ ಪ್ರಚಲಿತ ಘಟನೆಗಳು...................43–54

ಪ್ರಮುಖ ದಿನಾಚರಣೆಗಳು..........................................55–59

ಕ್ರೀಡಾ ಸುದ್ದಿಗಳು.................................................60–62

ಚುಟುಕು ಪ್ರಚಲಿತ ಘಟನೆಗಳು...............................63–64

**ವಿಶೇಷ ಸುದ್ದಿಗಳು**

ಗುಜರಾತ್‌ನಲ್ಲಿ 36ನೇ ರಾಷ್ಟ್ರೀಯ ಕ್ರೀಡಾಕೂಟ

ಕಾರ್ಗಿಲ್ ವಿಜಯ್ ದಿವಸ್

ಲಂಕಾ ಆರ್ಥಿಕ ಬಿಕ್ಕಟ್ಟು

I2U2 ಅಂತರಾಷ್ಟ್ರೀಯ ಸಂಘಟನೆ

2022ರ ಜಾಗತಿಕ ಲಿಂಗ ಸಮಾನತೆ ಸೂಚ್ಯಂಕ

2021ರ ಆವಿಷ್ಕಾರ ಸೂಚ್ಯಂಕ–ನೀತಿ ಆಯೋಗ

ಕಸ್ತೂರಿರಂಗನ್ ವರದಿಗೆ ಕರ್ನಾಟಕ ವಿರೋಧ

ರಾಮ್‌ಸಾರ್ ತಾಣಗಳ ಸಂಖ್ಯೆ 49 ರಿಂದ 54ಕ್ಕೆ ಏರಿಕೆ



ವಿದ್ಯಾಕಾಶಿ ಕರಿಯರ್ ಅಕಾಡೆಮಿ

*Today's Reader Tomorrow's Leader*

KAS/PSI ಸ್ಟಡಿ ಸರ್ಕಲ್, ಧಾರವಾಡ

ಮಲ್ಲಿಕಾರ್ಜುನಗೌಡ ಪೋಲಿಸ್‌ಪಾಟೀಲ
ನಿರ್ದೇಶಕರು

# ವೀರ ಹೈಟ್ಸ್, ಪರಿಸರ ಭವನದ ಹತ್ತಿರ,
ಶ್ರೀನಗರ ಕ್ರಾಸ್, ಧಾರವಾಡ

**ಮೊ: 9611904354, 9611789853, 9611519475**

KAS/PSI, PDO/Grade-I, FDA/SDA, RRB, Group-C, PC, SSC, Postal Assistant, etc

**ಹೊಸ ಬ್ಯಾಚ್‌ಗೆ ಪ್ರವೇಶಾತಿ ಪ್ರಾರಂಭ**



ನಮ್ಮ ಸಂಸ್ಥೆಯ ವೈಶಿಷ್ಟ್ಯತೆಗಳು

ಪ್ರತಿಯೊಬ್ಬ ವಿದ್ಯಾರ್ಥಿಗೂ ವೈಯಕ್ತಿಕ ಮಾರ್ಗದರ್ಶನ ಸಲಹೆ
24x7 ಗ್ರಂಥಾಲಯ ವ್ಯವಸ್ಥೆ
ಎಲ್ಲ ವಿಷಯವಾರು ನೋಟ್ಸ್ ಬರೆಸಲಾಗುವುದು
ಆಧ್ಯಾತ್ಮಿಕ ಸಮಾಲೋಚನೆ, ಪ್ರತಿ ರವಿವಾರ ಮಾದರಿ ಪರೀಕ್ಷೆಗಳು
ಉಚಿತ ದೈಹಿಕ ತರಬೇತಿ
ಬೆಂಗಳೂರು & ಧಾರವಾಡದ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ
ಪ್ರತಿನಿತ್ಯ 8 ಗಂಟೆಗಳ ತರಬೇತಿ

**ನಿಮ್ಮ ಯಶಸ್ಸಿನ ದಾರಿದೀಪ**
**ನಿಮ್ಮ ವಿದ್ಯಾಕಾಶಿ ಕರಿಯರ್ ಅಕಾಡೆಮಿ**

ಮೊದಲು ಬಂದ 50 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ

**ಮೊ: 9611904354, 9611789853, 9611519475**

ನೂರಕ್ಕೆ ನೂರರಷ್ಟು ಫಲಿತಾಂಶ

ಒಂದು ಬಾರಿ ಪ್ರವೇಶ ಪಡೆದರೆ ಸರ್ಕಾರಿ ಹುದ್ದೆ ಸಿಗುವವರೆಗೂ ತರಬೇತಿ

# ಭಾರತದ 15ನೇ ರಾಷ್ಟ್ರಪತಿ ಆಗಿ ದ್ರೌಪದಿ ಮುರ್ಮು ಆಯ್ಕೆ



ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮ ಭಾರತದ 15ನೇ ರಾಷ್ಟ್ರಪತಿ ಆಗಿ ಆಯ್ಕೆಯಾಗಿದ್ದಾರೆ. ಹಾಗೂ ಇದು 16ನೇ ರಾಷ್ಟ್ರಪತಿ ಚುನಾವಣೆಯಾಗಿದೆ. ಈ ಗೆಲುವಿನ ಮೂಲಕ ದೇಶದ ಉನ್ನತ ಹುದ್ದೆಯನ್ನು ಲಂಕರಿಸಿದ ಬುಡಕಟ್ಟು ಜನಾಂಗದ ಮೊದಲ ಮತ್ತು ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ ಎರಡನೇ ಮಹಿಳೆ ಎಂಬ ಹೆಗ್ಗಳಿಕೆಗೆ ಮುರ್ಮು ಪಾತ್ರವಾಗಿದ್ದಾರೆ. 2007 ಜುಲೈ 25ರಂದು ಪ್ರತಿಭಾ ಪಾಟೀಲ್ ರಾಷ್ಟ್ರಪತಿ ಆಗಿದ್ದರು. ಒಡಿಶಾದ 'ಸಂತಾಲರ ಬುಡಕಟ್ಟು' ಜನಾಂಗದವರು ಮುರ್ಮು, ದೇಶದ ಅತ್ಯಂತ ಕಿರಿಯ ರಾಷ್ಟ್ರಪತಿ ಹುದ್ದೆ ಅಲಂಕರಿಸಿರುವ ಹಿರಿಮೆಗೂ ಅವರು ಪಾತ್ರರಾಗಿದ್ದಾರೆ. ದ್ರೌಪದಿ ಮುರ್ಮು ಅವರು 5,77,777 ಮೌಲ್ಯದ 2161 ಮತಗಳನ್ನು ಪಡೆದರೆ, ವಿರೋಧ ಪಕ್ಷದ ಅಭ್ಯರ್ಥಿ ಯಶವಂತ್ ಸಿನ್ಹಾ 2,61,062 ಮೌಲ್ಯದ 1058 ಮತಗಳನ್ನು ಪಡೆಯುವ ಮೂಲಕ ಭಾರಿ ಅಂತರದ ಗೆಲುವು ದಾಖಲಿಸಿದ್ದಾರೆ.

ಜುಲೈ 24ರಂದು ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ರಾಷ್ಟ್ರಪತಿ ಹುದ್ದೆಯಿಂದ ನಿವೃತ್ತರಾದರು, ಜುಲೈ 25 ರಂದು ಹೊಸ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಅಧಿಕಾರ ಸ್ವೀಕರಿಸಿದ್ದಾರೆ.

**ನೂತನ ರಾಷ್ಟ್ರಪತಿ ಕುರಿತ ಪ್ರಮುಖ ಅಂಶಗಳು**

- ಮುರ್ಮು ಅವರು 1958ರ ಜೂನ್ 20ರಂದು ಒಡಿಸ್ಸಾದ ಸಂತಾಲಾ ಬುಡಕಟ್ಟು ಕುಟುಂಬದಲ್ಲಿ ಜನಿಸಿದರು. ಅವರು ಸಂತಾಲಿ ಮತ್ತು ಒಡಿಯಾ ಭಾಷೆಗಳಲ್ಲಿ ಅದ್ಭುತವಾಗಿ ಮಾತನಾಡಬಲ್ಲವಾಗ್ಮಿ,
- 1997ರಲ್ಲಿ ರಾಜಕೀಯ ಪ್ರವೇಶಿಸುವ ಮುನ್ನ ಮುರ್ಮು ಶಿಕ್ಷಕಿಯಾಗಿದ್ದರು,
- 2000ನೇ ಇಸವಿಯಲ್ಲಿ ಮಯೂರ್‌ಭಂಜ್ ಜಿಲ್ಲೆಯ ರಾಯರಂಗ್‌ಪುರದಲ್ಲಿ ಮೊದಲ ಬಾರಿಗೆ ಶಾಸಕಿಯಾಗಿ ಆಯ್ಕೆಯಾಗಿದ್ದರು,
- 2000ರಿಂದ 2002ರ ಅವಧಿಯಲ್ಲಿ ಬಿಜೆಪಿ ಮತ್ತು ಬಿಜೆಡಿ ಸಮ್ಮಿಶ್ರ ಸರ್ಕಾರದಲ್ಲಿ ವಾಣಿಜ್ಯ ಮತ್ತು ಸಾರಿಗೆ ಸಚಿವರಾಗಿ, 2002ರಿಂದ 2004 ಅವಧಿಯಲ್ಲಿ ಮೀನುಗಾರಿಕೆ ಮತ್ತು ಪ್ರಾಣಿ ಸಂಪನ್ಮೂಲ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.
- ಒಡಿಶಾ ಬಿಜೆಪಿಯ ಎಸ್‌ಟಿ ಮೋರ್ಚಾ ಉಪಾಧ್ಯಕ್ಷೆಯಾಗಿ, ಮಯೂರ್‌ಭಂಜ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.
- ಜಾರ್ಖಂಡ್‌ನ ಮೊದಲ ಮಹಿಳಾ ರಾಜ್ಯಪಾಲರಾಗಿ 2015ರಲ್ಲಿ ಅಧಿಕಾರ ವಹಿಸಿಕೊಂಡಿದ್ದರು, ಇದರೊಂದಿಗೆ ರಾಜ್ಯಪಾಲರಾಗಿ ನೇಮಕಗೊಂಡ ಬುಡಕಟ್ಟು ಸಮುದಾಯದ ಮೊದಲ ವ್ಯಕ್ತಿ.

## ರಾಷ್ಟ್ರಪತಿ ಚುನಾವಣೆ ಹೇಗೆ ನಡೆಯುತ್ತದೆ?

ಹಾಲಿ ರಾಷ್ಟ್ರಪತಿಗಳ ಅಧಿಕಾರ ಅವಧಿ ಪೂರ್ಣಗೊಳ್ಳುವ ಮುನ್ನವೇ, ಹೊಸ ರಾಷ್ಟ್ರಪತಿ ಆಯ್ಕೆಗೆ ದಿನಾಂಕ ನಿಗದಿ ಮಾಡಲಾಗುತ್ತದೆ. ಕೇಂದ್ರ ಚುನಾವಣೆ ಆಯೋಗವು ಈ ದಿನಾಂಕವನ್ನು ನಿಗದಿ ಮಾಡುತ್ತದೆ. ಇನ್ನೂ ರಾಷ್ಟ್ರಪತಿ ಹುದ್ದೆಗೆ ನಾಮಪತ್ರ ಸಲ್ಲಿಸುವ ಅಭ್ಯರ್ಥಿ 15 ಸಾವಿರ ರೂಪಾಯಿ ಠೇವಣಿ ಇಡಬೇಕಾಗುತ್ತದೆ.

**ಅರ್ಹತೆ:**

- ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸುವವರು ಭಾರತದ ಪ್ರಜೆಯಾಗಿರಬೇಕು.
- 35 ವರ್ಷ ವಯಸ್ಸು ದಾಟಿರಬೇಕು.
- ಲೋಕಸಭೆಗೆ ಸ್ಪರ್ಧಿಸುವ ಎಲ್ಲ ಅರ್ಹತೆಗಳನ್ನು ಹೊಂದಿರಬೇಕು.
- ಇನ್ನೂ ಯಾವುದೇ ಸರ್ಕಾರಿ ಉದ್ಯೋಗದಲ್ಲಿ ಇರಬಾರದು.

**ರಾಷ್ಟ್ರಪತಿ ಚುನಾವಣೆ ವಿಧಾನ:**

- ಸಂವಿಧಾನದ ವಿಧಿ 54ರ ಪ್ರಕಾರ ರಾಷ್ಟ್ರಪತಿ ಚುನಾವಣೆ ನಡೆಯುತ್ತದೆ.
- ಯಾರು ಮತ ಚಲಾಯಿಸುತ್ತಾರೆ ? ಸಂಸತ್ತಿನ ಉಭಯ ಸದನಗಳಾದ ಲೋಕಸಭೆ, ರಾಜ್ಯಸಭೆ ಸಂಸದರು, ರಾಜ್ಯ. & ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ವಿಧಾನಸಭೆಯ ಚುನಾಯಿತ ಸದಸ್ಯರಿಂದ ಮಾತ್ರ ಮತದಾನ ನಡೆಯುತ್ತದೆ. ವಿಧಾನಪರಿಷತ್ ಸದಸ್ಯರು, ನಾಮಕರಣಗೊಂಡ ಸಂಸದರು, ಶಾಸಕರಿಗೆ ಮತದಾನದ ಹಕ್ಕಿಲ್ಲ.
- ರಾಷ್ಟ್ರಪತಿ ಹುದ್ದೆಯ ಅಭ್ಯರ್ಥಿಗೆ ನಾಮಪತ್ರ ಸಲ್ಲಿಕೆ ವೇಳೆ 50 ಮಂದಿ ಮತದಾರರು ಸೂಚಕರಾಗಿ, 50 ಮಂದಿ ಅನುಮೋದಕರಾಗಿ ಸಹಿ ಮಾಡಬೇಕಾಗುತ್ತದೆ. ಮತಪತ್ರ ಮೂಲಕ ಮತದಾನ ನಡೆಯಲಿದೆ.
- ದೇಶದಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಸೇರಿ ಪ್ರಸ್ತುತ 776 ಸಂಸದರು ಮತ್ತು 4,120 ಶಾಸಕರಿದ್ದಾರೆ. 1971ರ ಜನಗಣತಿಯ ಆಧರಿಸಿ ಸಂಸದರು, ಶಾಸಕರ ಮತಮೌಲ್ಯ ನಿರ್ಧಾರ ಮಾಡಲಾಗುತ್ತದೆ. ರಾಜ್ಯದ ಜನಸಂಖ್ಯೆಯನ್ನು ಒಟ್ಟು ಶಾಸಕರ ಸಂಖ್ಯೆಯೊಂದಿಗೆ ಭಾಗಿಸಿ 1 ಸಾವಿರದೊಂದಿಗೆ ಗುಣಿಸಿದಾಗ ಶಾಸಕರ ಮತಮೌಲ್ಯ ಸಿಗುತ್ತದೆ.

**ಮತದಾನ ಮಾಡುವ ವಿಧಾನ**

- ರಹಸ್ಯ ಮತದಾನ ಮೂಲಕ ಮತದಾನವನ್ನು ಮಾಡಲಾಗುತ್ತದೆ. ಸದಸ್ಯರು ಯಾವುದೇ ಪಕ್ಷದ ಮತನಿರ್ದೇಶನ(ವಿಪ್)ಗಳಿಂದ ಬಂಧಿಸಲ್ಪಡುವುದಿಲ್ಲ.
- ಎಮ್ಎಲ್ಎಗಳ ಮತಗಳ ಮೌಲ್ಯ ಜನಸಂಖ್ಯಾ ಅನುಸಾರವಾಗಿ ಆಯಾ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಆದರೆ ಎಂಪಿಗಳ ಮತಗಳ ಮೌಲ್ಯವನ್ನು ನಿಗದಿಪಡಿಸಲಾಗಿದೆ ಇಲ್ಲಿ ಪ್ರತಿ ಸಂಸದರ ಮತ ಮೌಲ್ಯ 708 ಆಗಿದೆ. ಎಮ್ಎಲ್ಎಗಳ ಮತಗಳ ಮೌಲ್ಯದಲ್ಲಿ ಅತಿ ಹೆಚ್ಚು ಎಮ್.ಎಲ್.ಎ ಮತ ಮೌಲ್ಯ ಹೊಂದಿದ ರಾಜ್ಯ ಉತ್ತರಪ್ರದೇಶ
- ಕರ್ನಾಟಕದಲ್ಲಿ ಒಬ್ಬ ವಿಧಾನ ಸಭಾ ಸದಸ್ಯನ ಮತದ ಮೌಲ್ಯ 131 ಆಗಿದೆ. ರಾಜ್ಯದ ಒಟ್ಟಾರೆ ಮೌಲ್ಯ 224(ಒಟ್ಟು ಶಾಸಕರು)131(ಮತದಮೌಲ್ಯ=29344,
- ಏಕೈಕ ವರ್ಗಾವಣೆ ಮಾಡಬಹುದಾದ ಮತಗಳ ಮೂಲಕ ಪ್ರಮಾಣಾನುಗುಣ ಪ್ರಾತಿನಿಧ್ಯದ ವ್ಯವಸ್ಥೆಗೆ ಅನುಗುಣವಾಗಿ ಚುನಾವಣೆ ನಡೆಯುತ್ತದೆ.

**ಸಂವಿಧಾನದ ವಿಧಿಗಳಲ್ಲಿ ದೇಶದ ಮೊದಲ ಪ್ರಜೆ।**

| ವಿಧಿ | ವಿವರ | ವಿಧಿ | ವಿವರ |
|---|---|---|---|
| 52 | ರಾಷ್ಟ್ರಕೊಬ್ಬ ರಾಷ್ಟ್ರಪತಿ ಇರಬೇಕು | 71 | ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿದ ವಿಷಯಗಳು |
| 53 | ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರ | | |
| 54 | ರಾಷ್ಟ್ರಪತಿ ಚುಣಾವಣೆ | 72 | ಕ್ಷಮಾದಾನ ಇತ್ಯಾದಿಗಳನ್ನು ನೀಡಲು ಕೆಲವು ಪ್ರಕರಣಗಳಲ್ಲಿ ಶಿಕ್ಷೆಯನ್ನು ಅಮಾನತುಗೊಳಿಸಲು, ಬದಲಾಯಿಸಲು ರಾಷ್ಟ್ರಪತಿಗಿರುವ ಅಧಿಕಾರ |
| 55 | ರಾಷ್ಟ್ರಪತಿ ಚುಣಾವಣೆಯ ವಿಧಾನ | | |
| 57 | ಮರುಚುಣಾವಣೆಯ ಅರ್ಹತೆ | | |
| 59 | ರಾಷ್ಟ್ರಪತಿ ಅಧಿಕಾರದ ಷರತ್ತುಗಳು | | |
| 61 | ರಾಷ್ಟ್ರಪತಿ ವಿರುದ್ಧ ದೋಷಾರೋಪಣೆ | 123 | ಸಂಸತ್ತು ವಿಆಮದಲ್ಲಿರುವ ಸಂದರ್ಭದಲ್ಲಿ ಸುಗ್ರೀವಾಜ್ಞೆಗಳನ್ನು ಹೊರಡಿಸಲು ಅಧಿಕಾರ |
| 62 | ರಾಷ್ಟ್ರಪತಿ ಕಚೇರಿಯಲ್ಲಿ ಖಾಲಿ ಇರುವ ಸ್ಥಾನ ತುಂಬಲು ಚುನಾವಣೆ ನಡೆಸುವ ಸಮಯ ಮತ್ತು ಅಧಿಕಾರದ ಅವಧಿ | 143 | ಸುಪ್ರಿಂ ಕೋರ್ಟ ಜತೆ ಸಮಾಲೋಚಿಸಲು ರಾಷ್ಟ್ರಪತಿಗಿರುವ ಅಧಿಕಾರ |
| 70 | ತುರ್ತು ಸಂದರ್ಭದಲ್ಲಿ ರಾಷ್ಟ್ರಪತಿ ಕಾರ್ಯನಿರ್ವಹಣೆ | 352 | ರಾಷ್ಟ್ರೀಯ ತುರ್ತು ಪರಿಸ್ಥಿತಿ |
| | | 356 | ರಾಷ್ಟ್ರಪತಿ ಆಡಳಿತ |
| | | 360 | ಆರ್ಥಿಕ ತುರ್ತು ಪರಿಸ್ಥಿತಿ |

**ರಾಜೀನಾಮೆ: ರಾಷ್ಟ್ರಪತಿಗಳು ತಮ್ಮ ರಾಜೀನಾಮೆಯನ್ನು ಉಪರಾಷ್ಟ್ರಪತಿಗಳಿಗೆ ನೀಡುತ್ತಾರೆ.**

60 ನೇ ವಿಧಿ ಪ್ರಮಾಣವಚನ: ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಥವಾ ಅವರ ಗೈರು ಹಾಜರಿಯಲ್ಲಿ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯು ರಾಷ್ಟ್ರಾಧ್ಯಕ್ಷರಿಗೆ ಪ್ರಮಾಣವಚನ ಭೋದಿಸುತ್ತಾರೆ. 61 ನೇ ವಿದಿ ಮಹಾಭಿಯೋಗ: ರಾಷ್ಟ್ರಾಧ್ಯಕ್ಷರನ್ನು ಸಂವಿಧಾನದ ಉಲ್ಲಂಘನೆಗಾಗಿ ಮಹಾಭಿಯೋಗದ ಮೂಲಕ ಪದಚ್ಯುತಿಗೆ ರಾಷ್ಟ್ರಾಧ್ಯಕ್ಷರ ಪದಚ್ಯುತಿಗೊಳಿಸಬಹುದು. ಸಂಸತ್ತಿನ ಯಾವುದಾದರೂ ಒಂದು ಸದನ ಮುರಿದಾಗಬಹುದು.ಅಂತಹ ಸಮಯದಲ್ಲಿ ಸಂಸತ್ತು ಇವರ ವಿರುದ್ಧ ದೋಷಾರೋಪಣೆ ಮಾಡಿ ಯಾವುದೇ ಒಂದು ಸದನದ ಒಟ್ಟು ಸದಸ್ಯರ ಪೈಕಿ 1/4 ರಷ್ಟು ಸದಸ್ಯರು ಸಹಿ ಮಾಡಿ ಒಂದು ಅಖಿತ ರೂಪದ ನೋಟಿಸನ್ನು 14 ದಿನಗಳ ಮುಂಚಿತವಾಗಿ ನೀಡಬೇಕು, ನಂತರ ರಾಷ್ಟ್ರಾಧ್ಯಕ್ಷರಿಗೆ ದೋಷಾರೋಪಣೆ ನಿರ್ಣಯವನ್ನು ಸಂಸತ್ತು ಪ್ರತ್ಯೇಕವಾಗಿ ಎರಡೂ ಸದನಗಳಲ್ಲಿ 2/3 ರಷ್ಟು ಸದಸ್ಯರು ಬಹುಮತದಿಂದ ಅಂಗೀಕರಿಸಿದರೆ, ರಾಷ್ಟ್ರಪತಿ ತಮ್ಮ ಸ್ಥಾನವನ್ನು ಕಳೆದುಕೊಳ್ಳುವರು. ಭಾರತದಲ್ಲಿ ಇಲ್ಲಿಯವರೆಗೆ ಯಾವ ರಾಷ್ಟ್ರಾಧ್ಯಕ್ಷರನ್ನೂ ಪದಚ್ಯುತಿಗೊಳಿಸಿಲ್ಲ.

**ರಾಷ್ಟ್ರಪತಿಯರು ಅಧಿಕಾರಗಳು:**

- ಕೇಂದ್ರ ಸರಕಾರದ ಎಲ್ಲ ವ್ಯವಹಾರಗಳು ನಡೆಯುವುದು ರಾಷ್ಟ್ರಪತಿಗಳ ಹೆಸರಿನಲ್ಲಿ ನಡೆಯುತ್ತದೆ.
- ಭಾರತದ ರಕ್ಷಣಾ ಪಡೆಯ ಮಹಾದಂಡನಾಯಕರಾಗಿರುತ್ತಾರೆ.
- ಭೂಸೇನೆ, ವಾಯು, ನೌಕಾಪಡೆಗಳ ಮುಖ್ಯಸ್ಥರನ್ನು ನೇಮಿಸುವ ಅಧಿಕಾರ,ಸಂಸತ್‌ನಲ್ಲಿ ವಾಸ್ ವಿಧೇಯಕಕ್ಕೆ ಒಪ್ಪಿಗೆ ನೀಡುವುದು ಅಥವಾ ತಿರಸ್ಕರಿಸುವ ಅಧಿಕಾರ
- ಕೋರ್ಟ್‌ನಿಂದ ಮರಣದಂಡನೆಗೆ ಗುರಿಯಾದ ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸುವುದು ಅಥವಾ ಕ್ಷಮಿಸುವುದು, ಶಿಕ್ಷೆ ಮುಂದೂಡುವುದು ಅಥವಾ ಕಡಿಮೆ ಮಾಡುವ ಅಧಿಕಾರ
- ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಾಗ ರಾಷ್ಟ್ರಪತಿ ಆಡಳಿತಕ್ಕೆ ಸಮ್ಮತಿಸುವುದು.
- ಅಂತಾರಾಷ್ಟ್ರೀಯ ಒಪ್ಪಂದಗಳು ನಡೆಯುವುದು ರಾಷ್ಟ್ರಪತಿ ಅವರ ಹೆಸರಿನಲ್ಲಿ ವಿವಿಧ ದೇಶಗಳಿಗೆ ರಾಯಭಾರಿ, ಕಮಿಷನರ್ ಗಳನ್ನು ಕಳಿಸುವುದು ಮತ್ತು ವಾವಸು ಕರೆಸಿಕೊಳ್ಳುವುದು.
- ಪ್ರಧಾನಮಂತ್ರಿಯ ನೇಮಕ, ಪ್ರಧಾನಿಯ ಸಲಹೆಯ ಮೇರೆಗೆ ಇತರ ಸಚಿವರ ನೇಮಕ ಅಧಿಕಾರ, ರಾಜ್ಯಗಳಿಗೆ ರಾಜ್ಯಪಾಲರನ್ನು ನೇಮಿಸುವುದು,
- ಅಟಾರ್ನಿ ಜನರಲ್‌ರನ್ನು ನೇಮಿಸುವುದು, ಅವರ ವೇತನವನ್ನು ನಿರ್ಧರಿಸುವುದು,
- ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರ ನೇಮಕ ಅಧಿಕಾರ,

# ಭಾರತದ 'ಡಿಯರ್ ಫ್ರೆಂಡ್' ಶಿಂಜೋ ಅಬೆ ಇನ್ನಿಲ್ಲ.



ವಿಶ್ವದ ಪ್ರಭಾವಿ ನಾಯಕರಲ್ಲಿ ಒಬ್ಬರಾಗಿದ್ದ. ಜಪಾನ್‌ನ ಮಾಜಿ ಪ್ರಧಾನ ಮಂತ್ರಿ ಶಿಂಜೋ ಅಬೆನಿಧನರಾಗಿದ್ದಾರೆ. ಭಾಷಣ ಮಾಡುತ್ತಿದ್ದಾಗಲೇ ನರಾ ಎಂಬ ನಗರದ ನಿವಾಸಿ 'ಟೆಸ್ಯೋ ಯಮಗಾಮಿ' ಶಿಂಜೋ ಅಬೆ ಮೇಲೆ ಗುಂಡು ಹಾರಿಸಿದ್ದ. ಈ ವೇಳೆ ಶಿಂಜೋ ಅಬೆ ಅವರಿಗೆ ಹೃದಯಾಘಾತವೂ ಉಂಟಾಗಿದೆ. ಬಳಿಕ ತಜ್ಞ ವೈದ್ಯರು ಚಿಕಿತ್ಸೆ ನೀಡಿ, ಅವರನ್ನು ಉಳಿಸಿಕೊಳ್ಳಲು ಶತಾಯ ಗತಾಯ ಪ್ರಯತ್ನಿಸಿದ್ದರು. ಆದರೆ ಎಲ್ಲಾ ಪ್ರಯತ್ನಗಳು ವಿಫಲವಾದವು. ಚಿಕಿತ್ಸೆ ಫಲಿಸದೇ ಶಿಂಜೋ ಅಬೆ ಮೃತಪಟ್ಟಿದ್ದಾರೆ. ಅವರ ನಿಧನದ ಸುದ್ದಿ ಕೇಳಿ ಇಡೀ ವಿಶ್ವವೇ ಬೆಚ್ಚಿ ಬಿದ್ದಿದೆ, ಕಂಬನಿ ಸುರಿಸಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಶಿಂಜೋ ಅಬೆ ನಿಧನಕ್ಕೆ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಭಾರತದ ಅತ್ಯುತ್ತಮ ಸ್ನೇಹಿ ರಾಷ್ಟ್ರದ ಮಾಜಿ ಮುಖ್ಯಸ್ಥ, ಪದ್ಮವಿಭೂಷಣ ಶಿಂಜೋ ಅಬೆ ನಿಧನಕ್ಕೆ ಭಾರತೀಯರೂ ಕೂಡ ಮರುಗಿದ್ದಾರೆ.

**ಶಿಂಜೋ ಅಬೆ ಯಾರು? ಅವರ ಹಿನ್ನೆಲೆ ಏನು?**

- ಶಿಂಜೋ ಅಬೆ 2ನೇ ವಿಶ್ವ ಸಮರದ ಬಳಿಕ ಜನಿಸಿದ ಮೊದಲ ಜಪಾನಿನ ಪ್ರಧಾನಿಯಾಗಿದ್ದರು. ಅವರು ಸೆಪ್ಟೆಂಬರ್ 21, 1954 ರಂದು ಟೋಕಿಯೊದಲ್ಲಿ ಜನಿಸಿದರು. ಅಬೆ ರಾಜಕೀಯ ಕುಟುಂಬದಿಂದ ಬಂದವರು. ಅವರ ಅಜ್ಜ ಕೂಡ ಪ್ರಧಾನಿಯಾಗಿದ್ದರು ಮತ್ತು ಅವರ ತಂದೆ ಮಾಜಿ ವಿದೇಶಾಂಗ ಸಚಿವರಾಗಿದ್ದರು. ಅಕಿ ಅಬೆಯನ್ನು ವಿವಾಹವಾಗಿರುವ ಶಿಂಜೋ ಅಬೆಗೆ ಮಕ್ಕಳಿರಲಿಲ್ಲ.
- ಖಾಸಗಿ ಕಂಪನಿಯ ಉನ್ನತ ಹುದ್ದೆಯಲ್ಲಿ ಇದ್ದರೂ, ಅದಕ್ಕೆ ರಾಜೀನಾಮೆ ನೀಡಿದರು. 1982 ರಲ್ಲಿ ವಿದೇಶಾಂಗ ಸಚಿವರಿಗೆ ಆಪ್ತ ಸಹಾಯಕನಾಗುವ ಅವಕಾಶ ಒದಗಿಬಂತು. ಆಗ ಶಿಂಜೋ ಅಬೆ ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತು ಪೂರ್ಣಪ್ರಮಾಣದ ರಾಜಕೀಯ ಬದುಕಿಗೆ ಹೊರಳಿದರು.
- ಲಿಬರಲ್ ಡೆಮೋಕ್ರಟಿಕ್ ಪಕ್ಷದ ನೇತಾರರಾಗಿರುವ ಅಬೆ, ಬಲಪಂಥೀಯ ವಿಚಾರಗಳ 'ನಿಪ್ಪೋನ್ ಕೈಗಿ' ಚಳುವಳಿಯ ಮೂಲಕ ಹೆಸರಾದವರು. ಶಿಂಜೋ ಅಬೆ ಅವರ ಅಜ್ಜ ನೊಬುಸುಕೆ ಕಿಷಿ ಅಂದರೆ, ತಾಯಿಯ ತಂದೆ 1957 ರಿಂದ 1960 ಅವಧಿಗೆ ಜಪಾನ್ ಪ್ರಧಾನಿಯಾಗಿದ್ದ ನೊಬುಸುಕೆ ಕಿಷಿ.
- ಶಿಂಜೋ ಅಬೆ ಅವರ ತಂದೆಯ ತಾತ ದ್ವಿತೀಯ ವಿಶ್ವಯುದ್ಧದಲ್ಲಿ ಜಪಾನಿನ ಸೇನಾಧಿಪತಿಯಾಗಿದ್ದ ಯೋಷಿಮಾಸ ಒಷಿಮಾ. ಜಪಾನ್ ಯುದ್ಧ ಸೋತ ನಂತರ ಕಿಷ್ಿರನ್ನು ಸುಗಮೋ ಸೆರೆಮನೆಯಲ್ಲಿ ಬಂಧನದಲ್ಲಿ ಇಡಲಾಗಿತ್ತು. ಹೀಗಾಗಿ ರಾಜಕೀಯ ಮತ್ತು ಹೋರಾಟ

**ಜಪಾನ್‌ನ ಅತೀ ದೀರ್ಘಾವಧಿಯ ಪ್ರಧಾನಿ :**

- ಜಪಾನ್‌ನ ದೀರ್ಘಾವಧಿಯ ಪ್ರಧಾನ ಮಂತ್ರಿ ಎಂಬ ಖ್ಯಾತಿ ಶಿಂಜೋ ಅಬೆ ಅವರದ್ದಾಗಿದೆ. ಅಬೆ ಅವರು 2022 ಮತ್ತು 2020 ರ ನಡುವೆ ಎಂಟು ವರ್ಷಗಳ ಕಾಲ ಉನ್ನತ ಹುದ್ದೆಯನ್ನು ಅಲಂಕಿರಿಸಿದರು. ಅದಕ್ಕೂ ಮೊದಲು, 2006 ರಿಂದ 2007 ರವರೆಗೆ ಪ್ರಧಾನಿಯಾಗಿದ್ದರು. 2012 ರಲ್ಲಿ ಮತ್ತೆ ಅಧಿಕಾರಕ್ಕೆ ಬಂದರು. ಬಳಿಕ ಅನಾರೋಗ್ಯ ಕಾರಣದಿಂದ ಅಗಸ್ಟ್ 2020 ರಲ್ಲಿ ರಾಜೀನಾಮೆಯನ್ನು ಘೋಷಿಸಿದರು. ಅವರು ದೀರ್ಘಕಾಲದ ಕರುಳಿನ ಕಾಯಿಲೆಯಾದ ಅಲ್ಸರೇಟಿವ್ ಕೊಲೈಟಿಸ್ ನಿಂದ ಬಳಲುತ್ತಿದ್ದರು.
- ಅಬೆ ನಂತರ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ (ಎಲ್‌ಡಿಪಿ) ನಾಯಕ ಯೋಶಿಹೈಡ್ ಸುಗಾ ಅವರು ಅಧಿಕಾರಕ್ಕೆ ಬಂದರು. ನಂತರ ಅವರ ಬಳಿಕ ಫ್ಯೂಮಿಯೊ ಕಿಶಿಡಾ ಅವರು ಸದ್ಯ ಜಪಾನ್ ಪ್ರಧಾನಿ ಆಗಿದ್ದಾರೆ.

**ಅಬೆ ವಿವಾದಾತ್ಮಕ ನಿರ್ಧಾರ :**

ಅವರ ಹೆಚ್ಚು ವಿವಾದಾತ್ಮಕ ನಿರ್ಧಾರಗಳಲ್ಲಿ ಒಂದು ಸಂವಿಧಾನದ 9 ನೇ ವಿಧಿಯನ್ನು ಪರಿಷ್ಕರಿಸುವುದು. ಇದು "ಜಪಾನಿನ ಜನರು ಯುದ್ಧವನ್ನು ರಾಷ್ಟ್ರದ ಸಾರ್ವಭೌಮ ಹಕ್ಕು ಎಂದು ಶಾಶ್ವತವಾಗಿ ತ್ಯಜಿಸುತ್ತಾರೆ" ಎಂದು ಷರತ್ತು ವಿಧಿಸುತ್ತದೆ. ಎರಡನೆಯ ಮಹಾಯುದ್ಧದ ಅಂತ್ಯದ ನಂತರ ಹೊಸದಾಗಿ ರಚಿಸಲಾದ ಜಪಾನಿನ ಸಂವಿಧಾನಕ್ಕೆ ಈ ವಿಧಿಯನ್ನು ಸೇರಿಸಲಾಯಿತು. ಅಮೆರಿಕಾದ ನಿರ್ದೇಶನದ ಮೇರೆಗೆ ಸಂವಿಧಾನದಲ್ಲಿನ ಒಂದು ಷರತ್ತು ದೇಶವು ಸೈನ್ಯ, ನೌಕಾಪಡೆ ಅಥವಾ ವಾಯುಪಡೆಯನ್ನು ನಿರ್ವಹಿಸುವುದನ್ನು ನಿಷೇಧಿಸಿತು. ಇದು ಭಾರೀ ಸವಿದಾಕ್ಕೆ ಕಾರಣವಾಯ್ತು. ಯುದ್ಧವನ್ನು ಮಾಡುವುದು ಪ್ರತಿಯೊಂದು ಸ್ವತಂತ್ರ ರಾಷ್ಟ್ರದ ಹಕ್ಕು ಹಾಗಾಗಿ ಅದನ್ನು ಪರಿಷ್ಕರಿಸಬೇಕು ಎನ್ನುತ್ತಿದ್ದರು.

**ಭಾರತದೊಂದಿಗೆ ಅಬೆ ಸ್ನೇಹ ಸಂಬಂಧ :**

- ಶಿಂಜೋ ಅಬೆ, ಭಾರತದೊಂದಿಗೆ ಉತ್ತಮ ಸ್ನೇಹ ಸಂಬಂಧ ಹೊಂದಿದ್ದರು. ಭಾರತಕ್ಕೆ ಬುಲೆಟ್ ರೈಲು, ಜಪಾನ್ ಏ,ಡಿ,ಬಿಯಿಂದ ಹಲವು ಮೆಟ್ರೋ ರೈಲುಗಳಿಗೆ ಸುಲಭ ಸಾಲ ಹೀಗೆ ಹಲವು ಬಗೆಯಿಂದ ಸಹಾಯ ಮಾಡಿದರು.
- 2014 ರಲ್ಲಿ ಭಾರತದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿದ್ದರು. ಈ ಮೂಲಕ ಭಾರತದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗಿಯಾದ ಮೊದಲ ಜಪಾನಿನ ಪ್ರಧಾನಿ ಅವರೇ ಆಗಿದ್ದರು.
- 2006–07 ರಲ್ಲಿ ತಮ್ಮ ಮೊದಲ ಅವಧಿಯಲ್ಲಿ, ಅಬೆ ಭಾರತಕ್ಕೆ ಭೇಟಿ ನೀಡಿದರು. ಮತ್ತು ಸಂಸತ್ತನ್ನು ಉದ್ದೇಶಿಸಿ ಮಾತನಾಡಿದರು. ಬಳಿಕ ಅವರು ಮೂರು ಬಾರಿ ಭಾರತಕ್ಕೆ ಭೇಟಿ ನೀಡಿದರು. ಜನವರಿ 2014, ಡಿಸೆಂಬರ್ 2015 ಮತ್ತು ಸೆಪ್ಟೆಂಬರ್ 2017 ರಲ್ಲಿ ಭಾರತಕ್ಕೆ ಬಂದಿದ್ದರು.
- ಪ್ರಧಾನಿ ನರೇಂದ್ರ ಮೋದಿ ಮತ್ತು ಶಿಂಜೋ ಅಬೆ ಅತ್ಯುತ್ತಮ ಸ್ನೇಹಿತರಾಗಿದ್ದರು. ಮೋದಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ಶಿಂಜೋ ಅಬೆ ನೇತೃತ್ವದ ಸರ್ಕಾರ ಭಾರತದಲ್ಲಿ ಹಲವಾರು

ಹೂಡಿಕೆಗಳನ್ನು ಮಾಡಿತು. ಮುಂಬೈ, ಅಹಮದಾಬಾದ್ ಬುಲೆಟ್ ಟ್ರೇನ್. ದೇಶದ ವಿವಿಧ ನಗರಗಳ ಮೆಟ್ರೋ ರೈಲುಗಳ ನಿರ್ಮಾಣದಲ್ಲಿ ಜಪಾನ್ ಭಾಗಿಯಾಗಲು ಅಬೆ ಹಾಗೂ ಮೋದಿ ಅವರ ಒಪ್ಪಂದವೇ ಕಾರಣವಾಯಿತು.

- 2018ರಲ್ಲಿ ಭಾರತ ಪ್ರವಾಸದ ವೇಳೆ ನರೇಂದ್ರ ಮೋದಿ ಹಾಗೂ ಶಿಂಜೋ ಅಬೆ ಗಂಗಾ ನದಿ ತೀರದಲ್ಲಿ ಗಂಗಾ ಆರತಿಯಲ್ಲಿ ಭಾಗಿಯಾಗಿದ್ದ ಫೋಟೋ ಸಖತ್ ವೈರಲ್ ಆಗಿತ್ತು. ಈ ವೇಳೆ ಭಾರತದಲ್ಲಿ ಅಬೆ ಅವರ ರೋಡ್ ಶೋ ಕೂಡ ನಡೆದಿತ್ತು.
- ಈ ವರ್ಷದ ಮೇ 24 ರಂದು ಟೋಕಿಯೊದಲ್ಲಿ ಕ್ವಾಡ್ ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಅವರನ್ನು ಭೇಟಿಯಾದಾಗ ಮೋದಿಯವರ ಕೊನೆಯ ಭೇಟಿಯಾಗಿತ್ತು.
- ಭಾರತ ಸರ್ಕಾರವು 2021 ರ ಜನವರಿಯಲ್ಲಿ ಅಬೆ ಅವರಿಗೆ ದೇಶದ ಎರಡನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮವಿಭೂಷಣವನ್ನು ನೀಡಿ ಗೌರವಿಸಿತು.
- ಶಿಂಜೋ ಅಬೆ ಅವರ ಗೌರವಾರ್ಥ ಜುಲೈ 9 ರಂದು ಭಾರತ ಒಂದು ದಿನ ಶೋಕಾಚರಣೆ ಮಾಡಿತು.




# ವೀರೇಂದ್ರ ಹೆಗ್ಗಡೆ, ಇಳಯರಾಜ, ಪಿಟಿ ಉಷಾ, ವಿಜಯೇಂದ್ರ ಪ್ರಸಾದ್ – ರಾಜ್ಯಸಭೆಗೆ ನಾಮನಿರ್ದೇಶನ



ರಾಜ್ಯಸಭೆ ಚುನಾವಣೆ ಕೆಲ ದಿನಗಳ ಹಿಂದಷ್ಟೇ ಮುಗಿದಿದ್ದು, ಕೇಂದ್ರದ ಆಡಳಿತಾರೂಢ ಪಕ್ಷ ಬಿಜೆಪಿ ಭರ್ಜರಿ ಜಯ ಸಾಧಿಸಿತ್ತು ಇದೀಗ ರಾಜ್ಯಸಭೆಗೆ ನಾಲ್ವರು ಸಾಧಕರನ್ನು ಕೇಂದ್ರ ಸರ್ಕಾರ ನಾಮನಿರ್ದೇಶನ ಮಾಡಿದೆ. ಕರ್ನಾಟಕವನ್ನು ಪ್ರತಿನಿಧಿಸುವ, ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ತಮಿಳುನಾಡು ಮೂಲದ ಖ್ಯಾತ ಸಂಗೀತ ನಿರ್ದೇಶಕ ಇಳಯರಾಜ, ಕೇರಳದ ಮಾಜಿ ಅಥ್ಲೀಟ್ ಪಿಟಿ ಉಷಾ, ಆಂಧ್ರಪ್ರದೇಶ ಪ್ರತಿನಿಧಿಸುವ ಖ್ಯಾತ ನಿರ್ದೇಶಕ ರಾಜಮೌಳಿ ಅವರ ತಂದೆ, ಸಿನಿಮಾ ಕಥೆಗಾರರೂ ಆಗಿರುವ ವಿ. ವಿಜಯೇಂದ್ರ ಪ್ರಸಾದ್ ಸೇರಿದಂತೆ ನಾಲ್ವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಲಾಗಿದೆ.

## ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದ ಸಾಧಕರು :

**ವೀರೇಂದ್ರ ಹೆಗ್ಗಡೆಯವರು ಅವರ ಬಗ್ಗೆ :**

- ವೀರೇಂದ್ರ ಹೆಗ್ಗಡೆಯವರು ನವೆಂಬರ್ 25, 1948 ರಂದು ಜನಿಸಿದರು. ಅವರು 20 ವರ್ಷದವರಿರುವಾಗಲೆ ಮಂಜುನಾಥೇಶ್ವರ ದೇವಸ್ಥಾನದ ಧರ್ಮಾಧಿಕಾರಿಯಾದರು.
- ಸ್ವತಃ ಜೈನರಾಗಿ ಹಿಂದೂ ದೇವಸ್ಥಾನದ ಧರ್ಮದರ್ಶಿಯಾಗಿ ಕಾರ್ಯ ನಿರ್ವಹಿಸುವ ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳ ಕ್ಷೇತ್ರಕ್ಕೆ ಧಾರ್ಮಿಕ ಸಹಿಷ್ಣುತೆಯ ಕ್ಷೇತ್ರ ಎಂದು ಹೆಸರು ಬರುವಂತೆ ಮಾಡಿದ್ದಾರೆ. ಧರ್ಮಸ್ಥಳದ ಬೃಹತ್ ಬಾಹುಬಲಿಯ ವಿಗ್ರಹವನ್ನು ಕೆತ್ತಿಸಿ ಸ್ಥಾಪಿಸಿದವರು ಇವರೇ.
- ಧರ್ಮಸ್ಥಳದಲ್ಲಿ ಪ್ರತಿ ದಿನ ಆಗಮಿಸುವವರೆಲ್ಲರಿಗೂ ಉಚಿತ ಊಟದ ವ್ಯವಸ್ಥೆಯುಂಟು ಮಾಡಿದ್ದಾರೆ, ಪ್ರತಿ ದಿನವೂ ಸುಮಾರು 3000 ಜನರ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ವೀರೇಂದ್ರ ಹೆಗ್ಗಡೆಯವರು ಹಲವಾರು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. 1982 ರಲ್ಲಿ ಆರಂಭಿಸಲ್ಪಟ್ಟ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಪ್ರಸ್ತುತ 28 ಜಿಲ್ಲೆಗಳಲ್ಲಿ ಯೋಜನೆ ಇದೆ. ನಮ್ಮ ರಾಜ್ಯ ಅಲ್ಲದೇ ಪಕ್ಕದ ಕೇರಳ ರಾಜ್ಯಕ್ಕೂ ಯೋಜನೆ ವಿಸ್ತರಣೆಯಾಗಿದೆ. 1972 ರಲ್ಲಿ ಧರ್ಮಸ್ಥಳದಲ್ಲಿ 'ಸಾಮೂಹಿಕ ವಿವಾಹಗಳನ್ನು ಆರಂಭಿಸಿದರು. ಈಗ ವಾರ್ಷಿಕವಾಗಿ 500ಕ್ಕೂ ಹೆಚ್ಚು ದಂಪತಿಗಳು ಧರ್ಮಸ್ಥಳದಲ್ಲಿ ವಿವಾಹವಾಗುತ್ತಾರೆ.

ಆರೋಗ್ಯ ವಿಕಾಸಕ್ಕಾಗಿ ವೀರೇಂದ್ರ ಹೆಗ್ಗಡೆಯವರು ಬಹಳಷ್ಟು ದುಡಿದಿದ್ದಾರೆ. ಸಂಚಾರಿ ಆಸ್ಪತ್ರೆಗಳು, ಧರ್ಮಸ್ಥಳ ಮಂಜುನಾಥೇಶ್ವರ ವೈದ್ಯಕೀಯ ಸಂಸ್ಥೆಯವರು ನಡೆಸುವ ಕ್ಷಯರೋಗ ಚಿಕಿತ್ಸಾಲಯ (ಮಂಗಳೂರು), ಉಡುಪಿ ಮತ್ತು ಹಾಸನಗಳಲ್ಲಿ ಆಯುರ್ವೇದ ಆಸ್ಪತ್ರೆ, ಮಂಗಳೂರಿನ

ರಾಜ್ಯಸಭೆ ಚುನಾವಣೆ ಕೆಲ ದಿನಗಳ ಹಿಂದಷ್ಟೇ ಮುಗಿದಿದ್ದು, ಕೇಂದ್ರದ ಆಡಳಿತಾರೂಢ ಪಕ್ಷ ಬಿಜೆಪಿ ಭರ್ಜರಿ ಜಯ ಸಾಧಿಸಿತ್ತು ಇದೀಗ ರಾಜ್ಯಸಭೆಗೆ ನಾಲ್ವರು ಸಾಧಕರನ್ನು ಕೇಂದ್ರ ಸರ್ಕಾರ ನಾಮನಿರ್ದೇಶನ ಮಾಡಿದೆ. ಡಾ. ವೀರೇಂದ್ರ ಹೆಗ್ಗಡೆ, ಇಳಯರಾಜ, ಪಿಟಿ ಉಷಾ ಹಾಗೂ ವಿಜಯೇಂದ್ರ ಪ್ರಸಾದ್ ಸೇರಿದಂತೆ ನಾಲ್ವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಲಾಗಿದೆ.

## ವೀರೇಂದ್ರ ಹೆಗ್ಗಡೆಯವರು ಅವರ ಬಗ್ಗೆ :

- ವೀರೇಂದ್ರ ಹೆಗ್ಗಡೆಯವರು ನವೆಂಬರ್ 25, 1948 ರಂದು ಜನಿಸಿದರು. ಅವರು 20 ವರ್ಷದವರಿರುವಾಗಲೆ ಮಂಜುನಾಥೇಶ್ವರ ದೇವಸ್ಥಾನದ ಧರ್ಮಾಧಿಕಾರಿಯಾದರು.
- ಧರ್ಮಸ್ಥಳದಲ್ಲಿ ಪ್ರತಿ ದಿನ ಆಗಮಿಸುವವರೆಲ್ಲರಿಗೂ ಉಚಿತ ಊಟದ ವ್ಯವಸ್ಥೆಯುಂಟು ಮಾಡಿದ್ದಾರೆ, ಪ್ರತಿ ದಿನವೂ ಸುಮಾರು 3000 ಜನರ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ.



ವೀರೇಂದ್ರ ಹೆಗ್ಗಡೆಯವರು ಹಲವಾರು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡಿದ್ದಾರೆ. 1982 ರಲ್ಲಿ ಆರಂಭಿಸಲ್ಪಟ್ಟ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಪ್ರಸ್ತುತ 28 ಜಿಲ್ಲೆಗಳಲ್ಲಿ ಯೋಜನೆ ಇದೆ. ನಮ್ಮ ರಾಜ್ಯ ಅಲ್ಲದೇ ಪಕ್ಕದ ಕೇರಳ ರಾಜ್ಯಕ್ಕೂ ಯೋಜನೆ ವಿಸ್ತರಣೆಯಾಗಿದೆ. 1972 ರಲ್ಲಿ ಧರ್ಮಸ್ಥಳದಲ್ಲಿ 'ಸಾಮೂಹಿಕ ವಿವಾಹಗಳನ್ನು ಆರಂಭಿಸಿದರು. ಈಗ ವಾರ್ಷಿಕವಾಗಿ 500ಕ್ಕೂ ಹೆಚ್ಚು ದಂಪತಿಗಳು ಧರ್ಮಸ್ಥಳದಲ್ಲಿ ವಿವಾಹವಾಗುತ್ತಾರೆ.

ಆರೋಗ್ಯ ವಿಕಾಸಕ್ಕಾಗಿ ವೀರೇಂದ್ರ ಹೆಗ್ಗಡೆಯವರು ಬಹಳಷ್ಟು ದುಡಿದಿದ್ದಾರೆ. ಸಂಚಾರಿ ಆಸ್ಪತ್ರೆಗಳು, ಧರ್ಮಸ್ಥಳ ಮಂಜುನಾಥೇಶ್ವರ ವೈದ್ಯಕೀಯ ಸಂಸ್ಥೆಯವರು ನಡೆಸುವ ಕ್ಷಯರೋಗ ಚಿಕಿತ್ಸಾಲಯ (ಮಂಗಳೂರು), ಉಡುಪಿ ಮತ್ತು ಹಾಸನಗಳಲ್ಲಿ ಆಯುರ್ವೇದ ಆಸ್ಪತ್ರೆ, ಮಂಗಳೂರಿನ ಎಸ್‌ಡಿಎಮ್ ಕಣ್ಣಿನ ಆಸ್ಪತ್ರೆ ಮತ್ತು ದಂತ ಚಿಕಿತ್ಸಾಲಯ, ಯೋಗ ತರಬೇತಿ ಶಿಬಿರಗಳನ್ನು ನಡೆಸುತ್ತಾ ಬಂದಿದ್ದಾರೆ.

**<u>ವೀರೇಂದ್ರ ಹೆಗ್ಗಡೆಯವರ ಅವರಿಗೆ ಲಭಿಸಿದ ಪ್ರಶಸ್ತಿ–ಗೌರವಗಳು :</u>**

- 2015 ರಲ್ಲಿ ಭಾರತ ಸರಕಾರದಿಂದ ಪದ್ಮವಿಭೂಷಣ ಪ್ರಶಸ್ತಿ.
- 1985 ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ ಮತ್ತು ➢ 1993 ರಲ್ಲಿ ಅಂದಿನ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾರವರಿಂದ "ರಾಜರ್ಷಿ" ಗೌರವ ಇವರಿಗೆ ಸಂದಿವೆ.
- 1994 ರಲ್ಲಿ ಇಂದಿರಾ ಗಾಂಧಿ ಪ್ರಿಯದರ್ಶಿನಿ ಪ್ರಶಸ್ತಿ ದೊರಕಿತು.
- ಮಂಗಳೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಅನ್ನು ನೀಡಿದೆ.
- 2011 ರಲ್ಲಿ ರಾಜ್ಯದ ಅತ್ಯುನ್ನತ ಪ್ರಶಸ್ತಿಯಾದ **'ಕರ್ನಾಟಕ ರತ್ನ'** ನೀಡಿ ಪುರಸ್ಕರಿಸಲಾಗಿದೆ.
- 2011 ನೇ ಸಾಲಿನ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ.

## ಪಿಟಿ ಉಷಾ ಬಗ್ಗೆ :

27 ಜೂನ್ 1964 ಅವರು ಕೇರಳದ ಕೋಯಿಕ್ಕೋಡ್‌ನ ಕುಟ್ಟಲಿಯಲ್ಲಿ ಜನಿಸಿದರು. ಪಿಟಿ ಉಷಾ ಅವರು 1979 ರಿಂದ ಭಾರತೀಯ ಅಥ್ಲೆಟಿಕ್ಸ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದಾರೆ, 4 ಏಷ್ಯನ್ ಚಿನ್ನದ ಪದಕಗಳು ಮತ್ತು 7 ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ. ಆಕೆಯನ್ನು ಸಾಮಾನ್ಯವಾಗಿ 'ಭಾರತೀಯ ಟ್ರ್ಯಾಕ್ ಮತ್ತು ಫೀಲ್ಡ್ ರಾಣಿ' ಎಂದು ಕರೆಯಲಾಗುತ್ತದೆ.

ಪಿಟಿ ಉಷಾ ಅವರು 1985 ರಲ್ಲಿ ತಮ್ಮ ಯಶಸ್ಸಿನ ಉತ್ತುಂಗವನ್ನು ತಲುಪಿದ್ದರು. ಜಕಾರ್ತಾದಲಿ ನಡೆದ ಏಷ್ಯನ್ ಕೂಟದಲ್ಲಿ 100ಮೀ, 200ಮೀ, 400ಮೀ, ಹರ್ಡಲ್ಸ್ ಮತ್ತು 4x400ಮೀ ರಿಲೇಯಲ್ಲಿ ಐದು ಚಿನ್ನದ ಪದಕಗಳನ್ನು ಮತ್ತು 4 x100ಮೀ ರಿಲೇಯಲ್ಲಿ ಕಂಚಿನ ಪದಕವನ್ನು ಗಳಿಸಿದರು.

ಭಾರತ ಸರ್ಕಾರದಿಂದ ಭಾರತೀಯ ಕ್ರೀಡಾ ಗೌರವ **'ಅರ್ಜುನ ಪ್ರಶಸ್ತಿ'** ಮತ್ತು 1984 ರಲ್ಲಿ ಭಾರತೀಯ ನಾಗರಿಕ ಪ್ರಶಸ್ತಿ **"ಪದ್ಮಶ್ರೀ"** ನೀಡಿ ಗೌರವಿಸಲಾಯಿತು.

### ಪಿಟಿ ಉಷಾ ಅವರು ಪ್ರಶಸ್ತಿಗಳು ಮತ್ತು ಸಾಧನೆಗಳು :



- 1986ರ ಸಿಯೋಲ್ ಏಷ್ಯನ್ ಕ್ರೀಡಾಕೂಟದಲ್ಲಿ 'ಅಡೀಡಸ್ ಗೋಲ್ಡನ್ ಶೂ ಪ್ರಶಸ್ತಿ'ಯನ್ನು ನೀಡಲಾಯಿತು.
- ಎರಡು ಬಾರಿ ಅತ್ಯುತ್ತಮ ಆಥ್ಲೀಟ್‌ಗಾಗಿ ವಿಶ್ವ ಟ್ರೋಫಿಯನ್ನು 1985 ಮತ್ತು 1986 ರಲ್ಲಿ ಗೆದ್ದರು.
- 1986 ರಲ್ಲಿ ನಡೆದ 10ನೇ ಏಷ್ಯನ್ ಕ್ರೀಡಾಕೂಟದಲ್ಲಿ ಒಂದು ಬೆಳ್ಳಿ ಪದಕ ಮತ್ತು ನಾಲ್ಕು ಚಿನ್ನದ ಪದಕಗಳು
- 1990ರ ಏಷ್ಯನ್ ಕ್ರೀಡಾಕೂಟದಲ್ಲಿ 400ಮೀ ಮತ್ತು 4x100ಮೀ ರಿಲೇಯಲ್ಲಿ ಬೆಳ್ಳಿ ಪದಕಗಳು
- 1994 ರ ಏಷ್ಯನ್ ಕ್ರೀಡಾಕೂಟದಲ್ಲಿ 4x400 ಮೀ ರಿಲೇಯಲ್ಲಿ ಬೆಳ್ಳಿ ಪದಕ
- 1998 ರಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ 4 x100 ಮೀ ರಿಲೇಯಲ್ಲಿ ಚಿನ್ನದ ಪದಕವನ್ನು ಪಡೆದರು.
- 1984, 1985, 1986, 1987 ಮತ್ತು 1989 ರಲ್ಲಿ ಐದುಬಾರಿ 'ಏಷ್ಯಾದ ಅತ್ಯುತ್ತಮ ಅಥ್ಲೀಟ್ ಪ್ರಶಸ್ತಿ' ಪಡೆದರು.

## ಸಂಗೀತ ನಿರ್ದೇಶಕ ಇಳಯರಾಜ ಅವರ ಬಗ್ಗೆ:

ಪದ್ಮಭೂಷಣ ಪ್ರಶಸ್ತಿ ವಿಜೇತ ಇಳಯರಾಜ ಇವರು ಕನ್ನಡ, ತೆಲುಗು, ತಮಿಳು, ಚಿತ್ರಗಳ ಖ್ಯಾತ ಸಂಗೀತ ನಿರ್ದೇಶಕರಾಗಿದ್ದಾರೆ. ಇವರು ಜನಿಸಿದ್ದು 2 ಜೂನ್ 1943 ತಮಿಳುನಾಡಿನ ಪನ್ನೈಪುರಂನಲ್ಲಿ 1970 ದಿಂದ ಇವರು ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಲು ಪ್ರಾರಂಭಿಸಿದರು.

ಇವರು 8000 ಹಾಡುಗಳನ್ನು ಸಂಯೋಜನೆ ಮಾಡಿದ್ದಾರೆ. ಹಾಗೂ ಸುಮಾರು 1000

ಸಿನೆಮಾಗಳಲ್ಲಿ ತಮ್ಮ ಸಂಗೀತ ಮೋಡಿಯನ್ನು ತೋರಿಸಿದ್ದಾರೆ. ಕನ್ನಡ, ತೆಲುಗು, ತಮಿಳು, ಭಾಷೆಯಲ್ಲಿ ರಾಷ್ಟ್ರೀಯ & ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಇಳಯರಾಜ ಅವರಿಗೆ ಲಭಿಸಿದ ಪ್ರಶಸ್ತಿಗಳು :**

- ಪದ್ಮಭೂಷಣ ಪ್ರಶಸ್ತಿ.
- ನ್ಯಾಷನಲ್ ಫಿಲ್ಮ್ ಅವಾರ್ಡ್ಸ್
- ಇಂಟರ್ ನ್ಯಾಷನಲ್ ಫಿಲ್ಮ್ ಫೆಸ್ಟ್ ಅವಾರ್ಡ್ಸ್
- ಕೇರಳ ರಾಜ್ಯ ಫಿಲ್ಮ್ ಫೇರ್ ಅವಾರ್ಡ್
- ತಮಿಳುನಾಡು ರಾಜ್ಯ ಪ್ರಶಸ್ತಿ
- ತಮಿಳುನಾಡು ರಾಜ್ಯ ಫಿಲ್ಮ್ ಅವಾರ್ಡ್ಸ್
- ನಾರ್ವೆ ತಮಿಳ್ ಫಿಲ್ಮ್ ಫೆಸ್ಟಿವಲ್ ಅವಾರ್ಡ್ಸ್
- ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ

## ವಿಶ್ವ ವಿಜಯೇಂದ್ರ ಪ್ರಸಾದ್ ಅವರ ಬಗ್ಗೆ :

ಕೊಡೂರಿ ವಿಶ್ವ ವಿಜಯೇಂದ್ರ ಪ್ರಸಾದ್ ಅವರು ಭಾರತೀಯ ಚಿತ್ರಕಥೆಗಾರ ಮತ್ತು ಚಲನಚಿತ್ರ ನಿರ್ದೇಶಕರಾಗಿದ್ದು, ಕನ್ನಡ, ತಮಿಳು ಮತ್ತು ಹಿಂದಿ ಚಿತ್ರರಂಗದ ಜೊತೆಗೆ ತೆಲುಗು ಚಿತ್ರರಂಗದಲ್ಲಿ ಅವರ ಕೃತಿಗಳಿಗೆ ಹೆಸರುವಾಸಿಯಾಗಿದ್ದಾರೆ. ಅವರು ಇಪ್ಪತ್ತೈದಕ್ಕೂ ಹೆಚ್ಚು ಚಲನಚಿತ್ರಗಳಿಗೆ ಚಿತ್ರಕಥೆಗಾರರಾಗಿದ್ದಾರೆ, ಚಿತ್ರಕಥೆಗಾರರಾಗಿ ಅವರು ಮಾಡಿದ ಅತ್ಯದ್ಭುತ ಕೆಲವು ಚಿತ್ರಗಳು : ಬಾಹುಬಲಿ ಫ್ರ್ಯಾಂಚೈಸ್, ಬಜರಂಗಿ ಭಾಯಿಜಾನ್, ಮಣಿಕರ್ಣಿಕಾ: ದಿ ಕ್ವೀನ್ ಆಫ್ ಝಾನ್ಸಿ, ಮಗಧೀರ ಮತ್ತು ಮೆರ್ಸಲ್‌ನಂತಹ ಚಲನಚಿತ್ರಗಳನ್ನು ಒಳಗೊಂಡಿದೆ.

- ಜನನ : 1942 ಕೊವ್ವೂರು ನಲ್ಲಿ ಜನನ
- ಮಕ್ಕಳು : ಎಸ್.ಎಸ್. ರಾಜಮೌಳಿ
- ಪ್ರಶಸ್ತಿ & ಗೌರವಗಳು: ಅತ್ಯುತ್ತಮ ಕಥೆಗಾಗಿ ಫಿಲ್ಮ್ ಫೇರ್ ಪ್ರಶಸ್ತಿ, ಅತ್ಯುತ್ತಮ ಚಿತ್ರಕಥೆಗಾಗಿ ಗಿಲ್ಡ್ ಪ್ರಶಸ್ತಿ, ಅತ್ಯುತ್ತಮ ಚಿತ್ರಕಥೆಗಾಗಿ ಫಿಲ್ಮ್ ಫೇರ್ ಪ್ರಶಸ್ತಿ, ಅತ್ಯುತ್ತಮ ಕಥೆಗಾಗಿ IIFA ಪ್ರಶಸ್ತಿ ಇತ್ಯಾದಿ.

## ರಾಜ್ಯ ಸಭೆಯ ಬಗ್ಗೆ :

ಸಂವಿಧಾನ 80 ನೇ ವಿಧಿ ರಾಜ್ಯಸಭೆಯ ಬಗ್ಗೆ ತಿಳಿಸುತ್ತದೆ. ಇದರ ಪ್ರಕಾರ ರಾಜ್ಯಸಭೆಯ ಒಟ್ಟು ಸದಸ್ಯರ ಸಂಖ್ಯೆ 250 ಕ್ಕೂ ಹೆಚ್ಚಿರಬಾರದು, ಇದರಲ್ಲಿ 238 ಜನ ಸದಸ್ಯರನ್ನು ಪರೋಕ್ಷವಾದ ಚುನಾವಣೆ ಮೂಲಕ ಹಾಗೂ 12 ಜನ ಸದಸ್ಯರನ್ನು ಕಲೆ, ಸಾಹಿತ್ಯ, ವಿಜ್ಞಾನ, ಸಾರ್ವಜನಿಕ ಸೇವೆ ಮತ್ತು ಕ್ರೀಡೆ ಈ ಕ್ಷೇತ್ರಗಳಲ್ಲಿ ಸಾಧನೆ ರಾಷ್ಟ್ರಾಧ್ಯಕ್ಷರು ನಾಮಕರಣ ಮಾಡುತ್ತಾರೆ.

* ರಾಜ್ಯ ಸಭೆಯು ಏಪ್ರಿಲ್ 3, 1951 ರಲ್ಲಿ ಅಸ್ತಿತ್ವಕ್ಕೆ ಬಂದಿತ್ತು.

* ರಾಜ್ಯಸಭೆಯನ್ನು 1954 ರ ವರೆಗೆ' ಕೌನ್ಸಿಲ್ ಆಫ್ ಸ್ಟೇಟ್' ಎಂದು ಕರೆಯುತ್ತಿದ್ದರು.

ಅಮೇರಿಕಾದಲ್ಲಿ ಮೇಲ್ಮನೆಯನ್ನು 'ಸೆನೆಟ್' ಎಂದು ಮತ್ತು ಬ್ರಿಟನ್‌ನಲ್ಲಿ 'ಹೌಸ್ ಆಫ್ ಲಾರ್ಡ್ಸ್' ಎಂದು ಕರೆಯುತ್ತಾರೆ.

**ಅರ್ಹತೆಗಳು :**

- 84 ನೇ ವಿಧಿ ರಾಜ್ಯ ಸಭಾ ಸದಸ್ಯರ ಅರ್ಹತೆ ಬಗ್ಗೆ ತಿಳಿಸುತ್ತದೆ.
- ಭಾರತದ ಪ್ರಜೆಯಾಗಿರಬೇಕು ಕನಿಷ್ಠ 30 ವರ್ಷ ವಯಸ್ಸಾಗಿರಬೇಕು.
- ಸಂಸತ್ತು ನಿರ್ಧರಿಸುವ ಇತರ ಅರ್ಹತೆಗಳನ್ನು ಪಡೆದಿರಬೇಕು
- ಯಾವುದೇ ಲಾಭದಾಯಕ ಹುದ್ದೆಯಲ್ಲಿ ಇರಲಾರದು.

**ಚುನಾವಣೆ :**

ರಾಜ್ಯಸಭೆಯ ಸದಸ್ಯರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಇವರು ರಾಜ್ಯಗಳ ವಿಧಾನಸಭಾ ಸದಸ್ಯರಿಂದ ಏಕಮತ ಪ್ರಾತಿನಿಧ್ಯ ಪದ್ಧತಿಗೆ ಅನುಗುಣವಾಗಿ ಗುಪ್ತ ಮತದಾನದ ಮೂಲಕ ಆಯ್ಕೆಯಾಗುತ್ತಾರೆ. ಅಧಿಕಾರಾವಧಿ (83 ನೇ ವಿಧಿ) ರಾಜ್ಯಸಭೆಯು ಶಾಶ್ವತ ಸದನವಾಗಿದ್ದು ಇದನ್ನು ವಿಸರ್ಜಿಸುವಂತಿಲ್ಲ. ಸದಸ್ಯರ ಅಧಿಕಾರವಧಿ 6 ವರ್ಷಗಳಾಗಿದ್ದು 1/3 ರಷ್ಟು ಸದಸ್ಯರು 2 ವರ್ಷಗಳಗೊಮ್ಮೆ ನಿವೃತ್ತಿ ಹೊಂದುತ್ತಾರೆ ಮತ್ತು ಅಷ್ಟೇ ಜನ ಎರಡು ವರ್ಷಕ್ಕೊಮ್ಮೆ ಆಯ್ಕೆಯಾಗುತ್ತಾರೆ.

ರಾಜ್ಯ ಸಭೆಯ ಅಧ್ಯಕ್ಷರು: ವೆಂಕಯ್ಯ ನಾಯ್ಡು (ಉಪರಾಷ್ಟ್ರಪತಿಗಳು ಅಧ್ಯಕ್ಷರಾಗಿರುತ್ತಾರೆ.)

ಆಡಳಿತ ಪಕ್ಷದ ನಾಯಕ : ತಾವರ್ ಚಂದ್ ಗೆಹ್ಲೋಟ್ ವಿರೋಧ ಪಕ್ಷದ ನಾಯಕ : ಗುಲಾಮ್ ನಬಿ ಅಜಾದ್ ಉಪಾಧ್ಯಕ್ಷರು: ಹರಿವಂಶ್ ನರಾಯಣ್ ಸಿಂಗ್

## ಗಣಿತಜ್ಞೆ ಮೇರಿನಾ ವಿಯಾಜೊವ್ಸ್ಕಾ ಅವರಿಗೆ 2022ರ ಫೀಲ್ಡ್ಸ್ ಪದಕ

ಉಕ್ರೇನಿಯನ್ ಗಣಿತ ಪ್ರಾಧ್ಯಾಪಕ, ಮೇರಿನಾ ವಿಯಾಜೋವ್ಸ್ಕಾ ಅವರು ಉನ್ನತ ಗಣಿತ ಪ್ರಶಸ್ತಿಯನ್ನು ಗೆದ್ದಿದ್ದಾರೆ, ಫೀಲ್ಡ್ಸ್ ಮೆಡಲ್ 2022. ವಿಯಾಜೋವ್ಸ್ಕಾ ಮತ್ತು ಇತರ ಮೂವರು ಗಣಿತಜ್ಞರು ಫೀಲ್ಡ್ಸ್ ಪದಕವನ್ನು ಪಡೆದರು, ಇದನ್ನು ಗಣಿತದಲ್ಲಿ ನೊಬೆಲ್ ಪ್ರಶಸ್ತಿ ಎಂದು ಕರೆಯಲಾಗುತ್ತದೆ. ಈ ಸಮಾರಂಭ ಸೈಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆಯಿತು.

**ಮರೀನಾ ವಿಯಾಜೋವ್ಸ್ಕಾ ಬಗ್ಗೆ:**

ವಿಯಾಜೋವ್ಸ್ಕಾ ಉಕ್ರೇನ್ ಸೋವಿಯತ್ ಒಕ್ಕೂಟದ ಭಾಗವಾಗಿದ್ದಾಗ 1984ರಲ್ಲಿ ಕೈವಲ್ಲಿ ಜನಿಸಿದರು. ಉಕ್ರೇನ್‌ನಲ್ಲಿ, 2018 ರಿಂದ ಅವರು ಎಕೋಲ್ ಪಾಲಿಟೆಕ್ನಿಕ್ ಫೆಡರಲ್ ಡಿ ಲೌಸನ್ನೆಯಲ್ಲಿ ಸಂಖ್ಯೆ ಸಿದ್ಧಾಂತದ ಅಧ್ಯಕ್ಷರಾಗಿದ್ದಾರೆ.

**ಫೀಲ್ಡ್ಸ್ ಮೆಡಲ್ 2022 ಪ್ರಶಸ್ತಿ ಪಡೆದ ಇತರರು:**

- ಫ್ರಾನ್ಸ್‌ನ ಕ್ಯೂಗೋ ಡುಮಿನಿಲ್-ಕೋಪಿನ್
- ಯುಎಸ್ ಮೂಲದ ಜೂನ್ ಹುಕ್
- ಬ್ರಿಟನ್‌ನ ಜೇಮ್ಸ್ ಮೇನಾರ್ಡ್
- ಉಕ್ರೇನ್‌ನ ಮರೀನಾ ವಿಯಾಜೋವ್ಸ್ಕಾ

**ಫೀಲ್ಡ್ಸ್ ಪದಕದ ಬಗ್ಗೆ:**

ಫೀಲ್ಡ್ಸ್ ಪದಕವು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಇಂಟರ್ನ್ಯಾಷನಲ್ ಕಾಂಗ್ರೆಸ್ ಆಫ್ ದಿ ಇಂಟರ್ನ್ಯಾಷನಲ್ ಮ್ಯಾಥಮೆಟಿಕಲ್ ಯೂನಿಯನ್ **(IMU)** ನಲ್ಲಿ 40 ವರ್ಷಕ್ಕಿಂತ ಕಡಿಮೆ ವಯಸ್ಸಿನ ಇಬ್ಬರು,ಮೂರು ಅಥವಾ ನಾಲ್ಕು ಗಣಿತಜ್ಞರಿಗೆ ನೀಡಲಾಗುವ ಬಹುಮಾನವಾಗಿದೆ . ಪ್ರಶಸ್ತಿಯನ್ನು ಕೆನಡಾದ ಗಣಿತಜ್ಞ ಜಾನ್ ಚಾರ್ಲ್ಸ್ ಫೀಲ್ಡ್ಸ್ ಅವರ ಸ್ಮರಣಾರ್ಥವಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಮೊದಲು ಪ್ರಶಸ್ತಿಯನ್ನು 1936ರಲ್ಲಿ ನೀಡಲಾಯಿತು.

# 3 ಕನ್ನಡ ಚಿತ್ರಗಳಿಗೆ ರಾಷ್ಟ್ರೀಯ ಪ್ರಶಸ್ತಿ

ದಿವಂಗತ ನಟ ಸಂಚಾರಿ ವಿಜಯ್ ಕೊನೆಯ ಸಿನೆಮಾ 'ತಲೆದಂಡ' ಸೇರಿ ಕನ್ನಡದ 3 ಚಿತ್ರಗಳಿಗೆ 68 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸಿದೆ. ಹಲವು ಪ್ರಶಸ್ತಿಗಳನ್ನು ಬಾಚಿಕೊಂಡಿರುವ ಸಾಗರ್ ಪುರಾಣಿಕ್ ನಿರ್ದೇಶನದ, ಪವನ್ ಒಡೆಯರ್ ನಿರ್ಮಾಣದ 'ಡೊಳ್ಳು' ಚಿತ್ರಕ್ಕೆ ಎರಡು ಪ್ರಶಸ್ತಿಗಳು ಸಂದಿದೆ. ಸಂಚಾರಿ ವಿಜಯ್ ನಟನೆಯ 'ತಲೆದಂಡ' ಕ್ಕೆ ಸಿನಿ ಹಾಗೂ ರಾಷ್ಟ್ರ ಪ್ರಶಸ್ತಿ ಸಂದಿದೆ. ಅಲ್ಲದೇ, ಗಿರೀಶ್ ಕಾಸರವಳ್ಳಿ ನಿರ್ದೇಶನದ ವಾರ್ತಾ ಇಲಾಖೆ ನಿರ್ಮಿಸಿರುವ ಡಾ.ಪಿ.ಟಿ ವೆಂಕೇಶ್ ಕುಮಾರ್' 'ಬದುಕಿನ ನಾದದ' ನವನೀತ ಚಿತ್ರಕ್ಕೂ ರಾಷ್ಟ್ರೀಯ ಪ್ರಶಸ್ತಿ ಸಂದಿದೆ,

ಪ್ರಶಸ್ತಿ ಪಡೆದ ಕರ್ನಾಟಕದ ಚಿತ್ರಗಳು

**ಪ್ರಶಸ್ತಿ ಪಡೆದ ಕರ್ನಾಟಕದ ಚಿತ್ರಗಳು**

- ಅತ್ಯುತ್ತಮ ಪರಿಸರ ಕಾಳಜಿ ಚಿತ್ರ : ತಲೆದಂಡ
- ಅತ್ಯುತ್ತಮ ಲೊಕೇಷನ್ ಸೌಂಡ್ ಡಿಸೈನ್ ಚಿತ್ರ : ಡೊಳ್ಳು
- ಅತ್ಯುತ್ತಮ ಕಲೆ ಮತ್ತು ಸಾಂಸ್ಕೃತಿಕ ಚಿತ್ರ : ನಾದದ ನವನೀತ
- ಅತ್ಯುತ್ತಮ ಪ್ರಾದೇಶಿಕ ಸಿನಿಮಾ : ಡೊಳ್ಳು
- ಅತ್ಯುತ್ತಮ ಪ್ರಾದೇಶಿಕ ತುಳು ಸಿನಿಮಾ : ಜೀಟಿಗೆ

ಕೋವಿಡ್ ಕಾರಣ ಮುಂದೂಡಲಾಗಿದ್ದ 2020 ನೇ ಸಾಲಿನಲ್ಲಿ ಬಿಡುಗಡೆಗೊಂಡ ಚಲನಚಿತ್ರಗಳಿಗೆ ರಾಷ್ಟ್ರೀಯ ಚಲನಚಿತ್ರ 68 ನೇ ಪುರಸ್ಕಾರಗಳನ್ನು ಪ್ರಕಟಿಸಲಾಗಿದೆ.

ದಿ.ಸಚ್ಚಿದಾನಂದನ್.ಕೆ. ಆರ್. ಅವರಿಗೆ ಮಲಯಾಳಂನ' ಎ.ಕೆ. ಅಯ್ಯಪ್ಪನ್ನು ಕೋಶಿಯುಂ ಚಿತ್ರಕ್ಕಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪ್ರಕಟಿಸಲಾಗಿದೆ. ಇನ್ನು ಇದೇ ಚಿತ್ರದ ಅಭಿನಯಕ್ಕಾಗಿ ಬಿಜು ಮೆನನ್‌ಗೆ ಅತ್ಯುತ್ತಮ ಪೋಷಕ ನಟ, ಶ್ರೇಷ್ಠ ಸಾಹಸ ನಿರ್ದೇಶನ ಮತ್ತು ಶ್ರೇಷ್ಠ ಮಹಿಳಾ ಹಿನ್ನೆಲೆ ಗಾಯಕಿ (ನಂಚಮ್ಮ) ಪ್ರಶಸ್ತಿ ಸಹ ಒಲಿದುಬಂದಿದೆ. ಮರಾಠಿಯ ಮಿ.ವಸಂತರಾವ್ ಚಿತ್ರದ ಗಾಯನಕ್ಕಾಗಿ ರಾಹುಲ್ ದೇಶಪಾಂಡೆ ಶ್ರೇಷ್ಠ ಹಿನ್ನೆಲೆ ಗಾಯಕ ರಾಗಿದ್ದಾರೆ,

ಗೋಪಿನಾಥ್ ಚಿತ್ರಕ್ಕೆ 5 ಪ್ರಶಸ್ತಿ: ಏರ್ ಡೆಕ್ಕನ್ ವಿಮಾನ ಸಂಸ್ಥೆ ಕಟ್ಟಿದ್ದ ಕ್ಯಾ। ಗೋಪಿನಾಥ್‌ರ ಜೀವನ ಆಧರಿತ' 'ಸೂರರೈ ಪೊಟ್ರು' ಶ್ರೇಷ್ಟ ಚಿತ್ರ, ಶ್ರೇಷ್ಠ ನಟ, ನಟಿ , ಶ್ರೇಷ್ಠ ಮೂಲ ಚಿತ್ರಕಥೆ , ಶ್ರೇಷ್ಠ ಹಿನ್ನೆಲೆ ಸಂಗೀತ ಪ್ರಶಸ್ತಿ ಗಿಟ್ಟಿಸಿದೆ.

| ವಿಭಾಗ | ಪುರಸ್ಕೃತರು |
|---|---|
| ಶ್ರೇಷ್ಠ ಚಲನಚಿತ್ರ | ಸೂರರೈ ಪೊಟ್ರು |
| ಜನಪ್ರಿಯ ಚಿತ್ರ | ತಾನಾಜಿ: ದ ಅನ್‌ಸಂಗ್ ವಾರಿಯರ್ |
| ಶ್ರೇಷ್ಠ ನಟ | ಸೂರ್ಯ(ಸೂರರೈಪೊಟ್ರು–ತಮಿಳು)/ಅಜಯದೇವಗನ್ (ತಾನಾಜಿ ಹಿಂದಿ) |
| ಶ್ರೇಷ್ಠ ನಟಿ | ಅಪರ್ಣಾ ಬಾಲಮುರಳಿ (ಸೂರರೈ ಪೊಟ್ರು–ತಮಿಳು) |
| ಶ್ರೇಷ್ಠ ನಿರ್ದೇಶ | ಕಕೆ.ಆರ್.ಸದಾನಂದನ್ (ಏಕೆ, ಅಯ್ಯಪ್ಪನುಂ ಕೋಶಿಯುಂ) |
| ಶ್ರೇಷ್ಠ ವಸ್ತ್ರ ವಿನ್ಯಾಸ | ತಾನಾಜಿ: ದ ಅನ್ಸಂಗ್ ವಾರಿಯರ್ |
| ಕಳಕಳಿಯ ಚಿತ್ರ | ಜಸ್ಟೀಸ್ ಡಿಲೇಯ್ಡ್(ಹಿಂದಿ) |
| ಶ್ರೇಷ್ಠ ಮಕ್ಕಳ ಚಿತ್ರ | ಸುಮಿ (ಮರಾಠಿ) |
| ಸಿನಿ ಸ್ನೇಹಿ ರಾಜ್ಯ | ಮಧ್ಯ ಪ್ರದೇಶ |
| ಸಿನಿಮಾ ಕುರಿತ ಅತ್ಯುತ್ತಮ ಪುಸ್ತಕದ | ಲಾಂಗೆಸ್ಟ್ ಕಿಸ್ (ಇಂಗ್ಲೀಷ–ಲೇಖಕ ಕಿಶ್ವಾರ್ ದೇಸಾಯಿ) |

# ಆಂಧ್ರಪ್ರದೇಶದ A.P. ಮಾರ್ಕ್‌ಫೆಡ್ ಸಂಸ್ಥೆಯಿಂದ USA ಗೆ 120 ಟನ್ ತಂಬಾಕು ರಫ್ತು



ಆಂಧ್ರಪ್ರದೇಶದ A.P ಮಾರ್ಕ್‌ಫೆಡ್ (ಆಂಧ್ರ ಪ್ರದೇಶ ರಾಜ್ಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್) ಸಂಸ್ಥೆಯ ಯು.ಎಸ್.ಎ ಗೆ 120 ಟನ್ ಗಳಷ್ಟು ತಂಬಾಕನ್ನು ರಫ್ತು ಮಾಡಿದೆ.

*** ಭಾರತದಲ್ಲಿ ತಂಬಾಕು ಕೃಷಿ :**

- ದೇಶವು ಸುಮಾರು 0.45 ಮಿಲಿಯನ್ ಹೆಕ್ಟೇರ್ ಪ್ರದೇಶವನ್ನು ತಂಬಾಕು ಕೃಷಿಯಲ್ಲಿ ಹೊಂದಿದೆ. ಜಾಗತಿಕವಾಗಿ ಇದು ಒಟ್ಟು ತಂಬಾಕು ಉತ್ಪಾದನೆಯ 9% ರಷ್ಟಿದೆ.
- ಭಾರತವು 2 ನೇ ಅತಿದೊಡ್ಡ ತಂಬಾಕು ಉತ್ಪಾದಕ (ಚೀನಾ ನಂತರ) ಮತ್ತು 2ನೇ ದೊಡ್ಡ ತಂಬಾಕು ರಫ್ತುದಾರ (ಬ್ರೆಜಿಲ್ ನಂತರ) ಆಗಿದೆ.

**ಹವಾಮಾನ ಪರಿಸ್ಥಿತಿಗಳು :**

- ಮೂಲತಃ ತಂಬಾಕು ಅರೆ ಉಷ್ಣವಲಯದ ಬೆಳೆ ಆದರೆ ಉಷ್ಣವಲಯದ ಪ್ರದೇಶದಲ್ಲಿ ಯಶಸ್ವಿಯಾಗಿ ಬೆಳೆಯಬಹುದು.
- ಸುಮಾರು 100 ರಿಂದ 120 ದಿನಗಳ ಮಂಜು – ಮುಕ್ತ ಹವಾಮಾನವು ಸರಾಸರಿ 80 “F ತಾಪಮಾನದೊಂದಿಗೆ ಇರುತ್ತದೆ. ತಿಂಗಳಿಗೆ 88 ರಿಂದ 125 ಮಿಮೀ ಮಳೆ ಬೇಕು.
- ಬೆಳವಣಿಗೆಯ ಅವಧಿಯಲ್ಲಿ ಹೆಚ್ಚಿನ ವೇಗದ ಗಾಳಿ ಮತ್ತು ಬಿರುಗಾಳಿಗಳನ್ನು ಸಹಿಸುವುದಿಲ್ಲ.

**ತಂಬಾಕು ಬೆಳೆಯುವ ಪ್ರಮುಖ ರಾಜ್ಯಗಳು :** ಆಂಧ್ರಪ್ರದೇಶ (45%), ಕರ್ನಾಟಕ (26%), ಗುಜರಾತ್ (14%), ಉತ್ತರ ಪ್ರದೇಶ (5%), ತಮಿಳುನಾಡು (2%), ಬಿಹಾರ (2%) ಮತ್ತು ಪಶ್ಚಿಮ ಬಂಗಾಳ (1%) ತಂಬಾಕು ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿದೆ.

**ಆಡಳಿತ ಮಂಡಳಿ :** ಆಂಧ್ರಪ್ರದೇಶದಲ್ಲಿ ಪ್ರಧಾನ ಕಛೇರಿ ಹೊಂದಿರುವ ತಂಬಾಕು ಮಂಡಳಿಯು ತಂಬಾಕು ಬೆಳೆಗಾರರು, ವ್ಯಾಪಾರಿಗಳು ಮತ್ತು ರಫ್ತುದಾರರಿಗೆ ಅನುಕೂಲಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಇದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿದೆ.

**ತಂಬಾಕಿನ ವಿಧಗಳು ಮತ್ತು ಬೆಳೆಯುವ ರಾಜ್ಯಗಳು**

- FCV (ಫ್ಲೂ ಕ್ಯೂರ್ಡ್ ವರ್ಜೀನಿಯಾ) ತಂಬಾಕು: ಆಂಧ್ರದೇಶ ಮತ್ತು ಕರ್ನಾಟಕ
- ಬೀಡಿ ತಂಬಾಕು: ಗುಜರಾತ್ ಮತ್ತು ಕರ್ನಾಟಕ
- ಸಿಗಾರ್ ಮತ್ತು ಚೆರೂಟ್ : ತಮಿಳುನಾಡು, ಪಶ್ಚಿಮ, ಬಂಗಾಳ
- ಹುಕ್ಕಾ ತಂಬಾಕು: ಆಸ್ಸಾಂ, ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂ ಮತ್ತು ಯು.ಪಿ.
- ಚೂಯಿಂಗ್ ಮತ್ತು ಸ್ನಫ್: ತಮಿಳುನಾಡು, ಪಶ್ಚಿಮ ಬಂಗಾಳ ಆಸ್ಸಾಂ ಮತ್ತು ಯು.ಪಿ.

# ಅಲ್ಲೂರಿ ಸೀತಾರಾಮ ರಾಜು ಅವರ 30 ಅಡಿ ಕಂಚಿನ ಪ್ರತಿಮೆ ಅನಾವರಣ –ಪ್ರಧಾನಿ ನರೇಂದ್ರ ಮೋದಿ



ಪೌರಾಣಿಕ ಸ್ವಾತಂತ್ರ್ಯ ಹೋರಾಟಗಾರ ಅಲ್ಲೂರಿ ಸೀತಾರಾಮ ರಾಜು ಅವರ 125 ನೇ ಜನ್ಮದಿನದಂದು 30 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅನಾವರಣಗೊಳಿಸಿದರು. ಆಂಧ್ರಪ್ರದೇಶದ ಭೀಮಾವರಂನಲ್ಲಿ ಕ್ಷತ್ರಿಯ ಸೇವಾ ಸಮಿತಿಯಿಂದ 15 ಟನ್ ತೂಕದ ಪ್ರತಿಮೆಯನ್ನು 3 ಕೋಟಿ ರೂಪಾಯಿ ವೆಚ್ಚದಲ್ಲಿ ಕೆತ್ತಲಾಗಿದೆ. ಪ್ರಬಲ ಬ್ರಿಟಿಷ್ ಪಡೆಗಳ ವಿರುದ್ಧ ಕೈಗೊಂಡ ರಂಪಚೋಡವರಂ ಅರಣ್ಯ ಪ್ರದೇಶದಲ್ಲಿ 'ರಾಂಪ ಬಂಡಾಯ' ಅಥವಾ 'ಮನ್ಯಂ ದಂಗೆ'ಗೆ ನಾಯಕತ್ವವ ವಹಿಸಿದ್ದರು.

ಆಂಧ್ರಪ್ರದೇಶದಲ್ಲಿ ಅಲ್ಲೂರಿ ಸೀತಾರಾಮ ರಾಜು ಅವರ 125ನೇ ಜನ್ಮದಿನಾಚರಣೆ, 100 ವರ್ಷಗಳ **'ರಾಮ ಕ್ರಾಂತಿ'** ಜೊತೆಗೆ 75 ವರ್ಷಗಳ ಸ್ವಾತಂತ್ರ್ಯೋತ್ಸವನ್ನು ವರ್ಷವಿಡೀ ಆಚರಿಸಲಾಗುವುದು ಎಂದು ಹೇಳಿದರು.

**ಅಲ್ಲೂರಿ ಸೀತಾರಾಮ ರಾಜು ಅವರ ಬಗ್ಗೆ :**

- 1897ರ ಜುಲೈ 4 ರಂದು ಜನಿಸಿದ ಅಲ್ಲೂರಿ ಸೀತಾರಾಮ ರಾಜು ಅವರು ಪೂರ್ವ ಘಟ್ಟಗಳ ಪ್ರದೇಶದ ಬುಡಕಟ್ಟು ಸಮುದಾಯಗಳ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರು.
- ಅಲ್ಲೂರಿ ಸೀತಾರಾಮ ರಾಜು ಒಬ್ಬ ಭಾರತೀಯ ಕ್ರಾಂತಿಕಾರಿಯಾಗಿದ್ದು, ಅವರು ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಸಶಸ್ತ್ರ ಅಭಿಯಾನವನ್ನು ನಡೆಸಿದರು.
- ಇಂದಿನ ಆಂಧ್ರಪ್ರದೇಶದಲ್ಲಿ ಜನಿಸಿದ ಅವರು 1882 ರ ಮದ್ರಾಸ್ ಅರಣ್ಯ ಕಾಯಿದೆಗೆ ಪ್ರತಿಕ್ರಿಯೆಯಾಗಿ ಬ್ರಿಟಿಷರನ್ನು ವಿರೋಧಿಸುವಲ್ಲಿ ತೊಡಗಿಸಿಕೊಂಡರು, ಇದು ಅವರ ಅರಣ್ಯ ಆವಾಸಸ್ಥಾನಗಳಲ್ಲಿ ಆದಿವಾಸಿಗಳ (ಬುಡಕಟ್ಟು ಸಮುದಾಯಗಳ) ಮುಕ್ತ ಸಂಚಾರವನ್ನು ಪರಿಣಾಮಕಾರಿಯಾಗಿ ನಿರ್ಬಂಧಿಸಿತು ಮತ್ತು ಸಾಂಪ್ರದಾಯಿಕ ಕೃಷಿಯನ್ನು ಅಭ್ಯಾಸ ಮಾಡುವುದನ್ನು ತಡೆಯಿತು. ಪೋಡು ಎಂದು ಕರೆಯಲಾಗುತ್ತದೆ.
- ಬ್ರಿಟಿಷರ ಬಗ್ಗೆ ಹೆಚ್ಚುತ್ತಿರುವ ಅಸಮಾಧಾನವು 1922 ರ ರಾಂಪಾ ದಂಗೆಗೆ ಕಾರಣವಾಯಿತು. ಇದರಲ್ಲಿ ಅವರು ನಾಯಕರಾಗಿ ಪ್ರಮುಖ ಪಾತ್ರ ವಹಿಸಿದರು. ಅವರು ಹೋರಾಟಕ್ಕೆ ಆದಿವಾಸಿಗಳು, ರೈತರನು ಒಟ್ಟುಗೂಡಿಸಿ, ಅವರು ಪೂರ್ವ ಗೋದಾವರಿ ಮತ್ತು ವಿಶಾಖಪಟ್ಟಣಂ (ಈಗ ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯ ಭಾಗ) ಜಿಲ್ಲೆಗಳ ಮದ್ರಾಸ್ ಪ್ರೆಸಿಡೆನ್ಸಿ ಭಾಗದ ಗಡಿ ಪ್ರದೇಶಗಳಲ್ಲಿ ಬ್ರಿಟಿಷ್ ವಸಾಹತುಶಾಹಿ ಅಧಿಕಾರಿಗಳ ವಿರುದ್ಧ ಗೆರಿಲ್ಲಾ ಯುದ್ಧವನ್ನು ಮಾಡ ತೊಡಗಿದರು.
- ಅವನ ವೀರ ಸಾಹಸಗಳಿಗಾಗಿ ಸ್ಥಳೀಯ ಗ್ರಾಮಸ್ಥರು ಅವನನ್ನು "ಮಾನ್ಯಂ ವೀರುಡು" (ಕಾಡಿನ ನಾಯಕ) ಎಂದು ಅಡ್ಡಹೆಸರು ಮಾಡಿದರು.
- ಅಂತಿಮವಾಗಿ ಅವರನ್ನು ಬ್ರಿಟಿಷರು ವಶಪಡಿಸಿಕೊಂಡು 1924 ರಲ್ಲಿ ಗಲ್ಲಿಗೇರಿಸಿದರು.

# ನೂತನ ಸಂಸತ್ ಭವನಕ್ಕೆ 6.5. ಮೀಟರ್ ಎತ್ತರದ ರಾಷ್ಟ್ರ ಲಾಂಛನ :



ನೂತನ ಸಂಸತ್ ಭವನದ ಮೇಲೆ ಸ್ಥಾಪಿಸಲಾಗಿರುವ 6.5. ಮೀಟರ್ ಎತ್ತರದ ರಾಷ್ಟ್ರ ಲಾಂಛನವನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣ ಗೊಳಿಸಿದರು. ಕಂಚಿನಲ್ಲಿ ನಿರ್ಮಿಸಲಾಗಿರುವ ನಾಲ್ಕು ದಿಕ್ಕುಗಳನ್ನು ನೋಡುತ್ತಿರುವ ಸಿಂಹಗಳ ಮುಖಗಳಿರುವ 'ರಾಷ್ಟ್ರ ಲಾಂಛನವನ್ನು' ನರೇಂದ್ರ ಮೋದಿ ಅನಾವರಣಗೊಳಸಿದ್ದಾರೆ. ಇದು ಒಟ್ಟು 9,500 ಕೆ.ಜಿ. ತೂಕವಿದ್ದು, 6.5 ಮೀಟರ್ ಎತ್ತರವಿದೆ.

**ನೂತನ ಲಾಂಛನ ಹಾಗೂ ಸಂಸತ್ತ ಭವನದ ಬಗ್ಗೆ :**

- ಈ ರಾಷ್ಟ್ರೀಯ ಲಾಂಛನವು 9500 ಕೆ.ಜಿ. ತೂಗುತ್ತದೆ. ಇದು ಕಂಚಿನಿಂದ ಮಾಡಲ್ಪಟ್ಟಿದೆ. ಇದರ ಎತ್ತರ 6.5 ಮೀಟರ್, ಅದನ್ನು ಹೊಸ ಸಂಸತ್ತಿನ ಕಟ್ಟಡದ ಸೆಂಟ್ರಲ್ ಪೋಯರ್‌ನ ಮೇಲ್ಭಾಗದಲ್ಲಿ ಇರಿಸಲಾಗಿದೆ.
- ಈ ಲಾಂಛನಕ್ಕೆ ಸಪೋರ್ಟ್ ಆಗಿ ಸುಮಾರು 6500 ಕೆ.ಜಿ. ತೂಕ್ ಉಕ್ಕಿನ ಪೋಷಕ ರಚನೆಯನ್ನು ನಿರ್ಮಿಸಲಾಗಿದೆ. ರಾಷ್ಟ್ರೀಯ ಲಾಂಛನದ ಸೈಜ್ ಮತ್ತು ಎರಕಹೊಯ್ದ ಪ್ರಕ್ರಿಯೆಯು ಕ್ಲೇ ಮಾಡಲಿಂಗ್/ಕಂಪ್ಯೂಟರ್ ಗ್ರಾಫಿಕ್‌ನಿಂದ ಕಂಚಿನ ಎರಕ ಮತ್ತು ಹೊಳಪು ನೀಡುವವರೆಗೆ ಎಂಟು ವಿಭಿನ್ನ ಹಂತದ ತಯಾರಿಕೆಯ ಮೂಲಕ ಸಾಗಿದೆ.
- ಹೊಸ ಸಂಸತ್ ಭವನದ ಕೆಲಸವನ್ನು ಟಾಟಾ ಪ್ರಾಜೆಕ್ಟ್ ಲಿಮಿಟೆಡ್‌ಗೆ ವಹಿಸಲಾಗಿದೆ. ಸಂಸತ್ತಿನ ಕಲಾಪದಲ್ಲಿ ಇದು 888 ಲೋಕಸಭಾ ಸದಸ್ಯರು ಮತ್ತು 384 ರಾಜ್ಯಸಭಾ ಸದಸ್ಯರ ಆಸನ ಸಾಮರ್ಥ್ಯವನ್ನು ಹೊಂದಿರುತ್ತದೆ.
- ಲೋಕಸಭೆಯ ಸಂಭಾಂಗಣದಲ್ಲಿ 1272 ಜನರ ಹೆಚ್ಚುವರಿ ಆಸನಗಳನ್ನು ಇರಿಸಲಾಗಿದೆ. ಇದರಿಂದ ಉಭಯ ಸದನಗಳ ಜಂಟಿ ಅಧಿವೇಶನ ಸಾಧ್ಯವಾಗುತ್ತದೆ.
- 60000 ಚದರ ಮೀಟರ್ ವಿಸ್ತೀರ್ಣದಲ್ಲಿ ನೂತನ ಸಂಸತ್ ಭವನ ನಿರ್ಮಾಣವಾಗುತ್ತಿದೆ. ಇದನ ಸೆಂಟ್ರಲ್ ವಿಸ್ತಾ ಎಂದು ಕರೆಯಲಾಗುತ್ತಿದೆ.
- ರಾಷ್ಟ್ರೀಯ ಲಾಂಛನವನ್ನು 26 ಜನವರಿ 1950 ರಂದು ಅಂಗೀಕರಿಸಲಾಯಿತು.
- ಹೊಸ ಸಂಸತ್ ಕಟ್ಟಡದ ಯೋಜನೆಯನ್ನು ಸೆಪ್ಟಂಬರ್ ತಿಂಗಳಲ್ಲಿ 2019 ಘೋಷಿಸಲಾಯಿತು. ಯೋಜನೆಯ ಅಡಿಗಲ್ಲು 10 ಡಿಸೆಂಬರ್ 2020 ರಂದು ಪ್ರಧಾನಿ ನರೇಂದ್ರ ಮೋದಿಯವರು ಹಾಕಿದರು.



ನೂತನ ಸಂಸತ್ ಭವನದ ಮೇಲೆ ಸ್ಥಾಪಿಸಲಾಗಿರುವ 6.5. ಮೀಟರ್ ಎತ್ತರದ ರಾಷ್ಟ್ರ ಲಾಂಛನವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಅನಾವರಣ ಗೊಳಿಸಿದರು. ಕಂಚಿನದಲ್ಲಿ ನಿರ್ಮಿಸಲಾಗಿರುವ ನಾಲ್ಕು ದಿಕ್ಕುಗಳನ್ನು ನೋಡುತ್ತಿರುವ ಸಿಂಹಗಳ ಮುಖಗಳಿರುವ 'ರಾಷ್ಟ್ರ ಲಾಂಛನವನ್ನು' ನರೇಂದ್ರ ಮೋದಿ ಅನಾವರಣಗೊಳಸಿದ್ದಾರೆ. ಇದು ಒಟ್ಟು 9,500 ಕೆ.ಜಿ. ತೂಕವಿದ್ದು, 6.5 ಮೀಟರ್ ಎತ್ತರವಿದೆ.

## ನೂತನ ಲಾಂಛನ ಹಾಗೂ ಸಂಸತ್ತ ಭವನದ ಬಗ್ಗೆ :

- ಈ ರಾಷ್ಟ್ರೀಯ ಲಾಂಛನವು 9500 ಕೆ.ಜಿ. ತೂಗುತ್ತದೆ. ಇದು ಕಂಚಿನಿಂದ ಮಾಡಲ್ಪಟ್ಟಿದೆ. ಇದರ ಎತ್ತರ 6.5 ಮೀಟರ್, ಅದನ್ನು ಹೊಸ ಸಂಸತ್ತಿನ ಕಟ್ಟಡದ ಸೆಂಟ್ರಲ್ ಪೋಯರ್‌ನ ಮೇಲ್ಭಾಗದಲ್ಲಿ ಇರಿಸಲಾಗಿದೆ.
- ಈ ಲಾಂಛನಕ್ಕೆ ಸಪೋರ್ಟ್ ಆಗಿ ಸುಮಾರು 6500 ಕೆ.ಜಿ. ತೂಕ್ ಉಕ್ಕಿನ ಪೋಷಕ ರಚನೆಯನ್ನು ನಿರ್ಮಿಸಲಾಗಿದೆ. ರಾಷ್ಟ್ರೀಯ ಲಾಂಛನದ ಸೈಜ್ ಮತ್ತು ಎರಕಹೊಯ್ದ ಪ್ರಕ್ರಿಯೆಯು ಕ್ಲೇ ಮಾಡಲಿಂಗ್/ಕಂಪ್ಯೂಟರ್ ಗ್ರಾಫಿಕ್‌ನಿಂದ ಕಂಚಿನ ಎರಕ ಮತ್ತು ಹೊಳಪು ನೀಡುವವರೆಗೆ ಎಂಟು ವಿಭಿನ್ನ ಹಂತದ ತಯಾರಿಕೆಯ ಮೂಲಕ ಸಾಗಿದೆ.
- ಹೊಸ ಸಂಸತ್ ಭವನದ ಕೆಲಸವನ್ನು ಟಾಟಾ ಪ್ರಾಜೆಕ್ಟ್ ಲಿಮಿಟೆಡ್‌ಗೆ ವಹಿಸಲಾಗಿದೆ. ಸಂಸತ್ತಿನ ಕಲಾಪದಲ್ಲಿ ಇದು 888 ಲೋಕಸಭಾ ಸದಸ್ಯರು ಮತ್ತು 384 ರಾಜ್ಯಸಭಾ ಸದಸ್ಯರ ಆಸನ ಸಾಮರ್ಥ್ಯವನ್ನು ಹೊಂದಿರುತ್ತದೆ.
- ಲೋಕಸಭೆಯ ಸಂಭಾಂಗಣದಲ್ಲಿ 1272 ಜನರ ಹೆಚ್ಚುವರಿ ಆಸನಗಳನ್ನು ಇರಿಸಲಾಗಿದೆ. ಇದರಿಂದ ಉಭಯ ಸದನಗಳ ಜಂಟಿ ಅಧಿವೇಶನ ಸಾಧ್ಯವಾಗುತ್ತದೆ.
- 60000 ಚದರ ಮೀಟರ್ ವಿಸ್ತೀರ್ಣದಲ್ಲಿ ನೂತನ ಸಂಸತ್ ಭವನ ನಿರ್ಮಾಣವಾಗುತ್ತಿದೆ. ಇದನ ಸೆಂಟ್ರಲ್ ವಿಸ್ತಾ ಎಂದು ಕರೆಯಲಾಗುತ್ತಿದೆ.
- ರಾಷ್ಟ್ರೀಯ ಲಾಂಛನವನ್ನು 26 ಜನವರಿ 1950 ರಂದು ಅಂಗೀಕರಿಸಲಾಯಿತು.
- ಹೊಸ ಸಂಸತ್ ಕಟ್ಟಡದ ಯೋಜನೆಯನ್ನು ಸೆಪ್ಟಂಬರ್ ತಿಂಗಳಲ್ಲಿ 2019 ಘೋಷಿಸಲಾಯಿತು. ಯೋಜನೆಯ ಅಡಿಗಲ್ಲು 10 ಡಿಸೆಂಬರ್ 2020 ರಂದು ಪ್ರಧಾನಿ ನರೇಂದ್ರ ಮೋದಿಯವರು ಹಾಕಿದರು.

## ಪ್ರಸ್ತುತ ಭಾರತದ ಸಂಸತ್ ಭವನ:

- ಹಿಂದಿನ ಹೆಸರು: ಹೌಸ್ ಆಫ್ ಪಾರ್ಲಿಮೆಂಟ್ ಪ್ರಸ್ತುತ ಹೆಸರು ಸಂಸತ್ ಭವನ
- ವಾಸ್ತುಶಿಲ್ಪ : ಶೈಲಿ ಲುಟಿಯೆನ್ಸ್
- ನಿರ್ಮಾಣ: 1921 ರಲ್ಲಿ ಬ್ರಿಟಿಷ್ ಇಂಡಿಯಾ
- ಭಾರತ ಸರ್ಕಾರದ ವಶಕ್ಕೆ: 1950– ಇಂದಿನವರೆಗೆ
- ವಿನ್ಯಾಸ ಮತ್ತು ನಿರ್ಮಾಣ: ವಾಸ್ತುಶಿಲ್ಪಿ ಎಡ್ವಿನ್ ಲುಟಿಯೆನ್ಸ್ ಮತ್ತು ಹರ್ಬರ್ಟ್ ಬೇಕರ್
- ಆಸನ ಸಾಮರ್ಥ್ಯ: 790

## ರಾಷ್ಟ್ರೀಯ ಪ್ರಚಲಿತ ಘಟನೆಗಳು

# ಜಿಯೋ–ಪೋರ್ಟಲ್ "ಪರಿಮಾನ್" ಈಗ ರಾಷ್ಟ್ರೀಯ ರಾಜಧಾನಿ ಪ್ರದೇಶದ ಸಾರ್ವಜನಿಕರಿಗೆ ಲಭ್ಯ

ರಾಷ್ಟ್ರೀಯ ರಾಜಧಾನಿ ಪ್ರದೇಶ ಯೋಜನಾ ಮಂಡಳಿ (NCRPB) ಮತ್ತು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರು 2021 ರ ಅಗಸ್ಟ್‌ನಲ್ಲಿ ಪ್ರಾರಂಭಿಸಲಾದ 'ಪರಿಮಾನ್' ಎಂದು ಕರೆಯಲ್ಪಡುವ ರಾಷ್ಟ್ರೀಯ ರಾಜಧಾನಿ ಪ್ರದೇಶದ ಜಿಯೋ ಪೋರ್ಟಲ್ ಅನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲಾಗಿದೆ.




**ಪರಿಮಾನ್ ಮಹತ್ವ:**

- ಎನ್‌ಸಿಆರ್ ಪ್ರದೇಶದಲ್ಲಿ ವಿಕೇಂದ್ರೀಕೃತ ಯೋಜನೆ ಮತ್ತು ನಿರ್ವಹಣೆಯನ್ನು ಸುಧಾರಿಸಲು ಈ ಜಿಯೋ–ಪೋರ್ಟಲ್ ಸಹಾಯ ಮಾಡುತ್ತದೆ.
- ಈ ಜಿಯೋ–ಪೋರ್ಟಲ್ ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ (ಎನ್‌ಸಿಆರ್) ಎಲ್ಲಿ ಮತ್ತು ಏನಿದೆ ಎಂಬುದನ್ನು ತಿಳಿಯಲು ಪ್ರಮುಖ ವೇದಿಕೆಯಾಗಿದ್ದು ಅದು ಉತ್ತಮ ಯೋಜನೆಯನ್ನು ಸಕ್ರಿಯಗೊಳಿಸುತ್ತದೆ.
- ರಿಮೋಟ್ ಸೆನ್ಸಿಂಗ್ ಮತ್ತು ಜಿಐಎಸ್ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಗೆ ಇದು ಸಹಾಯ ಮಾಡುತ್ತದೆ.
- ಪೋರ್ಟಲ್ ಸುಮಾರು 179 ಲೇಯರ್‌ಗಳನ್ನು ಲೈನ್, ಪಾಯಿಂಟ್ ಮತ್ತು ಬಹುಭುಜಾಕೃತಿಯ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಭೂ ಬಳಕೆ, ಸಾರಿಗೆ, ಕೈಗಾರಿಕೆಗಳು, ನೀರು, ವಿದ್ಯುತ್, ಆರೋಗ್ಯ, ಆಶ್ರಯ, ಪರಂಪರೆ ಮತ್ತು ಪ್ರವಾಸೋದ್ಯಮ, ವಿಪತ್ತು ನಿರ್ವಹಣೆ ಇತ್ಯಾದಿಗಳಂತಹ ವಿವಿಧ ಕ್ಷೇತ್ರಗಳ ವಿವರಗಳನ್ನು ಇದು ಒಳಗೊಂಡಿದೆ.

**ಜಿಯೋ ಸ್ಪೇಷಿಯಲ್ ಟೆಕ್ನಾಲಜಿ ಎಂದರೆ ಏನು? :**

- ಜಿಯೋ ಸ್ಪೇಷಿಯಲ್ ತಂತ್ರಜ್ಞಾನವು ಭೌಗೋಳಿಕ ಮ್ಯಾಪಿಂಗ್ ಮತ್ತು ವಿಶ್ಲೇಷಣೆಗಾಗಿ ಭೌಗೋಳಿಕ ಮಾಹಿತಿ ವ್ಯವಸ್ಥೆ (Geographic Information System), GPS(Global Positioning System) ಮತ್ತು ರಿಮೋಟ್ ಸೆನ್ಸಿಂಗ್‌ನಂತಹ ಸಾಧನಗಳನ್ನು ಬಳಸುತ್ತದೆ.
- ಈ ಉಪಕರಣಗಳು ವಸ್ತುಗಳು, ಘಟನೆಗಳು ಮತ್ತು ವಿದ್ಯಮಾನಗಳ ಬಗ್ಗೆ ಪ್ರಾದೇಶಿಕ ಮಾಹಿತಿಯನ್ನು ಸೆರೆಹಿಡಿಯುತ್ತವೆ (ಭೂಮಿಯ ಮೇಲಿನ ಅವುಗಳ ಭೌಗೋಳಿಕ ಸ್ಥಳ. ಜಿಯೋಟ್ಯಾಗ್ ಸೂಚ್ಯಂಕ). ಸ್ಥಳದ ಮಾಹಿತಿ ಸ್ಥಿರ ಅಥವಾ ಕ್ರಿಯಾತ್ಮಕ ಆಗಿರಬಹುದು.

# 'ಅರುಣ್ ಜೇಟ್ಲಿ ಸ್ಮಾರಕ ಉಪನ್ಯಾಸ

ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯು, ದೇಶಕ್ಕೆ ಶ್ರೀ ಅರುಣ್ ಜೇಟ್ಲಿಯವರು ನೀಡಿದ ಅಮೂಲ್ಯ ಕೊಡುಗೆಯನ್ನು ಗುರುತಿಸಿ 'ಅರುಣ್ ಜೇಟ್ಲಿ ಸ್ಮಾರಕ ಉಪನ್ಯಾಸ'ವನ್ನು ಆಯೋಜಿಸಿದೆ.



ಜುಲೈ 8 ರಿಂದ 10 ರವರೆಗೆ ಆಯೋಜಿಸಲಾಗಿದ್ದ ಮೂರು ದಿನಗಳ ಕಾರ್ಯಕ್ರಮವಾದ ಕೌಟಿಲ್ಯ ಆರ್ಥಿಕ ಸಮಾವೇಶದಲ್ಲಿ (ಕೌಟಿಲ್ಯ ಏಕನಾಮಿಕ್ ಕಾನ್ಕ್ಲೇವ್ಸ್ – ಕೆಇಸಿ) ಭಾಗವಹಿಸುವ ಪ್ರತಿನಿಧಿಗಳೊಂದಿಗೆ ಪ್ರಧಾನಮಂತ್ರಿಯವರು ಸಂವಾದ ನಡೆಸಿದ್ದಾರೆ.

'ಅರುಣ್ ಜೇಟ್ಲಿ ಸ್ಮಾರಕ ಉಪನ್ಯಾಸ'ದಲ್ಲಿ ಮುಖ್ಯ ಭಾಷಣವನ್ನು ಸಿಂಗಾಪುರ ಸರ್ಕಾರದ ಹಿರಿಯ ಸಚಿವ ಧರ್ಮನ್ ಷಣ್ಮುಗರತ್ನಂ ಅವರು 'ಒಳಗೊಳ್ಳುವಿಕೆಯ ಮೂಲಕ ಬೆಳವಣಿಗೆ, ಬೆಳವಣಿಗೆಯ ಮೂಲಕ ಒಳಗೊಳ್ಳುವಿಕೆ' ಕುರಿತು ಭಾಷಣ ಮಾಡಿದ್ದಾರೆ.

ವಿವಿಧ ದೇಶಗಳಿಂದ ಆಗಮಿಸಿದ ಅರ್ಥಶಾಸ್ತ್ರಜ್ಞರಾದ ಜೊತೆ ಪ್ರಧಾನಿಗಳು ಸಮಾಲೋಚನೆ ನಡೆಸಿದರು. ಈ ಕಾರ್ಯಕ್ರಮ ಇನ್‌ಸ್ಟಿಟ್ಯೂಟ್ ಆಫ್ ಎಕನಾಮಿಕ್ ಗ್ರೋತ್ ಸಂಸ್ಥೆಯು ಹಣಕಾಸು ಇಲಾಖೆಯ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಿತ್ತು.

**ಅರುಣ್ ಜೇಟ್ಲಿ ಅವರ ಬಗ್ಗೆ :**

ಅರುಣ್ ಜೇಟ್ಲಿ ಒಬ್ಬ ಭಾರತೀಯ ರಾಜಕಾರಣಿ ಮತ್ತು ವಕೀಲರಾಗಿದ್ದರು. ಭಾರತೀಯ ಜನತಾ ಪಕ್ಷದ ಸದಸ್ಯ, ಜೇಟ್ಲಿ ಅವರು 2014 ರಿಂದ 2019 ರವರೆಗೆ ಭಾರತ ಸರ್ಕಾರದ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

ಜೇಟ್ಲಿ ಅವರು ವಾಜಪೇಯಿ ಸರ್ಕಾರ ಮತ್ತು ನರೇಂದ್ರ ಮೋದಿ ಸರ್ಕಾರದಲ್ಲಿ ಹಣಕಾಸು, ರಕ್ಷಣೆ, ಕಾರ್ಪೊರೇಟ್ ವ್ಯವಹಾರಗಳು, ವಾಣಿಜ್ಯ ಮತ್ತು ಕೈಗಾರಿಕೆ, ಮತ್ತು ಕಾನೂನು ಮತ್ತು ನ್ಯಾಯದ ಕ್ಯಾಬಿನೆಟ್ ಖಾತೆಗಳನ್ನು ಹೊಂದಿದ್ದರು.

- ಜನನ: 28 ಡಿಸೆಂಬರ್ 1952, ನವದೆಹಲಿ
- ಮರಣ : 24 ಅಗಸ್ಟ್ 2019
- ಪತ್ನಿ: ಸಂಗೀತಾ ಜೇಟ್ಲಿ (ಮ 1982)
- ಶಿಕ್ಷಣ: ದೆಹಲಿ ವಿಶ್ವವಿದ್ಯಾಲಯ (1977), ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್ (1973), ಸೇಂಟ್ ಜೇವಿಯರ್ಸ್ ಹಿರಿಯ ಮಾಧ್ಯಮಿಕ ಶಾಲೆ (1969–1970)
- 2020 ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ನೀಡಿದೆ.

## ಗುಜರಾತ್‌ನಲ್ಲಿ 36ನೇ ರಾಷ್ಟ್ರೀಯ ಕ್ರೀಡಾಕೂಟ :




ಸೆಪ್ಟೆಂಬರ್ ತಿಂಗಳಲ್ಲಿ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ. ಗುಜರಾತ್ ಪಂದ್ಯಗಳನ್ನು ಆಯೋಜಿಸಲಿದೆ. ಈ ಬಹು ಕ್ರೀಡಾಕೂಟವನ್ನು ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 10 ರವರೆಗೆ ಆಯೋಜಿಸಲಾಗಿದೆ.

ಗುಜರಾತ್‌ನ ಐದು ನಗರಗಳಲ್ಲಿ (ಅಹಮದಾಬಾದ್, ರಾಜ್‌ಕೋಟ್, ಸೂರತ್, ಭಾವನಗರ ಮತ್ತು ವಡೋದರಾ) ಕ್ರೀಡಾಕೂಟ ನಡೆಯಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಕ್ರೀಡಾಕೂಟದ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭ ನಡೆಯಲಿದೆ. 7 ವರ್ಷಗಳ ನಂತರ ಈ ಆಟಗಳನ್ನು ದೇಶದಲ್ಲಿ ಆಯೋಜಿಸಲಾಗುತ್ತಿದೆ. ಈ ಹಿಂದೆ ಕೇರಳ 2015 ರಲ್ಲಿ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸಿತ್ತು.

ಭಾರತೀಯ ಒಲಿಂಪಿಕ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಅವರು ಸಾಮಾಜಿಕ ಪೋಸ್ಟ್‌ನಲ್ಲಿ ಈ ಘೋಷಣೆ ಮಾಡಿದ್ದಾರೆ. ಈ ಮೊದಲು ಈ ಆಟಗಳನ್ನು ಗೋವಾದಲ್ಲಿ ನಡೆಸಬೇಕಿತ್ತು. ಆದರೆ 2020 ರಲ್ಲಿ ಕರೋನಾವನ್ನು ಉಲ್ಲೇಖಿಸಿ ಗೋವಾ ಸರ್ಕಾರವು ಕ್ರೀಡಾಕೂಟವನ್ನು ಆಯೋಜಿಸುವುದನ್ನು  ಹಿಂತೆಗೆದುಕೊಂಡಿತು.

**ರಾಷ್ಟ್ರೀಯ ಕ್ರೀಡಾಕೂಟದ ಬಗ್ಗೆ :**

- ➤ ಇದು ರಾಷ್ಟ್ರೀಯ ಕ್ರೀಡಾಕೂಟದ 36 ನೇ ಆವೃತ್ತಿಯಾಗಿದೆ. ಗುಜರಾತ್‌ನ ಐದು ನಗರಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ 34 ಕ್ಕೂ ಹೆಚ್ಚು ಕ್ರೀಡೆಗಳನ್ನು ಒಳಗೊಂಡಿದೆ.
- ➤ ಮೊದಲ ಬಾರಿಗೆ ಈ ಆಟಗಳನ್ನು ಲಾಹೋರ್‌ನಲ್ಲಿ (ಇಂದಿನ ಪಾಕಿಸ್ತಾನದ ರಾಜಧಾನಿ) 1924 ರಲ್ಲಿ ನಡೆಸಲಾಯಿತು.
- ➤ ಒಳಾಂಗಣ ಮತ್ತು ಹೊರಾಂಗಣ ಸ್ಪರ್ಧೆಗಳಲ್ಲಿ ರಾಷ್ಟ್ರದಾದ್ಯಂತದ ಕ್ರೀಡಾಪಟುಗಳು ಅಥ್ಲೆಟಿಕ್ಸ್, ಹಾಕಿ, ಫುಟ್ಬಾಲ್, ವಾಲಿಬಾಲ್, ಲಾನ್ ಟೆನ್ನಿಸ್, ಟೇಬಲ್ ಟೆನ್ನಿಸ್, ಜೂಡೋ, 'ಕುಸ್ತಿ, ಕಬಡ್ಡಿ, ಖೋ-ಖೋ, ಮಲ್ಲಕಂಭ ಮತ್ತು ಯೋಗ ಸೇರಿದಂತೆ ಕ್ರೀಡೆಗಳಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಲಿದ್ದಾರೆ.
- ➤ 2023 ರ 37ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಮೇಘಾಲಯ ರಾಜ್ಯ ಆಯೋಜಿಸಲಿದೆ.

ಕರ್ನಾಟಕ 22ನೇ ರಾಷ್ಟ್ರೀಯ ಕ್ರೀಡಾಕೂಟ 1966 ರಲ್ಲಿ ಹಾಗೂ 1997 ರಲ್ಲಿ 29ನೇ ರಾಷ್ಟ್ರೀಯ ಕ್ರೀಟಾಕೂಟವನ್ನು ಆಯೋಜಿಸಿತ್ತು.

ಗುರಾತ್ ಮುಖ್ಯಮಂತ್ರಿ: ಶ್ರೀ ಭೂಪೇಂದ್ರ ಪಟೇಲ್

ಗುಜರಾತ್ ಯುವಜನ, ಕ್ರೀಡೆ ಮತ್ತು ಸಂಸ್ಕೃತಿ ಸಚಿವರು : ಶ್ರೀ ಹರ್ಷ ಸಾಂಘ್ವಿ

# 2021 –22ನೇ ಸಾಲಿನಲ್ಲಿ ಭಾರತದ ರಕ್ಷಣಾ ರಫ್ತು 13000 ಕೋಟಿ




ಭಾರತದ ರಕ್ಷಣಾ ರಫ್ತುಗಳು ಹಿಂದಿನ ವರ್ಷಕ್ಕಿಂತ 54.1 % ಏರಿಕೆಯನ್ನು ದಾಖಲಿಸಿ 13000 ಕೋಟಿಗಳ ಅತ್ಯದಿಕ ದಾಖಲೆಯನ್ನು ಮುಟ್ಟಿದೆ.

**ಪ್ರಮುಖ ಅಂಶಗಳು :**

- ರಫ್ತಿನಲ್ಲಿ ಖಾಸಗಿ ವಲಯವು 70% ರಫ್ತನ್ನು ಹೊಂದಿದರೆ ಸಾರ್ವಜನಿಕ ವಲಯದ ಸಂಸ್ಥೆಗಳು ಉಳಿದ ಪಾಲನ್ನು ಹೊಂದಿವೆ.
- ಈ ಹಿಂದೆ ಖಾಸಗಿ ವಲಯವು ಸುಮಾರು 90% ರಫ್ತು ಪಾಲನ್ನು ಹೊಂದಿತ್ತು.
- ರಫ್ತುಗಳು ಮುಖ್ಯವಾಗಿ US, ಫಿಲಿಪೈನ್ಸ್ ಮತ್ತು ಆಗ್ನೇಯ ಏಷ್ಯಾ, ಮಧ್ಯಪ್ರಾಚ್ಯ ಮತ್ತು ಆಫ್ರಿಕಾದ ಇತರ ದೇಶಗಳಿಗೆ.
- ಪ್ರಮುಖ ರಫ್ತುಗಳಲ್ಲಿ ಫಿಲಿಪೈನ್ಸ್‌ಗೆ ಬ್ರಹ್ಮೋಸ್ ಕ್ಷಿಪಣಿ ಸೇರಿವೆ, US ದಾಳಿಯ ಹೆಲಿಕಾಪ್ಟರ್ ಅಪಾಚೆ ಬಳಸುವ ಎಲ್ಲಾ ಫ್ಯೂಸ್‌ಲೇಜ್‌ಗಳ ಪೂರೈಕೆ ಇತ್ಯಾದಿ. ಇತ್ತೀಚೆಗೆ, ಭಾರತದ ತೇಜಿಸ್ ಲೈಟ್ ಕಾಂಬ್ಯಾಟ್ ಏರ್‌ಕ್ರಾಫ್ಟ್ (LCA) ಮಲೇಷಿಯಾದ ಫೈಟರ್ ಜೆಟ್ ಆರ್ಡರ್‌ಗೆ ಮುಂಚೂಣಿಯಲ್ಲಿದೆ.

ಮೇಕ್ ಇನ್ ಇಂಡಿಯಾಗೆ ಇತರ ದೇಶಗಳೊಂದಿಗೆ ಸಹಯೋಗದ ಪ್ರಯತ್ನಗಳನ್ನು ಒಳಗೊಂಡಂತೆ ಭಾರತದಲ್ಲಿ ಸ್ಥಳೀಯ ರಕ್ಷಣಾ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರವು ಸಂಘಟಿತ ಪ್ರಯತ್ನಗಳನ್ನು ಮಾಡುತ್ತಿದೆ.

ಭಾರತವು 2025ರ ವೇಳೆಗೆ ಏರೋಸ್ಪೇಸ್ ಮತ್ತು ರಕ್ಷಣಾ ಸರಕುಗಳು ಮತ್ತು ಸೇವೆಗಳಲ್ಲಿ 5 ಬಿಲಿಯನ್ ಡಾಲರ್ ರಫ್ತು ಸೇರಿದಂತೆ 25 ಶತಕೋಟಿ ಡಾಲರ್ ವಹಿವಾಟು ಸಾಧಿಸುವ ಗುರಿ ಹೊಂದಿದೆ.

**ರಫ್ತು ಉತ್ತೇಜಿಸಲು ಭಾರತ ಕೈಗೊಂಡ ಕ್ರಮಗಳು :**

- ಎರಡು ರಕ್ಷಣಾ ಕೈಗಾರಿಕಾ ಕಾರಿಡಾರ್‌ಗಳ ಸ್ಥಾಪನೆ (ಉತ್ತರ ಪ್ರದೇಶ ಮತ್ತು ತಮಿಳುನಾಡು)
- ರಕ್ಷಣಾ ನಾವೀನ್ಯತಾ ಶ್ರೇಷ್ಠತೆ (IDEX) ಸ್ಥಾಪನೆ
- ರಕ್ಷಣಾ ಸ್ವಾಧೀನ ಪ್ರಕ್ರಿಯೆ (DAP) 2020 ರ ರಕ್ಷಣೆಯಲ್ಲಿ 'ಮೇಕ್ ಇನ್ ಇಂಡಿಯಾ' '&' ಆತ್ಮನಿರ್ಭರ್' ವನ್ನು ಉತ್ತೇಜಿಸಲು
- ಮಿಷನ್ ರಕ್ಷಾ ಜ್ಞಾನ ಶಕ್ತಿ (ಸ್ಥಳೀಯ ರಕ್ಷಣಾ ಉದ್ಯಮದಲ್ಲಿ ಐಪಿಆರ್ ಸಂಸ್ಕೃತಿಯನ್ನು ಹೆಚ್ಚಿಸುವುದು)

## ವಾರಣಾಸಿಯಲ್ಲಿ ಅಕ್ಷಯ ಪಾತ್ರಾ ಬೃಹತ್ ಅಡುಗೆ ಮನೆ ಉದ್ಘಾಟನೆ ಮಾಡಿದ–ಪ್ರಧಾನಿ ಮೋದಿ

ಪ್ರತಿನಿತ್ಯ ದೇಶಾದ್ಯಂತ ಅದೆಷ್ಟೋ ಮಕ್ಕಳು ಹಸಿವಿನಿಂದ ನರಳುತ್ತಿರುತ್ತಾರೆ. ಆದ್ರೆ ಶಾಲೆಗಳಲ್ಲಿ ಊಟವನ್ನು ವಿತರಿಸಲು ಆರಂಭಿಸಿದ ನಂತರ ಅದೆಷ್ಟೋ ಮಕ್ಕಳು ಹಸಿವಿನಿಂದಿರೋದು ತಪ್ಪದೆ. ವಾರಣಾಸಿಯಲ್ಲಿ ಪ್ರಧಾನಿ ಮೋದಿ. ಅಕ್ಷಯ ಪಾತ್ರಾ ಎಂಬ ಬೃಹತ್ ಅಡುಗೆ ಮನೆ (Akshaya Patra Kitchen) ಯನ್ನು ಉದ್ಘಾಟಿಸಿದ್ದಾರೆ. ಈ ಯೋಜನೆಯಡಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಪ್ರಯೋಜನ ಸಿಗಲಿದೆ.




**ಅಕ್ಷಯ ಪಾತ್ರಾ ಎಂಬ ಬೃಹತ್ ಅಡುಗೆ ಮನೆಯ ವೈಶಿಷ್ಟ್ಯ:**

- ಅಕ್ಷಯ ಪಾತ್ರ ಒಂದು ರೀತಿಯ ಆಧುನಿಕ ಅಡುಗೆ ಮನೆಯಾಗಿದ್ದು, 3 ಗಂಟೆಗಳಲ್ಲಿ 1 ಲಕ್ಷ ಮಕ್ಕಳಿಗೆ ಊಟ ತಯಾರಿಸುವ ಅಕ್ಷಯ ಪಾತ್ರೆ, ಅರ್ದಲಿ ಬಜಾರ್‌ನ ಎಲ್‌ಟಿ ಕಾಲೇಜು ಕ್ಯಾಂಪಸ್‌ನಲ್ಲಿ ಈ ಅಡುಗೆ ಕೋಣೆಯನ್ನು ಸಿದ್ಧಪಡಿಸಲಾಗಿದೆ.
- 24 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಅಡುಗೆ ಮನೆಯ ವಿಸ್ತೀರ್ಣ 15 ಸಾವಿರ ಚದರ ಮೀಟರ್. ಇಲ್ಲಿ ಒಂದು ಗಂಟೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೊಟ್ಟಿ ತಯಾರಾಗಲಿದೆ. ಎರಡು ಗಂಟೆಯಲ್ಲಿ 1100 ಲೀಟರ್ ಬೇಳೆಕಾಳು, 40 ನಿಮಿಷದಲ್ಲಿ 135 ಕೆಜಿ ಅಕ್ಕಿ ಹಾಗೂ ಎರಡು ಗಂಟೆಯಲ್ಲಿ 11000 ಲೀಟರ್ ತರಕಾರಿ ಉತ್ಪಾದನೆಯಾಗಲಿದೆ. ಅದೇ ಸಮಯದಲ್ಲಿ ಇದು ಒಂದು ಮಿಲಿಯನ್ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ರಚಿಸುವ ಸಾಮರ್ಥ್ಯವನ್ನು ಹೊಂದಿದೆ.
- ಅಕ್ಷಯ ಪಾತ್ರದ ರಾಷ್ಟ್ರೀಯ ಅಧ್ಯಕ್ಷ ಭಾರತ್ ರಿಷವ್ ದಾಸ್, ಮಾತನಾಡಿ, ವಾರಣಾಸಿಯ 148 ಶಾಲೆಗಳ ಮಕ್ಕಳಿಗೆ ಪ್ರಧಾನ ಮಂತ್ರಿಗಳ ಪೌಷ್ಟಿಕಾಂಶ ನಿರ್ಮಾಣ ಯೋಜನೆಯಡಿ ಇಲ್ಲಿಂದ ತಯಾರಿಸಿದ ಪೌಷ್ಟಿಕಾಂಶದ ಆಹಾರವನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.
- ಅಡುಗೆ ಮನೆಯ ವಿಶೇಷತೆಯೆಂದರೆ ಇದು ಸಂಪೂರ್ಣ ಸ್ವಯಂಚಾಲಿತ ಅಡುಗೆಮನೆಯಾಗಿದೆ. ಹಿಟ್ಟಿನಿಂದ ಬ್ರೆಡ್ ತಯಾರಿಸುವ ಯಂತ್ರಗಳು ಸೇರಿದಂತೆ ವಿಶೇಷ ಯಂತ್ರಗನ್ನು ಇಲ್ಲಿ ಲಭ್ಯವಿದೆ.

### ಉತ್ತರಪ್ರದೇಶದಲ್ಲಿ ಐದನೇ ಅಡುಗೆಮನೆ :

ಇದು ದೇಶದಲ್ಲಿ ಅಕ್ಷಯ ಪಾತ್ರದ 62ನೇ ಮತ್ತು ಉತ್ತರ ಪ್ರದೇಶದಲ್ಲಿ ಐದನೇ ಅಡುಗೆಮನೆಯಾಗಿದೆ. ಇದು ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ್ (PM POSHAN) ಯೋಜನೆಯ ಮೂಲಕ 100,00 ಕ್ಕೂ ಹೆಚ್ಚು ಮಕ್ಕಳ ಜೀವನದ ಮೇಲೆ ಪ್ರಭಾವ ಬೀರಲು ಫೌಂಡೇಶನ್ ಅನ್ನು ಸಕ್ರಿಯಗೊಳಿಸುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕ್ಷಯಪಾತ್ರದ ಅಧ್ಯಕ್ಷ ಮಧು ಪಂಡಿತ್ ದಾಸ ವಹಿಸಿದ್ದರು.

## ರಾಮಾನುಚಾರ್ಯರ 'ಶಾಂತಿ ಪ್ರತಿಮೆಯನ್ನು ಅನಾವರಣಗೊಳಿಸಿದ– ಅಮಿತ್ ಶಾ :



ಕಾಶ್ಮೀರದ ಶೂರ್ಯಾರ್ ಮಂದಿರವು ತನ್ನ ಆವರಣದಲ್ಲಿ ಶ್ರೀ ರಾಮಾನುಚಾರ್ಯರ ಮುದ್ದಾದ ಪ್ರತಿಮೆಯನ್ನು ಕಾಣುವ ಮೂಲಕ ತನ್ನ ಹಿರಿಮೆ ಮತ್ತು ಗರಿಮೆಯನ್ನು ಹೆಚ್ಚಿಸಿಕೊಂಡಿತು. ಇದಕ್ಕೆ ಬೆಂಗಳೂರಿನ ಯದುಗಿರಿ ಯತಿರಾಜ ಮಠದ ಶ್ರೀ ಯದುಗಿರಿ ಯತಿರಾಜ ನಾರಾಯಣ ಜೀಯರ್, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ ಮತ್ತು ಸಂಸದ ತೇಜಸ್ವಿ ಸೂರ್ಯ ಸಾಕ್ಷಿಯಾದರು.

ಅಮೃತ ಶಿಲೆಯಲ್ಲಿ ಅರಳಿರುವ ನಾಲ್ಕು ಅಡಿ ಎತ್ತರದ ರಾಮಾನುಜರ ಪ್ರತಿಮೆಯನ್ನು (ಶಾಂತಿ ಪ್ರತಿಮೆ) ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವರ್ಚುಯಲ್ ಆಗಿ ಉದ್ಘಾಟಿಸಿದರು. ಕರ್ನಾಟಕದಲ್ಲಿ 40 ವರ್ಷಗಳ ಕಾಲ ಇದ್ದ ರಾಮಾನುಜರು ತಮ್ಮ ಮೇರುಕೃತಿ ಶ್ರೀಭಾಷ್ಯದ ರಚನೆಗೆ ಮುನ್ನ ಹೆಚ್ಚಿನ ಅಧ್ಯಯನಕ್ಕೆ ಕಾಶ್ಮೀರಕ್ಕೆ ಬಂದಿದ್ದರು. ಅದಾದ ಬಳಿಕವೂ ಅವರು ಇಲ್ಲಿಗೆ ಭೇಟಿ ನೀಡಿದ್ದರು. ಅವರ ಪರಂಪರೆಯನ್ನು ಜೀಯರ್ ಅವರಿ ಮುಂದುವರಿಸಿದ್ದಾರೆ.

ರಾಮಾಜಾನುಚಾರ್ಯರ 1000 ನೇ ಜನ್ಮ ವಾರ್ಷಿಕೋತ್ಸವದ ನೆನಪಿಗಾಗಿ 216 ಅಡಿ ಎತ್ತರದ 'ಸಮಾನತೆಯ ಪ್ರತಿಮೆ'ಯನ್ನು ಪ್ರಧಾನಿ ನರೇಂದ್ರ ಮೋದಿಯವರು ಹೈದರಾಬಾದ್‌ನಲ್ಲಿ ಅನಾವರಣ ಮಾಡಿದ್ದಾರೆ.

## ಮಿಸ್ ಇಂಡಿಯಾ 2022– ಸಿನಿ ಶೆಟ್ಟಿ




ಮುಂಬೈನ ಜಿಯೋ ಕನ್ವೆನ್ಸನ್ ಸೆಂಟರ್‌ನಲ್ಲಿ ನಡೆದ ವಿಎಲ್‌ಸಿಸಿ (VLCC) ಫೆಮಿನಾ ಮಿಸ್ ಇಂಡಿಯಾದ ಗ್ರಾಂಡ್ ಫಿನಾಲೆಯಲ್ಲಿ ಕರ್ನಾಟಕ ಮೂಲದ 21 ವರ್ಷದ ಸಿನಿ ಶೆಟ್ಟಿ ಅವರು ಫೆಮಿನಾ ಮಿಸ್ ಇಂಡಿಯಾ ವರ್ಲ್ಡ್ 2022 (Femina Miss India World 2022) ಪ್ರಶಸ್ತಿ ಗೆದ್ದಿದ್ದಾರೆ. ರಾಜಸ್ಥಾನದ ರೂಬಲ್ ಶೇಖಾವತ್, ಫೆಮಿನಾ ಮಿಸ್ ಇಂಡಿಯಾ 2022 ರ ಮೊದಲ ರನ್ನರ್ ಅಪ್ ಆಗಿ ಹೊರಹೊಮ್ಮಿದ್ದಾರೆ. ಮತ್ತು ಉತ್ತರ ಪ್ರದೇಶದ ಶಿನಾತಾ ಚೌಹಾನ್‌ಅವರು ಫೆಮಿನಾ ಮಿಸ್ ಇಂಡಿಯಾ 2022 ಎರಡನೇ ರನ್ನರ್ ಅಪ್ ಆಗಿದ್ದಾರೆ.

**ಸಿನಿ ಶೆಟ್ಟಿ ಯಾರು?**

ಸಿನಿ ಶೆಟ್ಟಿ ಮುಂಬೈನಲ್ಲಿ ಜನಿಸಿದರು. ಆದರೆ ಕರ್ನಾಟಕ ಮೂಲದವರು ಮತ್ತು ಪ್ರಸ್ತುತ ಚಾರ್ಟರ್ಡರ ಫೈನಾನ್ಸಿಯಲ್ ಅನಾಲಿಸ್ಟ್ (ಸಿಎಫ್ಎ) ವೃತ್ತಿಪರ ಕೋರ್ಸ್ ಮಾಡುತ್ತಿದ್ದಾರೆ. ಸಿನಿ ಶೆಟ್ಟಿ ನೃತ್ಯಗಾರ್ತಿ ಕೂಡ, ತಮ್ಮನಾಲ್ಕನೇ ವಯಸ್ಸಿನಲ್ಲಿ ನೃತ್ಯ ಮಾಡಲು ಪ್ರಾರಂಭಿಸಿ ಹದಿನಾಲ್ಕು ವರ್ಷದವಳಿದ್ದಾಗ ತನ್ನ ಅರಂಗೇತ್ರಂ ಮತ್ತು ಭರತನಾಟ್ಯವನ್ನು ಪೂರ್ಣಗೊಳಿಸಿದರು. ಸಿನಿ ಶೆಟ್ಟಿ ಮುಂಬರುವ 71ನೇ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

**ಪೂರ್ವ ಪ್ರಾಥಮಿಕ ಹಂತದಲ್ಲಿ ಹೊಸ ಶಿಕ್ಷಣ, ನೀತಿ ಜಾರಿಗೊಳಿಸಿದ ಮೊದಲ ರಾಜ್ಯ ಉತ್ತರಾಖಂಡ:**

ಪೂರ್ವ ಪ್ರಾಥಮಿಕ ಹಂತದಲ್ಲಿ ಹೊಸ ಶಿಕ್ಷಣ ನೀತಿಯುನ್ನು ಜಾರಿಗೊಳಿಸುವ ಪ್ರತಿಕ್ರಿಯೆಯುನ್ನು ಆರಂಭಿಸಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಉತ್ತರಾಖಂಡ ಪಾತ್ರವಾಗಿದೆ. ಮುಖ್ಯ ಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಾಜ್ಯದಾದ್ಯಂತ ಅಂಗನವಾಡಿ ಕೇಂದ್ರಗಳಲ್ಲಿ ಬಾಲ ವಾಟಿಕಾಗಳನ್ನು ಉದ್ಘಾಟಿಸಿದರು. ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಉದ್ದೇಶವನ್ನು ಇದು ಒಳಗೊಂಡಿದೆ.



**ಬಾಲ ವಾಟಿಕಾ ಬಗ್ಗೆ :**

- ರಾಜ್ಯದ 4.457 ಅಂಗನವಾಡಿ ಕೇಂದ್ರಗಳಲ್ಲಿ **'ಬಾಲ ವಾಟಿಕಾ'** ಕಾರ್ಯ ನಿರ್ವಹಿಸಲಿದ್ದು, ಖಾಸಗಿ ಶಾಲೆಯ ನರ್ಸರಿ ತರಗತಿಗಳಿಗೆ ಸಮನಾಗಿರುತ್ತದೆ.
- ಹೊಸ ಶಿಕ್ಷಣ ನೀತಿಯು (NEP) ಅನುಷ್ಠಾನವು ವಿದ್ಯಾರ್ಥಿಗಳ ಒಟ್ಟಾರೆ ವ್ಯಕ್ತಿತ್ವ ವಿಕಸನದ ಮೇಲೆ ಕೇಂದ್ರೀಕರಿಸುವ ದೇಶದಲ್ಲಿ ಸಂಸ್ಕೃತಿ ಆಧಾರಿತ ಶಿಕ್ಷಣದ ಆರಂಭವನ್ನು ಸೂಚಿಸುತ್ತದೆ.
- ಹೊಸ ಶಿಕ್ಷಣ ನೀತಿಯ ದಶಕಗಳಿಂದ ದೇಶದಲ್ಲಿ ಅನುಸರಿಸುತ್ತಿದ್ದ ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ಬದಲಿಸುತ್ತದೆ. 'ಇದು ಮಕ್ಕಳಿಗೆ ಆಯ್ಕೆ ಆಧಾರಿತ ಶಿಕ್ಷಣವನ್ನು ಮುಂದುವರಿಸಲು ಅವಕಾಶವನ್ನು ನೀಡುತ್ತದೆ. ಈಗ ಅವರು ಮಾತನಾಡುವ ಭಾಷೆಯಲ್ಲಿ ತಮ್ಮ ಆಯ್ಕೆಯ ವಿಷಯಗಳನ್ನು ಅಧ್ಯಯನ ಮಾಡಬಹುದು.

ದೇಶದಲ್ಲಿ ಮೊದಲ ಬಾರಿಗೆ ವಿಶ್ವವಿದ್ಯಾಲಯದ ಹಂತದಲ್ಲಿ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ ಮೊದಲ ರಾಜ್ಯ ಕರ್ನಾಟಕ. ಹಾಗೂ ದೇಶದಲ್ಲಿ ಹೊಸ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡು ಮೊದಲ ವಿಶ್ವವಿದ್ಯಾಲಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

**ಉತ್ತರಾಖಂಡ ರಾಜಧಾನಿ:** ಡೆಹ್ರಾಡೂನ್ (ಚಳಿಗಾಲ), ಗೈರ್ಸೈನ್ (ಬೇಸಿಗೆ) :

**ಉತ್ತರಾಖಂಡ ಮುಖ್ಯಮಂತ್ರಿ:** ಪುಷ್ಕರ್ ಸಿಂಗ್ ಧಾಮಿ:

**ಉತ್ತರಾಖಂಡ ರಾಜ್ಯಪಾಲ:** ಗುರ್ಮಿತ್ ಸಿಂಗ್.

**New Education Policy 2020 ಬಗ್ಗೆ :**

- 29 ಜುಲೈ 20020 ರಂದು ಭಾರತದ ಕೇಂದ್ರ ಸಚಿವ ಸಂಪುಟದಿಂದ ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ 2020 ಅನುಮೋದಿಸಲ್ಪಟ್ಟಿದೆ. ಹೊಸ ಶಿಕ್ಷಣ ನೀತಿಯು ಹಿಂದಿನ ರಾಷ್ಟ್ರೀಯ ಶಿಕ್ಷಣ ನೀತಿ 1986 ಅನ್ನು ಬದಲಿಸುತ್ತದೆ.
- ಇದರ ಅಧ್ಯಕ್ಷರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಾಜಿ ಮುಖ್ಯಸ್ಥ ಕೃಷ್ಣಸ್ವಾಮಿ ಕಸ್ತೂರಿರಂಗನ್ ನೇತೃತ್ವದ ಸಮಿತಿಯು 2019 ರಲ್ಲಿ ಕರಡು NEP ಅನ್ನು ಸಲ್ಲಿಸಿದೆ.

**ಕಲಿಯುವುದರೊಂದಿಗೆ ಸಂಪಾದಿಸುವ ಯೋಜನೆಯನ್ನು ಪ್ರಾರಂಭಿಸಿದ-ತ್ರಿಪುರಾ :**

ಕೋವಿಡ್-19 ಏಕಾಏಕಿ ಶಾಲೆಯಿಂದ ಹೊರಗುಳಿದವರನ್ನು ಮರಳಿ ಕರೆತರಲು ತ್ರಿಪುರಾ ಸರ್ಕಾರವು Earn With Learn ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ.

ಈ ಯೋಜನೆಯು **'ವಿದ್ಯಾಲಯ ಚಲೋ ಅಭಿಯಾನ'ದ** (ನಾವು ಶಾಲೆಗೆ ಹೋಗೋಣ) ಒಂದು ಭಾಗವಾಗಿದೆ. 2009 ರಲ್ಲಿ ಪ್ರಾರಂಭವಾದ ವಿದ್ಯಾಲಯ ಚಲೋ ಅಭಿಯಾನವನ್ನು ಜಾರಿಗೆ ತರುವ ಮೂಲಕ ಸರ್ಕಾರವು 2020 ರಲ್ಲಿ ಶಾಲೆ ಮಕ್ಕಳನ್ನು ಮರಳಿ ತರಲು ಪ್ರಯತ್ನಿಸಿತು ಆದರೆ ಸಾಂಕ್ರಾಮಿಕ ರೋಗದಂದಾಗಿ ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ. 6 ರಿಂದ 14 ವರ್ಷದೊಳಗಿನ ಸುಮಾರು 9.000 ವಿದ್ಯಾರ್ಥಿಗಳು ಸಾಂಕ್ರಾಮಿಕ ಸಮಯದಲ್ಲಿ ಶಾಲೆಯನ್ನು ತೊರೆದಿದ್ದಾರೆ.

ಶಾಲೆ ಬಿಟ್ಟ ವಿದ್ಯಾರ್ಥಿಯನ್ನು ಅದೇ ಶಾಲೆಗೆ ಸೇರಿಸಿದರೆ ಪ್ರತಿ ಸ್ವಯಂಸೇವಕರಿಗೆ 500 ರೂ. ಸ್ವಯಂಸೇವಕರಿಗೆ ಸಹಾಯ ಮಾಡುತ್ತಾರೆ.

**ತ್ರಿಪುರಾ ರಾಜಧಾನಿ :** ಅಗರ್ತಲಾ:

**ತ್ರಿಪುರ ಮುಖ್ಯಮಂತ್ರಿ:** ಮಾಣಿಕ್ ಸಹಾ:

**ತ್ರಿಪುರ ರಾಜ್ಯಪಾಲ: ಸತ್ಯದೇವ್ ನಾರಾಯಣ ಆರ್ಯ:**

ತ್ರಿಪುರ ಬುಡಕಟ್ಟುಗಳು : ತ್ರಿಪುರ/ತ್ರಿಪುರಿ, ಕ್ರಿಂಗ್, ಜಮ್ತಿಯಾ.

## ವೈ.ಎಸ್.ಆರ್ ಕಾಂಗ್ರೆಸ್ ಸಮಾವೇಶದಲ್ಲಿ ಅಜೀವ ಅಧ್ಯಕ್ಷರಾಗಿ ಜಗನ್ ಮೋಹನ್ ರೆಡ್ಡಿ ಆಯ್ಕೆ



ಪಕ್ಷವನ್ನು ಮತ್ತಷ್ಟು ಬಲಗೊಳಿಸಲು ಆಂಧ್ರಪ್ರದೇಶದ ಗುಂಟೂರಿನಲ್ಲಿ ಜುಲೈ 8 ರಿಂದ ಆಯೋಜಿಸಿದ್ದ ಎರಡು ದಿನಗಳ ಯುವಜನ ಶ್ರಮಿಕ ರೈತ ಕಾಂಗ್ರೆಸ್ ಪಕ್ಷದ (ವೈಎಸ್ಆರ್‌ಸಿಪಿ) ಸಮಾವೇಶದಲ್ಲಿ ಕೆಲವು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ಸಭೆಯಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ವೈಎಸ್. ಜಗನ್ ಮೋಹನ್ ರೆಡ್ಡಿ ಅವರನ್ನು ವೈಎಸ್ಆರ್‌ಸಿಪಿಯ ಅಜೀವ ಅಧ್ಯಕ್ಷರ ರನ್ನಾಗಿ ಸರ್ವಾನುಮತದಿಂದ ಚುನಾಯಿ ಸಲಾಗಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಜಗನ್ ಅವರ ಪರವಾಗಿ ಒಟ್ಟು 22 ನಾಮನಿರ್ದೇಶನಗಳು ಸಲ್ಲಿಕೆಯಾಗಿದ್ದವು. ಇತರ ಯಾವುದೇ ನಾಮಪತ್ರ ಸಲ್ಲಿಕೆಯಾಗಿರಲ್ಲ.

ಸಭೆಯಲ್ಲಿ ನೆರೆದಿದ್ದ ಭಾರಿ ಜನಸಮೂಹದ ಎದುರು ವೈಎಸ್ಆರ್‌ಸಿಪಿ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ವಿ ವಿಜಯಸಾಯಿ ರೆಡ್ಡಿ ಅವರು ಜಗನ್ ಅವರನ್ನು ಪಕ್ಷದ ಅಜೀವ ಅಧ್ಯಕ್ಷರನ್ನಾಗಿ ಆರಿಸಿರುವುದನ್ನು ಪ್ರಕಟಿಸಿದರು.

ಪಕ್ಷವು ತನ್ನ ಸಂವಿಧಾನಕ್ಕೆ ಪ್ರಮುಖವಾಗಿ ಎರಡು ತಿದ್ದಪಡಿಗಳನ್ನು ಮಾಡಿದೆ. ಮೊದಲನೆಯದು ಯುವಜನ ಶ್ರಮಿಕರಿತು ಕಾಂಗ್ರೆಸ್ ಪಾರ್ಟಿ ಎಂಬ ಹೆಸರಿನಿಂದ ವೈಎಸ್ಆರ್ ಕಾಂಗ್ರೆಸ್ ಪಕ್ಷ (ವೈಎಸ್ಆರ್ ಸಿಪಿ) ಎಂದು ಬದಲಾಯಿಸುವುದು. ಎರಡನೆಯದು ಅಧ್ಯಕ್ಷರ ಹುದ್ದೆಯ ಅವಧಿಯನ್ನು ಜೀವವಮಾನಕ್ಕೆ ಬದಲಾಯಿಸುವುದು.

**ಜಗನ್ ಮೋಹನ್ ರೆಡ್ಡಿ ಬಗ್ಗೆ :**

- Y.S. ಜಗನ್ ಅಥವಾ ಜಗನ್ ಎಂದೂ ಕರೆಯಲ್ಪಡುವ ಯಡುಗುರಿ ಸಂದಿಂತಿ ಜಗನ್ ಮೋಹನ್ ರೆಡ್ಡಿ ಅವರು 2019 ರಿಂದ ಆಂಧ್ರಪ್ರದೇಶದ 17 ನೇ ಮುಖ್ಯಮಂತ್ರಿಯಾಗಿ ಮುನ್ನಡೆಸುತ್ತಿದ್ದಾರೆ.
- ಕಾಂಗ್ರೆಸ್‌ನಿಂದ ಬೇರ್ಪಟ್ಟ ನಂತರ ಜಗನ್ 2011 ರಲ್ಲಿ ವೈಎಸ್ಆರ್‌ಸಿಪಿ ಸ್ಥಾಪಿಸಿದರು.
- ಇವರು ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ

ರೆಡ್ಡಿಯವರ ಪುತ್ರ.

➢ 2014 ಮತ್ತು 2019 ರ ನಡುವೆ ಅವರು ಆಂಧ್ರಪ್ರದೇಶ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು.

**<u>ತ್ರಿಪುರಾದಲ್ಲಿ ಖಾರ್ಚಿ ಹಬ್ಬ :</u>**

ತ್ರಿಪುರಾದ ಖಯೇರ್‌ಪುರದಲ್ಲಿ ಸಾವಿರಾರು ಭಕ್ತರು ಸೇರುವುದರೊಂದಿಗೆ 14 ದೇವರುಗಳು ಮತ್ತು ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುವ ಒಂದು ವಾರದ ಸಾಂಪ್ರದಾಯಿಕ ಖಾರ್ಚಿ ಉತ್ಸವವು ಪ್ರಾರಂಭವಾಯಿತು. ಖಾರ್ಚಿ ಪೂಜೆಯು ಪ್ರಧಾನವಾಗಿ ಬುಡಕಟ್ಟು ಹಬ್ಬವಾಗಿದೆ ಆದರೆ ಅದರ ಮೂಲವು ಹಿಂದೂ ಧರ್ಮಕ್ಕೆ ಋಣಿಯಾಗಿದೆ. ಭಾರತ ಮತ್ತು ನೆರೆಯ ಬಾಂಗ್ಲಾದೇಶದ ಭಕ್ತರು ಮತ್ತು ಸಾಧುಗಳು ಉತ್ಸವದಲ್ಲಿ ಭಾಗವಹಿಸಿದ್ದಾರೆ.

**<u>ಖಾರ್ಚಿ ಹಬ್ಬದ ಹಿನ್ನೆಲೆ :</u>**

➢ ತ್ರಿಪುರಾ ರಾಜಮನೆತನದ **"ರಾಜಮಾಲಾ"** ಪ್ರಕಾರ, ರಾಣಿ ಹಿರಾವತಿ ಒಮ್ಮೆ ಮಹಾರಾಣಿ ನದಿಯಲ್ಲಿ ಸ್ನಾನ ಮಾಡಲು ಹೋದರು ಮತ್ತು ಕಾಡು ಎಮ್ಮೆ 14 ದೇವರುಗಳನ್ನು ಅಟ್ಟಿಸಿಕೊಂಡು ಹೋಗುವುದನ್ನು ಗಮನಿಸಿದರು. ರಾಣಿಯು ಬಟ್ಟೆಯ ಸಹಾಯದಿಂದ ದೇವರುಗಳು ಮೃಗವನ್ನು ಕೊಲ್ಲುವಲ್ಲಿ ಯಶಸ್ವಿಯಾದರು. ಹೀರಾ ವತಿಯು ಸಹಾಯದಿಂದ ಸಂತೋಷಗೊಂಡ ದೇವರುಗಳು ಅರಮನೆಗೆ ಭೇಟಿ ನೀಡಿದರು ಮತ್ತು ರಾಜಮನೆತ ನದವರು ಕಾಡು ಎಮ್ಮೆಗಳನ್ನು ಬಲಿ ನೀಡುವ ಮೂಲಕ ಪೂಜೆ ಸಲ್ಲಿಸಿದರು.

**ತ್ರಿಪುರಾ ರಾಜಧಾನಿ :** ಅಗರ್ತಲಾ

**ತ್ರಿಪುರ ಮುಖ್ಯಮಂತ್ರಿ:** ಡಾ: ಮಾಣಿಕ್ ಸಹಾ

**ರಾಜ್ಯಪಾಲ: ಸತ್ಯದೇವ್ ನಾರಾಯಣ ಆರ್ಯ**

**13 ಎಕ್ಸ್‌ಪ್ರೆಸ್ ಹೆದ್ದಾರಿಗಳನ್ನು ಹೊಂದಿದ ಮೊದಲ ರಾಜ್ಯ – ಉತ್ತರ ಪ್ರದೇಶ**

ರಾಜ್ಯದಲ್ಲಿ 3,200 ಕಿ.ಮೀ. ವ್ಯಾಪ್ತಿಯ 13 ಎಕ್ಸ್‌ಪ್ರೆಸ್‌ವೇಗಳಲ್ಲಿ ಆರು ಕಾರ್ಯನಿರ್ವಹಿಸುತ್ತಿವೆ ಮತ್ತು ಏಳರಲ್ಲಿ ಕೆಲಸ




ನಡೆಯುತ್ತಿದೆ. ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್‌ವೇಗಳ ಉದ್ದಕ್ಕೂ ಕೈಗಾರಿಕಾ ಕಾರಿಡಾರ್‌ಗಳನ್ನು ನಿರ್ಮಿಸಲಾಗುತ್ತಿದೆ. ವಾಯುಪಡೆಯ ತುರ್ತು ಬಳಕೆಗಾಗಿ ಏರ್‌ಸ್ಟ್ರಿಪ್‌ಗಳು ಬರಲಿವೆ. ರಾಜ್ಯವು ಈಗ 13 ಎಕ್ಸ್‌ಪ್ರೆಸ್‌ವೇಗಳನ್ನು ಹೊಂದುವ ಮೂಲಕ ಅತಿ ಹೆಚ್ಚು ಎಕ್ಸ್‌ಪ್ರೆಸ್‌ವೇಗಳನ್ನು ಹೊಂದಿದ ರಾಜ್ಯವಾಗಿದೆ.

ಇತರ ರಾಜ್ಯಗಳು ಮತ್ತು ಇತರ ರಾಷ್ಟ್ರಗಳನ್ನು ಸಂಪರ್ಕಿಸುವ ರಸ್ತೆಮಾರ್ಗಗಳ ಜಾಲವನ್ನು ಸ್ಥಾಪಿಸಲಾಗಿದೆ, ಇದು ಕುಗ್ರಾಮದಿಂದ ಪ್ರಾರಂಭಿಸಿ ರಸ್ತೆಗಳ ಮೂಲಕ ಬ್ಲಾಕ್ ಮತ್ತು ಜಿಲ್ಲಾ ಕಛೇರಿಗಳಿಗೆ ಮುಂದುವರಿಯುತ್ತದೆ. 70 ವರ್ಷಗಳಲ್ಲಿ, ಕೇವಲ 1.5 ಎಕ್ಸ್‌ಪ್ರೆಸ್‌ವೇಗಳನ್ನು ನಿರ್ಮಿಸಲಾಗಿದೆ.

ಸ್ವಾತಂತ್ರ್ಯದ ನಂತರ 70 ವರ್ಷಗಳಲ್ಲಿ ಉತ್ತರ ಪ್ರದೇಶದಲ್ಲಿ ಎರಡು ಎಕ್ಸ್‌ಪ್ರೆಸ್‌ವೇಗಳು ಪೂರ್ಣಗೊಂಡಿಲ್ಲ. ದೆಹಲಿ–ಮೀರತ್ ಎಕ್ಸ್‌ಪ್ರೆಸ್‌ವೇ ಸೇರಿದಂತೆ ಎಕ್ಸ್‌ಪ್ರೆಸ್‌ವೇಗಳ ಸರಣಿಯೊಂದಿಗೆ,

ರಾಜ್ಯದಲ್ಲಿಡಬಲ್ ಎಂಜಿನ್ ಬೆಳವಣಿಗೆಯ ಪ್ರಸ್ತುತ ಸರ್ಕಾರವು ದಶಕಗಳ ಹಿಂದಿನ ಬೇಡಿಕೆಯನ್ನು ಈಡೇರಿಸಿದೆ ನಾಲ್ಕು ಲೇನ್ ಎಕ್ಸ್‌ಪ್ರೆಸ್‌ವೇ ಭವಿಷ್ಯದಲ್ಲಿ ಆರು ಲೇನ್‌ಗಳಿಗೆ ವಿಸ್ತರಣೆಗೆ ಅವಕಾಶವನ್ನು ಹೊಂದಿದೆ.

**ಉದ್ಘದ ಬುಂದೇಲ್‌ಖಂಡ್ ಎಕ್ಸ್ ಪ್ರೆಸ್‌ವೇ :**

- ಜುಲೈ 16 ರಂದು ಉತ್ತರ ಪ್ರದೇಶದಲ್ಲಿ 296 ಕಿ.ಮೀ. ಉದ್ದದ ಬುಂದೇಲ್‌ಖಂಡ್ ಎಕ್ಸ್ ಪ್ರೆಸ್‌ವೇಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಈ ಎಕ್ಸ್‌ಪ್ರೆಸ್‌ವೇ ಚಿತ್ರಕೂಟ ಜಿಲ್ಲೆಯ ಭಾರತ್ ಕೂಪ್ ಬಳಿ ಪ್ರಾರಂಭವಾಗುತ್ತದೆ ಮತ್ತು ಇಟಾವಾ ಜಿಲ್ಲೆಯ ಕುಡ್ರೈಲ್ ಗ್ರಾಮದ ಬಳಿ ಅಗ್ರಾ-ಲಕ್ನೋ ಎಕ್ಸ್‌ಪ್ರೇಸ್‌ವೇಯೊಂದಿಗೆ ವಿಲೀನಗೊಳ್ಳುತ್ತದೆ. ಇದು ಚಿತ್ರಕೂಟ, ಬಂದಾ, ಮಹೋಬಾ, ಹಮೀರ್‌ಪುರ್, ಜಲೌನ್, ಔರೈಯಾ ಮತ್ತು ಇಟಾವಾ ಎಂಬ ಏಳು ಜಿಲ್ಲೆಗಳನ್ನು ಒಳಗೊಂಡಿದೆ.
- ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್‌ವೇ ದೆಹಲಿ ಮತ್ತು ಚಿತ್ರಕೂಟ ನಡುವಿನ ಪ್ರಯಾಣದ 9-10 ಗಂಟೆಗಳಿಂದ ಆರು ಗಂಟೆಗಳವರೆಗೆ ಕಡಿಮೆ ಮಾಡುತ್ತದೆ.
- ಈ ಯೋಜನೆಯ ಒಟ್ಟು ವೆಚ್ಚ ಸುಮಾರು 15,000 ಕೋಟಿ ರೂ.

**ಭಾರತದ ಮೊದಲ ಆರೋಗ್ಯ ಹಕ್ಕು ಮಸೂದೆ ಮಂಡಿಸಲಿರುವ ರಾಜ್ಯ- ರಾಜಸ್ಥಾನ**

ರಾಜಸ್ಥಾನ ಸರ್ಕಾರವು ಶೀಘ್ರದಲ್ಲೇ ಅಸೆಂಬ್ಲಿಯಲ್ಲಿ ಆರೋಗ್ಯ ಹಕ್ಕು ಮಸೂದೆಯನ್ನು ಪರಿಚಯಿಸಲಿದೆ, ಇದು "ಭಾರತದಲ್ಲಿಯೇ ಮೊದಲನೆಯದು" ಇದು ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸೇವೆ ಒದಗಿಸುವ ಮೂಲಕ ಗುಣಮಟ್ಟದ ಮತ್ತು ಕೈಗೆಟುಕುವ ಆರೋಗ್ಯ ಸೇವೆಗಳಿಗೆ ಬದ್ಧರಾಗುವ ಗುರಿಯನ್ನು ಹೊಂದಿದೆ.

**ಮಸೂದೆಯ ಪ್ರಮುಖ ಅಂಶಗಳು :**

- ಆರೋಗ್ಯದ ಹಕ್ಕು ಮಸೂದೆಯು ರಾಜ್ಯದಲ್ಲಿ ವೈದ್ಯಕೀಯ ಸೇವೆಗಳನ್ನು ವಿಸ್ತರಿಸುವ ಮತ್ತು ಬಲಪಡಿಸುವ ರಾಜಸ್ಥಾನ ಸರ್ಕಾರದ ಪ್ರಯತ್ನದ ಭಾಗವಾಗಿದೆ.
- ಇತ್ತೀಚೆಗೆ, ಜೈಪುರದ ಸಂಗನೇರಿ




ಗೇಟ್‌ನಲ್ಲಿರುವ ಮಹಿಳಾ ಚಿಕಿತ್ಸಾಲಯದಲ್ಲಿ (ಮಹಿಳಾ ಆಸ್ಪತ್ರೆ) ಸೌಲಭ್ಯಗಳ ವಿಸ್ತರಣೆಗೆ ಮುಖ್ಯಮಂತ್ರಿ 117 ಕೋಟಿ ರೂ. ನೀಡಿದ್ದಾರೆ.
- ಮುಖ್ಯಮಂತ್ರಿ ಚಿರಂಜೀವಿ ಸ್ವಾಸ್ಥ್ಯ ಬಿಮಾ ಯೋಜನೆ ಮೂಲಕ ಜನರಿಗೆ 10 ಲಕ್ಷದವರೆಗೆ ಉಚಿತ ಚಿಕಿತ್ಸೆ ನೀಡುವ ಮೂಲಕ ರಾಜ್ಯವು ಪ್ರತಿ ಕುಟುಂಬದ ಆರೋಗ್ಯ ಭದ್ರತೆಯನ್ನು ಖಾತ್ರಿಪಡಿಸಿದೆ.
- ಇದರೊಂದಿಗೆ ಯೋಜನೆಯಲ್ಲಿ ನೋಂದಣಿಯಾದ ಕುಟುಂಬಗಳಿಗೆ 5 ಲಕ್ಷ ರೂ.ವರೆಗೆ ಅಪಘಾತ ವಿಮೆ ನೀಡಲಾಗುತ್ತಿದೆ.
- ಅಲ್ಲದೆ, ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಬರುವ ರೋಗಗಳಿಗೆ ಔಷಧ ಮತ್ತು ಪರೀಕ್ಷೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

**ರಾಜಸ್ಥಾನದ ಗವರ್ನರ್:** ಕಲ್ರಾಜ್ ಮಿಶ್ರಾ:
**ರಾಜಸ್ಥಾನ ರಾಜಧಾನಿ:** ಜೈಪುರ:
**ರಾಜಸ್ಥಾನ ಮುಖಮಂತ್ರಿ:** ಅಶೋಕ್ ಗೆಹ್ಲೋಟ್

**ಮಹಿಳೆಯರಿಗಾಗಿ 'ನಾರಿ ಕೊ ನಮನ್' ಯೋಜನೆ– ಹಿಮಾಚಲ ಪ್ರದೇಶ :**

ಹಿಮಾಚಲ ಪ್ರದೇಶದ ಮುಖ್ಯ ಮಂತ್ರಿ ಜೈ ರಾಮ್ ಠಾಕೂರ್ ಅವರು 'ನಾರಿ ಕೊ ನಮನ್' ಯೋಜನೆಯನ್ನು ಪ್ರಾರಂ ಭಿಸಿದರು. ರಾಜ್ಯದೊಳಗೆ ಪ್ರಯಾಣಿಸಲು ಮಹಿಳೆಯರಿಗೆ ಬಸ್ ಪ್ರಯಾಣ ದರದಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ನೀಡುವ ಗುರಿಯನ್ನು ಹೊಂದಿದೆ. ಮಹಿಳಾ ಪ್ರಯಾಣಿಕರು ಮತ್ತು ಹಿರಿಯ ನಾಗರಿಕರನ್ನು ಸಾಗಿಸುವ ಉಪಕ್ರಮವಾದ 'ರೈಡ್ ವಿತ್ ಪ್ರೈಡ್' ಸರ್ಕಾರಿ ಟ್ಯಾಕ್ಸಿ ಸೇವೆಯಲ್ಲಿ 25




ಹೊಸ ಮಹಿಳಾ ಚಾಲಕರ ಹುದ್ದೆಗಳನ್ನು ಮಂಜೂರು ಮಾಡಲು ರಾಜ್ಯ ಸರ್ಕಾರ ಘೋಷಿಸಿದೆ.

ಎಲ್ಲಾ ಪ್ರಯಾಣಿಕರಿಗೆ ಕನಿಷ್ಠ ಬಸ್ ದರವನ್ನು ರೂ 7. ರಿಂದ ರೂ. 5 ಕ್ಕೆ ಇಳಿಸುವುದಾಗಿ ಸಿಎಂ ಘೋಷಿಸಿದ್ದಾರೆ.

ಏಪ್ರಿಲ್ 15 ರಂದು ಹಿಮಾಚಲ ಸ್ಥಾಪನಾ ದಿನದಂದು ಮಹಿಳೆಯರಿಗಾಗಿ ಈ ಯೋಜನೆಯನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ.

**ಹಿಮಾಚಲ ಪ್ರದೇಶ ರಾಜಧಾನಿ:**_ಶಿಮ್ಲಾ (ಬೇಸಿಗೆ), ಧರ್ಮಶಾಲಾ (ಚಳಿಗಾಲ):
**ಹಿಮಾಚಲ ಪ್ರದೇಶದ ಮುಖ್ಯಮಂತ್ರಿ:** ಜೈ ರಾಮ್ ಠಾಕೂರ್ :
**ಹಿಮಾಚಲ ಪ್ರದೇಶದ ರಾಜ್ಯಪಾಲರು:** ರಾಜೇಂದ್ರ ವಿಶ್ವನಾಥ್ಥ ಅರ್ಲೇಕರ್.

**ರಾಹುಲ್ ಸಾರ್ವೇಕರ್ ದೇಶದ ಅತ್ಯಂತ ಕಿರಿಯ ಸ್ಪೀಕರ್**



ವ್ಯಂಬೈ ವಕೀಲರು ಮತ್ತು ಮೊದಲ ಬಾರಿಗೆ ಶಾಸಕರಾದ ರಾಹುಲ್ ನಾರ್ವೇಕರ್ ಅವರು ಮಹಾರಾಷ್ಟ್ರ ವಿಧಾನಸಭೆಯ ಅತ್ಯಂತ ಕಿರಿಯ ಸ್ಪೀಕರ್ ಆಗಿ ಆಯ್ಕೆಯಾಗಿದ್ದಾರೆ ಮತ್ತು ಈ ಶ್ರೇಷ್ಠ ಸಾಂವಿಧಾನಿಕ ಹುದ್ದೆಯನ್ನು ಅಲಂಕರಿಸಿದ ಭಾರತದಲ್ಲಿ ಕಿರಿಯ ವಯಸ್ಸಿನವರಾಗಿದ್ದಾರೆ. ಉಪ ಸ್ಪೀಕರ್ ನರಹರಿ ಜಿರ್ವಾಲ್ ಅವರು ಸದನದಲ್ಲಿ ಹಂಗಾಮಿ ಸ್ಪೀಕರ್‌ರಾಗಿ ಪಾತ್ರವನ್ನು ನಿರ್ವಹಿಸುತ್ತಿದ್ದರು.

ನಾರ್ವೇಕರ್ ಅವರು 16ನೇ ಸ್ಪೀಕರ್ ಆಗಿ (1960 ರಿಂದ) ಚುನಾಯಿತರಾದ ಅತ್ಯಂತ ಕಿರಿಯ ಶಾಸಕರಾಗಿ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಮತ್ತು ಈಗ ದೇಶದ ಅತ್ಯಂತ ಉನ್ನತ ಶಾಸಕ ಸ್ಥಾನವನ್ನು ಅಲಂಕರಿಸಿದ ಅತ್ಯಂತ ಕಿರಿಯ ಶಾಸಕರಾಗಿದ್ದಾರೆ. ಸಾರ್ವೇಕರ್ ಬೆಂಬಲವಾಗಿ ಒಟ್ಟು 164 ಮತಗಳನ್ನು ಪಡೆದಿದ್ದು, 107 ಮತಗಳನ್ನು ಶಿವಸೇನೆ ಅಭ್ಯರ್ಥಿ ಪಡೆದರು.

**ಮಹಾರಾಷ್ಟ್ರದ ರಾಜ್ಯಪಾಲರು :** ಭಗತ್ ಸಿಂಗ್ ಕೋಶ್ಯಾರಿ:
**ಮಹಾರಾಷ್ಟ್ರ ಮುಖ್ಯಮಂತ್ರಿ:** ಏಕನಾಥ್ ಶಿಂದೆ:
**ಮಹಾರಾಷ್ಟ್ರದ ರಾಜಧಾನಿ:** ಮುಂಬೈ

## <u>ಸ್ಪೀಕರ್ ಹುದ್ದೆಯ ಬಗ್ಗೆ :</u>

ಭಾರತ ಸಂವಿಧಾನದ 178 ನೇ ವಿಧಿಯು ಬಾರತೀಯ ರಾಜ್ಯದ ಶಾಸನಕಾಂಗ ಸಭೆಯ ಅಧಿವೇಶನಗಳ ಅಧ್ಯಕ್ಷತೆಯ ಸ್ಪೀಕರ್ ಹುದ್ದೆಗೆ ಅವಕಾಶ ನೀಡಿದೆ. ಹಾಗೆ 93 ನೇ ವಿಧಿಯು ಲೋಕಸಭೆಯಲ್ಲಿ ಇದೇ ರೀತಿಯ ಸ್ಪೀಕರ್ ಹುದ್ದೆಗೆ ಅವಕಾಶ ನೀಡಿದೆ. ಇಂಗ್ಲಿಂಡ್‌ನ ಹೌಸ್ ಆಫ್ ಕಾಮನ್ಸ್‌ನಲ್ಲಿರುವ ಸ್ಪೀಕರ್ ಕಛೇರಿಯ ಮಾದರಿಯಲ್ಲಿ ಭಾರತೀಯ ಸ್ಪೀಕರ್‌ಗಳ ಕಛೇರಿಯನ್ನು ರಚಿಸಲಾಗಿದೆ.

**ಸ್ಪೀಕರ್/ಸಭಾಧ್ಯಕ್ಷರ ಆಯ್ಕೆ :** ರಾಜ್ಯದ ಪ್ರತಿ ಸಾರ್ವತ್ರಿಕ ಚುನಾವಣೆಯ ನಂತರ ರಾಜ್ಯದಲ್ಲಿನ ಶಾಸಕಾಂಗ ಸಭೆಯು ತನ್ನ ಮೊದಲ ಅಧಿವೇಶನದಲ್ಲಿ ತನ್ನ ಸದಸ್ಯರಿಂದ ಸ್ಪೀಕರ್ ಮತ್ತು ಉಪಸಭಾಪತಿಯನ್ನು ಆಯ್ಕೆ ಮಾಡುತ್ತದೆ. ಸ್ಪೀಕರ್ ಕಛೇರಿಯಲ್ಲಿ ಗೈರುಹಾಜರಾದ ಸಂದರ್ಭದಲ್ಲಿ, ಉಪಸಭಾಪತಿ ಅವರ ಸ್ಪೀಕರ್ ಅವರ ಸ್ಥಾನವನ್ನು ತುಂಬುತ್ತಾರೆ. ಸ್ಪೀಕರ್ ಸಾಮಾನ್ಯವಾಗಿ ಆಡಳಿತ ಪಕ್ಷಕ್ಕೆ ಸೇರಿದವರು. ಮುಂದಿನ ಸ್ಪೀಕರ್ ಪ್ರಮಾಣ ವಚನ ಸ್ವೀಕರಿಸುವವರೆಗೂ ಸ್ಪೀಕರ್ ಹುದ್ದೆಯಲ್ಲಿ ಇರುತ್ತಾರೆ.

**<u>ಹುದ್ದೆ ಖಾಲಿಯಾಗುವ ಸಂದರ್ಭ :</u>**

1) ಅವರು ರಾಜೀನಾಮೆ ನೀಡಿದರೆ,

2) ಅಸೆಂಬ್ಲಿಯ ನಿರ್ಣಯದ ಮೂಲಕ ಅಧಿಕಾರದಿಂದ ತೆಗೆದುಹಾಕಿದರೆ,

3) ಅವರು ಸದನದ ಸದಸ್ಯರಾಗಲು ವಿಫಲರಾದರೆ, ಮತ್ತು

4) ಅವರು ಮೃತಪಟ್ಟರೆ.

**ಹುದ್ದೆಯಿಂದ ಕೆಳಗಿಳಿಸುವ ವಿಧಾನ :** ವಿಧಾನಸಭೆಯ ನಿರ್ಣಯದ ಮೂಲಕ ಸ್ಪೀಕರ್ ಪದಚ್ಯುತಿಗೆ 14 ದಿನಗಳ ನೋಟಿಸ್ ಅಗತ್ಯವಿದೆ. ಅವರ ಪದಚ್ಯುತಿ ಕುರಿತು ವಿಧಾನಸಭೆಯಲ್ಲಿ ಚರ್ಚೆ ನಡೆಯುವಾಗ ಅವರ ವಿಧಾನಸಭೆಯ ಅಧ್ಯಕ್ಷತೆ ವಹಿಸುವಂತ್ತಿಲ್ಲ.

## <u>ದೇಶದಾದ್ಯಂತ "ಹರ್‌ಘರ್ ತಿರಂಗಾ" ಅಭಿಯಾನ</u>

ಕೇಂದ್ರ ಸರ್ಕಾರವು 75 ನೇ




ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಷ್ಟ್ರವ್ಯಾಪಿ "ಹರ್ ಘರ್ ತಿರಂಗಾ" ಅಭಿಯಾನವನ್ನು ಪ್ರಾರಂಭಸಲಾಗಿದೆ.

**ಹರ್ ಘರ್ ತಿರಂಗಾ ಅಭಿಯಾನದ ಕುರಿತು ಪ್ರಮುಖ ಅಂಶಗಳು :** ಭಾರತದಲ್ಲಿ ರಾಷ್ಟ್ರೀಯ ಧ್ವಜವನ್ನು ಹೇಗೆ ನಿಯಂತ್ರಿಸಲಾಗುತ್ತದೆ? ಭಾರತದ ಧ್ವಜ ಸಂಹಿತೆ, 2022 ಪರಿಷ್ಕೃತ ಧ್ವಜ ಸಂಹಿತೆ, 2022 ರಾಷ್ಟ್ರೀಯ ಧ್ವಜದ ಆಕಾರ ಮತ್ತು ಗಾತ್ರ ಪ್ರದರ್ಶನದಲ್ಲಿ ನಿರ್ಬಂಧಗಳು ಪ್ರಮುಖ ಅಂಶಗಳ ಬಗ್ಗೆ ಮಾಹಿತಿ ನೀಡಿದಂತ್ತಾಗುತ್ತದೆ. ಈ ಅಭಿಯಾನದ ಅಡಿಯಲ್ಲಿ ಎಲ್ಲ ನಾಗರಿಕರು ಭಾಗವಹಿಸಲಯ ಕರೆ ನೀಡಲಾಗಿದೆ.

## <u>ಸ್ವಂತ ಇಂಟರ್‌ನೆಟ್ ಹೊಂದಿದ ದೇಶದ ಮೊದಲ ಮತು ಏಕೈಕ ರಾಜ್ಯ– ಕೇರಳ :</u>

ಕೇರಳ ತನ್ನದೇ ಆದ ಸ್ವಂತ ಇಂಟರ್‌ನೆಟ್ ಹೊಂದಿದ ದೇಶದ ಮೊದಲ ಮತ್ತು ಏಕೈಕ ರಾಜ್ಯವಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಘೋಷಣೆ ಮಾಡಿದ್ದಾರೆ.

ಕೇರಳ ರಾಜ್ಯದ ಪ್ರತಿಯೊಬ್ಬರಿಗೂ

ಇಂಟರ್ನೆಟ್ ಸೌಲಭ್ಯ ಒದಗಿಸುವ ಗುರಿಯನ್ನು




ಹೊಂದಿರುವ ಕೇರಳ ಫೈಬರ್ ಆಪ್ಟಿಕ್ ನೆಟ್‌ವರ್ಕ್ ಲಿಮಿಟೆಡ್‌ನ ಮೂಲಸೌಕರ್ಯ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಯೋಜನೆಗೆ ದೂರಸಂಪರ್ಕ ಇಲಾಖೆಯು ಇಂಟರ್ನೆಟ್ ಸೇವಾ ಪೂರೈಕೆದಾರ (ISP) ಪರವಾನಗಿಯನ್ನು ನೀಡಿದೆ. ಈ ಅನುಮತಿಯ ನಂತರ ಸಿಎಂ ಪಿಣರಾಯಿ ವಿಜಯನ್ ದೇಶದಲ್ಲೇ ಸ್ವಂತ ಅಂತರ್ಜಾಲ ವ್ಯವಸ್ಥೆಯನ್ನು ಹೊಂದಿದ ಮೊದಲ ರಾಜ್ಯ ಕೇರಳ ಎಂದು ಘೋಷಣೆ ಮಾಡಿದ್ದಾರೆ.

## 'ವಿಶ್ವದ ಅತ್ಯುತ್ತಮ SME ಬ್ಯಾಂಕ್' ಎಂದು ಹೆಸರಿಗೆ ಪಾತ್ರವಾದ– ಡಿಬಿಎಸ್ ಬ್ಯಾಂಕ್




ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಸಿಂಗಾಪುರ್ ಲಿಮಿಟೆಡ್ (DBS ಬ್ಯಾಂಕ್) ಯುರೋಮನಿ ಎರಡನೇ ಬಾರಿಗೆ **'ವಿಶ್ವದ ಅತ್ಯುತ್ತಮ SME ಬ್ಯಾಂಕ್'** ಎಂದು ಗುರುತಿಸಲ್ಪಟ್ಟಿದೆ. 2018 ರಲ್ಲಿ ಮೊದಲ ಬಾರಿಗೆ ಈ ಗೌರವಕ್ಕೆ ಪಾತ್ರರಾಗಿತ್ತು. ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಹೆಚ್ಚಿಸಲು ಬ್ಯಾಂಕ್ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಹಯೋಗದೊಂದಿಗೆ ಜಾಗತಿಕ ಉದ್ಯಮದ ನಾಯಕನಾಗಿ ತನ್ನ ಸ್ಥಾನವನ್ನು ಸ್ಥಾಪಿಸಿದೆ. ಈ ಬ್ಯಾಂಕ್ ಗೆ ಬ್ರಿಟನ್ ಮೂಲದ ಪ್ರಮುಖ ಹಣಕಾಸು ಪ್ರಕಟಣೆಯಾದ Euromony ನಿಂದ ಇತ್ತೀಚಿನ ಜಾಗತಿಕ ಅತ್ಯುತ್ತಮ SME ಬ್ಯಾಂಕ್ ಪುರಸ್ಕಾರವು ಬಂದಿದೆ.

ಯುರೋಮನಿಸ್ ಅವಾರ್ಡ್ ಫಾರ್ ಎಕ್ಸಲೆನ್ಸ್ 2022 ರಲ್ಲಿ ಸಿಂಗಾಪುರ್ ಅಭಿವೃದ್ಧಿ ಬ್ಯಾಂಕ್ ಮೊದಲ ಬಾರಿಗೆ ಮೂರು ಪ್ರಶಸ್ತಿಗಳನ್ನು ಗೆದ್ದಿದೆ:

- 2022 ರ ವಿಶ್ವದ ಅತ್ಯುತ್ತಮ ಆರ್ಥಿಕ ಆವಿಷ್ಕಾರ
- ಸಂಪತ್ತು ನಿರ್ವಹಣೆಗಾಗಿ ಏಷ್ಯಾದ ಅತ್ಯುತ್ತಮ ಬ್ಯಾಂಕ್ 2022
- SME ಗಾಗಿ 2022ರ ಏಷ್ಯಾದ ಅತ್ಯುತ್ತಮ ಬ್ಯಾಂಕ್ ಪ್ರಶಸ್ತಿ

DBS ಬ್ಯಾಂಕ್ ಪ್ರಧಾನ ಕಛೇರಿ: ಸಿಂಗಾಪುರ;

DBS ಬ್ಯಾಂಕ್ ಸಿಇಒ: ಪಿಯೂಷ್ ಗುಪ್ತಾ.

# ದೇಶದ ಒಟ್ಟು ರಾಮ್‌ಸಾರ್ ತಾಣಗಳ ಸಂಖ್ಯೆ 49 ರಿಂದ 54 ಏರಿಕೆ



ಅಂತಾರಾಷ್ಟ್ರೀಯ ಪ್ರಾಮುಖ್ಯತೆಯ ಐದು ಹೊಸ ಚೌಗು ಪ್ರದೇಶಗಳನ್ನು ಭಾರತದಲ್ಲಿ ಗೊತ್ತುಪಡಿಸಲಾಗಿದೆ. ಇದರೊಂದಿಗೆ ದೇಶದ ಒಟ್ಟು ರಾಮ್‌ಸಾರ್ ತಾಣಗಳ ಸಂಖ್ಯೆ 49 ರಿಂದ 54 ತಾಣಗಳಾಗಿವೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್, "ಭಾರತದ ಇನ್ನೂ 5 ತೇವ ಪ್ರದೇಶಗಳು ಅಂತರಾಷ್ಟ್ರೀಯ ಪ್ರಾಮುಖ್ಯತೆಯ ಆರ್ದ್ರಭೂಮಿ ಎಂದು ಮಾನ್ಯತೆಯನ್ನು ಪಡೆದಿವೆ" ಎಂದು ಹೇಳಿದರು.




**ಹೊಸದಾಗಿ ಗೊತ್ತುಪಡಿಸಿದ ಐದು ಚೌಗು ಪ್ರದೇಶಗಳು**

1. ಕರಿಕಿಲಿ ಪಕ್ಷಿಧಾಮ –ತಮಿಳುನಾಡು
2. ಪಲ್ಲಿಕರನೆ ಮಾರ್ಷ ರಿಸರ್ವ್ ಫಾರೆಸ್ಟ್ –ತಮಿಳುನಾಡು
3. ಪಿಚಾವರಂ ಮ್ಯಾಂಗ್ರೋವ್– ತಮಿಳುನಾಡು
4. ಪಾಲಾ ಚೌಗು ಪ್ರದೇಶ –ಮಿಜೋರಾಂ
5. ಸಖ್ಯ ಸಾಗರ್– ಮಧ್ಯಪ್ರದೇಶ

**ರಾಮ್‌ಸಾರ್ ಸಮಾವೇಶ**

❖ ರಾಮಸರ್ ಸಮಾವೇಶ ಅಥವಾ ಚೌಗು ಪ್ರದೇಶಗಳ ಸಮಾವೇಶವನ್ನು 1971 ರಲ್ಲಿ ಸ್ಥಾಪಿಸಲಾಯಿತು ಮತ್ತು ಯುನೆಸ್ಕೋ ಸ್ವೀಕರಿಸಿದ ನಂತರ 1975 ರಲ್ಲಿ ಜಾರಿಗೆ ಬಂದಿತು.ರಾಮಸಾರ್ ಸಮಾವೇಶಕ್ಕೆ 171 ಗುತ್ತಿಗೆ ಪಕ್ಷಗಳಿವೆ.ಭಾರತವು 1 ಫೆಬ್ರವರಿ 1982 ರಂದು ರಾಮಸಾರ್ ಸಮಾವೇಶಕ್ಕೆ ಸಹಿ ಹಾಕಿತು.

❖ ಪ್ರಪಂಚದಲ್ಲಿ 2,414 ರಾಮ್‌ಸಾರ್ ತಾಣಗಳಿವೆ.

❖ ಫೆಬ್ರವರಿ 2 ಅನ್ನು ಅಂತರಾಷ್ಟ್ರೀಯ ಚೌಗು ಪ್ರದೇಶ ದಿನವನ್ನಾಗಿ ಆಚರಿಸಲಾಗುತ್ತದೆ.

**ಚೌಗು ಪ್ರದೇಶಗಳು**

➢ ರಾಮ್‌ಸಾರ್ ಸಮಾವೇಶದ ಪ್ರಕಾರ, ಚೌಗು ಪ್ರದೇಶಗಳು ಜವುಗು, ಫೆನ್, ಪೀಟ್ ಲ್ಯಾಂಡ್ ಅಥವಾ ನೀರಿನ ಪ್ರದೇಶಗಳಾಗಿವೆ, ನೈಸರ್ಗಿಕ ಅಥವಾ ಕೃತಕ, ಶಾಶ್ವತ ಅಥವಾ ತಾತ್ಕಾಲಿಕ, ಸ್ಥಿರ ಅಥವಾ ಹರಿಯುವ ನೀರು, ತಾಜಾ, ಉಪ್ಪುನೀರು ಅಥವಾ ಉಪ್ಪು, ಸಮುದ್ರದ ನೀರಿನ ಪ್ರದೇಶಗಳು ಸೇರಿದಂತೆ ಕಡಿಮೆ ಉಬ್ಬರವಿಳಿತದಲ್ಲಿ ಆರು ಮೀಟರ್ ಮೀರುವುದಿಲ್ಲ. ಉದಾಹರಣೆಗೆ, ಸಮುದ್ರ ಮತ್ತು ಕರಾವಳಿ ಪ್ರದೇಶಗಳು; ನದಿ ಮುಖಗಳು; ನದಿಗಳು ಮತ್ತು ಸರೋವರಗಳು; ಜವುಗು ಮತ್ತು ಪೀಟ್ ಲ್ಯಾಂಡ್ಸ್; ಅಂತರ್ಜಲ ಮತ್ತು ಮಾನವ ನಿರ್ಮಿತ ಚೌಗು ಪ್ರದೇಶಗಳಾದ ಭತ್ತದ ಗದ್ದೆಗಳು, ಸೀಗಡಿ ಕೊಳಗಳು ಮತ್ತು ಜಲಾಶಯಗಳು.

**ಭಾರತದಲ್ಲಿನ ರಾಮ್‌ಸಾರ್ ತಾಣಗಳ ಕುರಿತು:**

- ಭಾರತದಲ್ಲಿ 1,086827 ಹೆಕ್ಟೇರ್‌ಗಳಷ್ಟು ವಿಸ್ತೀರ್ಣದ 54 ರಾಮೌಸಾರ್ ತಾಣಗಳಿವೆ (ಜುಲೈ 2022 ರಂತೆ).
- ಚಿಲಿಕಾ ಸರೋವರವು 1,16,500 ಹೆಕ್ಟೇರ್‌ಗಳ ವಿಸ್ತೀರ್ಣವನ್ನು ಹೊಂದಿರುವ ಭಾರತದ ಅತಿದೊಡ್ಡ ರಾಮ್‌ಸಾರ್ ತಾಣವಾಗಿದೆ.
- ಚಿಲಿಕ ಸರೋವರ (ಒರಿಸ್ಸಾ) ಮತ್ತು ಕಿಯೋಲಾಡಿಯೋ ನ್ಯಾಷನಲ್ ಪಾರ್ಕ್ (ರಾಜಸ್ಥಾನ) ಭಾರತದ ಮೊದಲ ರಾಮ್‌ಸಾರ್ ತಾಣಗಳಾಗಿ ಗುರುತಿಸಲ್ಪಟ್ಟಿವೆ.
- ಉತ್ತರಪ್ರದೇಶವು ಭಾರತದಲ್ಲಿ ಅತಿ ಹೆಚ್ಚು ಸಂಖ್ಯೆಯ ರಾಮ್‌ಸಾರ್ ತಾಣಗಳನ್ನು ಹೊಂದಿದ್ದು, 8 ಭಾರತೀಯ ತೇವಭೂಮಿಗಳನ್ನು ಹೊಂದಿದೆ.
- ಹಿಮಾಚಲ ಪ್ರದೇಶದ ರೇಣುಕಾ ಚೌಗು ಪ್ರದೇಶ ಭಾರತದ ಅತ್ಯಂತ ಚಿಕ್ಕ ಚೌಗು ಪ್ರದೇಶವಾಗಿದ್ದು, 20 ಹೆಕ್ಟೇರ್ ಹೊಂದಿದೆ.

## ಮಹಾರಾಷ್ಟ್ರ ಸರ್ಕಾರದಿಂದ ಮದರ್ ತೆರೇಸಾ ಸ್ಮಾರಕ ಪ್ರಶಸ್ತಿ ಪ್ರಕಟ



ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ (UNEP) ರಾಷ್ಟ್ರೀಯ ಸದ್ಭಾವನಾ ರಾಯಭಾರಿ ದಿಯಾ ಮಿರ್ಜಾ ಮತ್ತು ಪರಿಸರ ಕಾರ್ಯಕರ್ತ ಶ್ರೀ ಅಫ್ರೋಜ್ ಶಾ ಅವರಿಗೆ ಸಾಮಾಜಿಕ ನ್ಯಾಯಕ್ಕಾಗಿ 2021 ರ ಪ್ರತಿಷ್ಠಿತ ಮದರ್ ತೆರೇಸಾ ಸ್ಮಾರಕ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಮುಂಬೈನ ರಾಜಭವನದಲ್ಲಿ ರಾಜ್ಯಪಾಲರದ ಭಗತ್ ಸಿಂಗ್ ಕೋಶ್ಯಾರಿ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು, ಪರಿಸರ ಸುಸ್ಥಿರತೆಯಲ್ಲಿ ಅವರ ಮಾಡಿದ ಗಮನಾರ್ಹ ಸಾಧನೆಗಳಿಗಾಗಿ ಇಬ್ಬರಿಗೂ ಪ್ರಶಸ್ತಿ ನೀಡಲಾಗಿದೆ.

**ಪ್ರಮುಖ ಅಂಶಗಳು:**

- Ms ದಿಯಾ ಮಿರ್ಜಾ ಅವರು UNEP, ಭಾರತದ ಸದ್ಭಾವನಾ ರಾಯಭಾರಿಯಾಗಿ ಭಾರತದಾದ್ಯಂತ ಪ್ರಮುಖ ಪರಿಸರ ಅಭಿಯಾನಗಳಲ್ಲಿ ಅವರ ಅದ್ಭುತ ಮತ್ತು ಗಮನಾರ್ಹ ಪ್ರಯತ್ನಗಳಿಗಾಗಿ ಈ ಪ್ರಶಸ್ತಿಯನ್ನು ಪಡೆದರು.
- ಶ್ರೀ ಅಫ್ರೋಜ್ ಷಾ ಅವರು ಭಾರತದಲ್ಲಿ ಹಾಗೂ ವಿಶ್ವದಾದ್ಯಂತದ ಜನರಿಗೆ ಸ್ಫೂರ್ತಿ ನೀಡಿದ ವಿಶ್ವದ ಅತಿದೊಡ್ಡ ಬೀಚ್ ಕ್ಲೀನ್-ಅಪ್ ಆಂದೋಲನವನ್ನು ಮುನ್ನಡೆಸಿದರು. ಅವರ ಈ ಪ್ರಯತ್ನಗಳಿಗಾಗಿ ಈ ಪ್ರಶಸ್ತಿಯನ್ನು ಪಡೆದರು.

**ಮದರ್ ತೆರೇಸಾ ಸ್ಮಾರಕ ಪ್ರಶಸ್ತಿಗಳ ಬಗ್ಗೆ:**

- ಹಾರ್ಮನಿ ಫೌಂಡೇಶನ್ ಸಾಮಾಜಿಕ ನ್ಯಾಯಕ್ಕಾಗಿ ಮದರ್ ತೆರೇಸಾ ಸ್ಮಾರಕ ಪ್ರಶಸ್ತಿಗಳನ್ನು ನೀಡುತ್ತಿದೆ. ಸಮಾಜದಲ್ಲಿ ಶಾಂತಿ, ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಗುರಿಯನ್ನು ಹೊಂದಿರುವ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ನೀಡಲಾಗುತ್ತದೆ. ಈ ಮೂಲಕ ಅವರ ಕಾರ್ಯವನ್ನು ಉತ್ತೇಜನವನ್ನು ನೀಡಲಾಗುತ್ತದೆ.

# ರಾಜ್ಯ ಪ್ರಚಲಿತ ಘಟನೆಗಳು

## ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್ ಸಿಂಗ್, ಜೈರಾಮ್ ರಮೇಶ್ ರಾಜ್ಯ ಸಭೆಗೆ ಆಯ್ಕೆ


Nirmala Sitharaman Jaggesh Jairam Ramesh

ರಾಜ್ಯಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಬಿಜೆಪಿಯ ಮೂವರು, ಕಾಂಗ್ರೆಸ್‌ನ ಒಬ್ಬರು ಜಯಶಾಲಿಯಾಗಿದ್ದಾರೆ. ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಒಬ್ಬ ಅಭ್ಯರ್ಥಿಗೆ ಸೋಲಾಗಿದೆ. ಬಿಜೆಪಿಯಿಂದ ನಿರ್ಮಲಾ ಸೀತಾರಾಮನ್, ಜಗ್ಗೇಶ್ ಮತ್ತು ಲೆಹರ್ ಸಿಂಗ್ ಗೆಲುವು ಸಾಧಿಸಿದ್ದಾರೆ.ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಮನ್ಸೂರ್ ಅಲಿ ಖಾನ್ ಅವರಿಗೆ ಸೋಲಾಗಿದ್ದು, ಜೈರಾಮ್ ರಮೇಶ್ ವಿಜಯಶಾಲಿಯಾಗಿದ್ದಾರೆ.ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಕುಪೇಂದ್ರ ರೆಡ್ಡಿ ಅವರಿಗೆ ಸೋಲಾಗಿದೆ.

**ನಾಲ್ಕು ರಾಜ್ಯಗಳಲ್ಲಿ ಚುನಾವಣೆ**

ಜೂನ್ 10ರಂದು ನಡೆದ ಮತದಾನದ ಮೂಲಕ ನಾಲ್ಕು ರಾಜ್ಯಗಳಲ್ಲಿ ಖಾಲಿ ಇರುವ 16 ಸ್ಥಾನಗಳಿಗೆ ಸದಸ್ಯರನ್ನು ಆಯ್ಕೆ ಮಾಡಲಾಯಿತು. ರಾಜಸ್ಥಾನ, ಮಹಾರಾಷ್ಟ್ರ, ಕರ್ನಾಟಕ ಮತ್ತು ಹರಿಯಾಣ ರಾಜ್ಯಗಳಲ್ಲಿ ಚುನಾವಣೆ ನಡೆಯಿತು.ಒಟ್ಟು 57 ಸ್ಥಾನಗಳಿಗೆ ಚುನಾವಣೆ ನಡೆಯಬೇಕಿತ್ತು. ಹಲವು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಕೇವಲ 16 ಸ್ಥಾನಗಳಿಗೆ ಮತದಾನ ನಡೆಯಿತು. ರಾಜ್ಯಸಭೆಯು ಪ್ರಸ್ತುತ 245 ಸದಸ್ಯರನ್ನು ಹೊಂದಿದೆ.ಇದರಲ್ಲಿ 233 ಚುನಾಯಿತ ಮತ್ತು 12 ನಾಮನಿರ್ದೇಶಿತ ಸದಸ್ಯರು ಸೇರಿದ್ದಾರೆ.ಸಂವಿಧಾನದ ಪ್ರಕಾರ ಮೇಲ್ಮನೆಯು 250 ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರಬಾರದು.ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು 233 ಸದಸ್ಯರನ್ನು ಆಯ್ಕೆ ಮಾಡಿದರೆ ರಾಷ್ಟ್ರಪತಿಗಳು ಉಳಿದ 12 ಮಂದಿಯನ್ನು ನಾಮನಿರ್ದೇಶನ ಮಾಡುತ್ತಾರೆ. **ಕರ್ನಾಟಕದಿಂದ ಒಟ್ಟು 12 ಸದಸ್ಯರನ್ನು ರಾಜ್ಯ ಸಭೆಗೆ ಆಯ್ಕೆ ಮಾಡಲಾಗುತ್ತದೆ.**

### ಜಗ್ಗೇಶರವರ ರಾಜಕೀಯ ಜೀವನ

- ನವರಸ ನಾಯಕ' ಕಾಮಿಡಿ ಕಿಲಾಡಿಗಳು ಶೋನ ಪ್ರಿನ್ಸಿಪಾಲ್ ಜಗ್ಗೇಶ್ ಅವರು ಜನಿಸಿದ್ದು 17 ಮಾರ್ಚ್ 1963 ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಮಾಯಸಂದ್ರ ಗ್ರಾಮದಲ್ಲಿ. ಇವರ ತಂದೆ ಶಿವಲಿಂಗಪ್ಪ ತಾಯಿ ನಂಜಮ್ಮ,
- 'ಮಾತಿನ ಮಲ್ಲ' ಜಗ್ಗೇಶ್ ಅವರು ತುರುವೇಕೆರೆ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದರು. ಜಗದೀಶ್ ಶೆಟ್ಟರ್ ಅವರು ವಿಧಾನಸಭೆ ಸ್ಪೀಕರ್ ಆಗಿದ್ದ ಕಾಲದಲ್ಲಿ ಶಾಸಕ ಸ್ಥಾನ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಕೆಎಸ್ಆರ್ಟಿಸಿ ಉಪಾಧ್ಯಕ್ಷರಾಗಿ ಕ್ಯಾಬಿನೆಟ್ ದರ್ಜೆ ಹುದ್ದೆ ನಿಭಾಯಿಸಿದರು.ಸದ್ಯ ಕರ್ನಾಟಕ ಬಿಜೆಪಿಯ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತರಾಗಿದ್ದಾರೆ.

## ರಾಜ್ಯದಲ್ಲಿ ವಾಟರ್ ಏರೋಡ್ರೋಮ್

**ಬೆಂಗಳೂರು**



'ನಾಗರಿಕ ವಿಮಾನ ಯಾನ ಸಂಪರ್ಕದ ಮೂಲಕ ಪ್ರವಾಸ್ಯೋದ್ಯಮವನ್ನು ಪ್ರೋತ್ಸಾಹಿಸುವ ಜತೆಗೆ ಆರ್ಥಿಕ ಪುನಶ್ಚೇನದ ಉದ್ದೇಶದಿಂದ ಒಂಬತ್ತು ಕಡೆ ವಾಟರ್ ಏರೋ ಡ್ರೋವ್ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ವಸತಿ ಹಾಗೂ ಮೂಲಸೌಕರ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಬೆಂಗಳೂರಿನಲ್ಲಿ ನಡೆದ 'ಕರ್ನಾಟಕದ ಸಮಗ್ರ ನಾಗರಿಕ ವಿಮಾನಯಾನ ನೀತಿ ರೂಪಣೆ' ಕುರಿತ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ಕಾಳಿ ನದಿ, ಬೈಂದೂರು, ಮಲ್ಪೆ, ಮಂಗಳೂರು, ತುಂಗಭದ್ರಾ, ಕೆಆರ್.ಎಸ್, ಲಿಂಗನಮಕ್ಕಿ, ಅಲ ಮತ್ತು ಹಿಡಕಲ್ ಅಲಾಶಯಗಳಲ್ಲಿ ವಾಟರ್ ಏರೋಡ್ರೋಮ್ ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ.' ಎಂದರು. ಮಡಿಕೇರಿ, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಹೆಲಿಪೋರ್ಟ್‌ಗಳನ್ನು ಸ್ಥಾಪಿಸಲು ಕಾರ್ಯ ಸಾಧ್ಯತೆ ಮತ್ತು ವಿಸ್ಕೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಕ್ರಮಕೈಗೊಳ್ಳಲಾಗುತ್ತದೆ. ಚಿಕ್ಕಮಗಳೂರು. ಹರಿಹರ, ಕುಶಾಲನಗರ ಮತ್ತು ಅಥಣಿಯಲ್ಲಿ ಕಿರು ವಿಮಾನ ನಿಲ್ದಾಣ ಸ್ಥಾಪಿಸುವ ಚಿಂತನ ಇದೆ' ಎಂದರು. 'ರಾಜ್ಯದ ವಿಮಾನಯಾನ ಯೋಜನೆಗಳಿಗೆ ಕೇಂದ್ರದ ನೆರವು ಒದಗಿಸಲಾಗುವುದು' ಎಂದು ಕೇಂದ್ರ ವಿಮಾನಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿ ಉಷಾ ಪಡಿ ಭರವಸೆ ನೀಡಿದರು.

## ರಾಜ್ಯದಲ್ಲಿ ಇಫ್ಕೋ ನ್ಯಾನೋ ಯೂರಿಯಾ ಘಟಕ

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ 550 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಇಫ್ಕೋ ನ್ಯಾನೊ ಯೂರಿಯಾ (ದ್ರವ) ಸ್ಥಾವರ ಘಟಕಕ್ಕೆ ಜುಲೈ 14 ರಂದು ಶಂಕು ಸ್ಥಾಪನೆ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ನೆರವೇರಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಇಫ್ಕೋದ ಮಾರುಕಟ್ಟೆ ವ್ಯವಸ್ಥಾಪಕ ಡಾ. ನಾರಾಯಣಸ್ವಾಮಿ, ದೇವನಹಳ್ಳಿಯ ವಿಮಾನ ನಿಲ್ದಾಣದ ಬಳಿ 12 ಎಕರೆ ಪ್ರದೇಶದಲ್ಲಿ ಸುಮಾರು 550 ಕೋಟಿ ರೂಗಳು ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ ಎಂದರು.

ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಸಚಿವ ನರೇಂದ್ರ ತೋಮರ್, ರಾಸಾಯನಿಕ ಹಾಗೂ ರಸಗೊಬ್ಬ ಸಚಿವ ಡಾ. ಮಾನ್ಸುಖ್ ಮಾಂಡವೀಯ ಅವರು ಉಪಸ್ಥಿತರಿದ್ದರು.

## ಶಿಕ್ಷಣ ಸುಧಾರಣೆ ಸಲಹೆಗಾರರಾಗಿ ದೊರೆಸ್ವಾಮಿ

ಪಿಇಎಸ್ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಪ್ರೊ. ಎಂ.ಆರ್. ದೊರೆಸ್ವಾಮಿ ಅವರನ್ನು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಶಿಕ್ಷಣ ತಜ್ಞರಾದ ದೊರೆಸ್ವಾಮಿ ಅವರು ರಾಜ್ಯದ



ಮೇಲ್ಮನೆ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಇವರನ್ನು ಶಿಕ್ಷಣ ಸುಧಾರಣೆಗಳ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿತ್ತು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ, ಕೆಲವರ ಅವಧಿಯನ್ನು ವಿಸ್ತರಿಸಿರಲಿಲ್ಲ. ಈಗ ಮತ್ತೆ ನೇಮಕ ಮಾಡಲಾಗಿದ್ದು, ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಿ ಆದೇಶ ಹೊರಡಿಸಲಾಗಿದೆ.

## 75 ನೇ ಸ್ವಾತಂತ್ರ್ಯ ಸಂಭ್ರಮದಲ್ಲಿ– ಹಾವೇರಿಯ ಮಹದೇವಪ್ಪ ಮೈಲಾರ ರೈಲ್ವೆ ನಿಲ್ದಾಣ

ಹಾವೇರಿಯ ಮಹದೇವಪ್ಪ ಮೈಲಾರ ರೈಲ್ವೆ ನಿಲ್ದಾಣವು ರೈಲ್ವೆ ಸಚಿವಾಲಯವು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಗುರುತಿಸಿದ 75 ರೈಲು ನಿಲ್ದಾಣಗಳಲ್ಲಿ ಒಂದಾಗಿದೆ'. ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಕ್ರಾಂತಿಕಾರಿ ಕಾರ್ಯಗಳಿಗಾಗಿ ಮೈಲಾರ ಮಹದೇವಪ್ಪ ಅವರನ್ನು 'ಕರ್ನಾಟಕದ ಭಗತ್ ಸಿಂಗ್' ಎಂದು ಪ್ರಶಂಸಿಸಲಾಗಿತ್ತು.




ನೈಋತ್ಯ ರೈಲ್ವೆಯ ಮೈಸೂರು ವಿಭಾಗವು ಜು. 18 ರಿಂದ ಜುಲೈ 23ರ ವರೆಗೆ 'ಅಜಾದಿ ಕಿ. ರೈಲ್ ಗಾಡಿ ಔರ್ ಸ್ಟೇಷನ್ಸ್' ಕಾರ್ಯಕ್ರಮದ ಸಾಂಪ್ರದಾಯಿಕ ಸಪ್ತಾಹವನ್ನು ಆಚರಿಸಲಿದೆ. ಇದರಂಗವಾಗಿ ಹಾವೇರಿ ರೈಲ್ವೆ ನಿಲ್ದಾಣದ ವ್ಯಾಪ್ತಿಯಲ್ಲಿರುವ ರೈಲ್ವೆಯ ಎಲ್ಲಾ ಪಾಲುದಾರರೊಂದಿಗೆ, ಶಾಲಾ, ಕಾಲೇಜುಗಳು ಮತ್ತು ವಸತಿ ಕಾಲೋನಿಗಳನ್ನು ಸೇರಿಸಿಕೊಂಡು ವಾರಪೂರ್ತಿ ಕಾರ್ಯಕ್ರಮಗಳ ಸರಣಿಯನನು ಆಯೋಜಿಸಿದೆ. ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ. ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

**ಮೈಲಾರ ಮಹದೇವಪ್ಪ ಅವರ ಬಗ್ಗೆ:**

- ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು ಗ್ರಾಮದಲ್ಲಿ ಮೈಲಾರ ಮಹದೇವಪ್ಪ 1911 ರ ಜೂನ್ 8 ರಂದು ಜನಿಸಿದ್ದರು.
- ಮಾರ್ಚ್ 12, 1930 ರಂದು, ಗಾಂಧೀಜಿ ಅವರು 78 ಅನುಯಾಯಿಗಳೊಂದಿಗೆ ಸಬರಮತಿಯಿಂದ ಉಪ್ಪಿನ ಸತ್ಯಾಗ್ರಹವನ್ನು ಅರಬ್ಬಿ ಸಮುದ್ರದ ದಂಡಿ ಎಂಬ ಸಮುದ್ರ ತೀರಕ್ಕೆ 241 ಮೈಲಿಗಳ ನಡಿಗೆ ಪ್ರಾರಂಭಿಸಿ ಹೋರಾಟ ನಡೆಸಿದರು. ಈ ದಂಡಿ ಉಪ್ಪಿನ ಸತ್ಯಾಗ್ರಹಕ್ಕೆ ರಾಜ್ಯದಿಂದ ಭಾಗವಹಿಸಿದ ಏಕೈಕ ವ್ಯಕ್ತಿಯೇ ಮಹದೇವಪ್ಪ.
- ಮಹದೇವಪ್ಪ. ಬ್ರಿಟಿಷರಿಗೆ ಸಿಂಹ ಸ್ವಪ್ನದಂತೆ ಕಾಡಿದರು. ಅಂದಿನ ಸರ್ಕಾರಗಳ ಟಪಾಲ್ ಕಳ್ಳತನ ಸೇರಿದಂತೆ ವಿವಿಧ ಅಸಹಾಕಾರ ಚಳವಳಿಯಲ್ಲಿ ಇವರು ಪಾಲ್ಗೊಂಡಿದ್ದರು.
- 1943ರ ಏಪ್ರಿಲ್ 1ರಂದು ಹೊಸರಿತ್ತಿ ವೀರಭದ್ರೇಶ್ವರ ದೇವಸ್ಥಾನದಲ್ಲಿನ ತೆರಿಗೆ ಹಣಕ್ಕೆ ಮುತ್ತಿಗೆ ಹಾಕಿದಾಗ ಬ್ರಿಟಿಷರ ಗುಂಡೇಟಿಗೆ ಇವರು ವೀರ ಮರಣವನ್ನಪ್ಪುತ್ತಾರೆ. ಇವರ ಜೊತೆ ತಿರಕಪ್ಪ ಮಡಿವಾಳರ ಮತ್ತು ವೀರಯ್ಯ ಹಿರೇಮಠ ಅವರೂ ಹುತಾತ್ಮರಾದರು.
- 2020 ರಲ್ಲಿ ಹಾವೇರಿ ರೈಲು ನಿಲ್ದಾಣಕ್ಕೆ ಮೈಲಾರ ಮಹದೇವ ರೈಲು ನಿಲ್ದಾಣ ಎಂದು ಮರುನಾಮಕರಣ ಮಾಡಲಾಗಿದೆ.

# ಕಸ್ತೂರಿ ರಂಗನ್ ವಿರುದ್ಧ ಕಾನೂನು ಹೋರಾಟಕ್ಕೆ ನಿರ್ಧಾರ

ಪಶ್ಚಿಮಘಟ್ಟ ಸಂಬಂಧ ಕೇಂದ್ರ ಪರಿಸರ ಇಲಾಖೆ ಹೊರಡಿಸಿರುವ ಅಧಿಸೂಚನೆ ವಿರುದ್ಧ ಕಾನೂನು ಹೋರಾಟ ಮಾಡಲು ವಕೀಲರನ್ನು ನೇಮಿಸುವುದಾಗಿ ಕರ್ನಾಟಕ ಸರ್ಕಾರದ ಹೇಳಿದೆ.



ಕಸ್ತೂರಿ ರಂಗನ್ ವರದಿ ಜಾರಿ ಸಂಬಂಧ ಐದನೇಯ ಕರಡು ಅಧಿಸೂಚನೆಯನ್ನು ಇತ್ತೀಚೆಗೆ ಕೇಂದ್ರದ ಪರಿಸರ ಸಚಿವಾಲಯ ಪ್ರಕಟಿಸಿದೆ. 2008 ರಲ್ಲಿ ಗಾಡ್ಗೀಳ್ ವರದಿ ಬಳಿಕ ಕಸ್ತೂರಿ ರಂಗನ್ ವರದಿಗಳು ಬಂದಿವೆ. 2019, 2020 ರಲ್ಲಿ ಎರಡು ಸಲ ಕಸ್ತೂರಿ ರಂಗನ್ ವರದಿ ಒಪ್ಪಲ್ಲ ಅಂತ ಕೇಂದ್ರಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ. ಇಷ್ಟಿದ್ರೂ ಕೇಂದ್ರ ಐದನೇಯ ಅಧಿಸೂಚನೆ ಹೊರಡಿಸಿದೆ. ಇದರ ವಿರುದ್ಧ ಕಾನೂನು ಹೋರಾಟಕ್ಕೆ ನಿರ್ಧರಿಸಲಾಗಿದೆ.

**ಏನಿದು ಪರಿಸರ ಸೂಕ್ಷ್ಮ ಪ್ರದೇಶದ ಕರಡು ಅಧಿಸೂಚನೆ?** ಪಶ್ಚಿಮ ಘಟ್ಟಗಳ ಪರಿಸರ ರಕ್ಷಣೆ ಸಂಬಂಧ ವರದಿ ನೀಡುವ ಉದ್ದೇಶದಿಂದ ಇಸ್ರೋ ಮಾಜಿ ಅಧ್ಯಕ್ಷ ಕಸ್ತೂರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. 2013ರಲ್ಲಿ ಕಸ್ತೂರಿ ರಂಗನ್ ಸಮಿತಿ ವರದಿಯನ್ನು ಸಲ್ಲಿಸಿತ್ತು. ಪಶ್ಚಿಮ ಘಟ್ಟ ಸಂಬಂಧ ಸಲ್ಲಿಸಿದ ವರದಿ ಹಲವು ರಾಜ್ಯ ಸರ್ಕಾರಗಳ ನಿದ್ದೆಗೆಡಿಸಿದೆ.

**ವರದಿ ಜಾರಿಗೆ ವಿರೋಧ ಏಕೆ? ಸಮಿತಿಯ ಪ್ರಮುಖ ಅಂಶಗಳು.**

- ರಾಜ್ಯದ 1,553 ಕ್ಕೂ ಹೆಚ್ಚು ಹಳ್ಳಿಗಳನ್ನು ಒಳಗೊಂಡಂತೆ 20,668 ಚದರ ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಹಾಗೂ ಈ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲು ಶಿಫಾರಸ್ಸು ಮಾಡಿತ್ತು.
- ಅನ್ವಯ ಕಸ್ತೂರಿ ರಂಗನ್ ವರದಿ ಅನುಷ್ಠಾನವಾದರೆ ಪಶ್ಚಿಮ ಘಟ್ಟ ಹಾಗೂ ಮಲೆನಾಡಿನ ಬಹುತೇಕ ಭಾಗ ಅತಿ ಸೂಕ್ಷ್ಮ ಪರಿಸರ ವಲಯವಾಗಿ ಪರಿವರ್ತನೆಯಾಗುತ್ತದೆ.
- ಈ ಪ್ರದೇಶದಲ್ಲಿ ಮಾನವ ಚಟುವಟಿಕೆಗಳಿಗೆ ಬಹುತೇಕ ನಿರ್ಬಂಧ ಹೇರಲಾಗುತ್ತದೆ. ಈ ಭೂ

ಭಾಗ ರಾಜ್ಯದ ನಿಯಂತ್ರಣ ಕಳೆದುಕೊಂಡು ಕೇಂದ್ರದ ಸುಪರ್ದಿಗೆ ಬರುತ್ತದೆ. ಸೂಕ್ಷ್ಮ ವಲಯದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲಾಗುತ್ತದೆ. ಕ್ರಮೇಣ ಗಣಿಗಾರಿಕೆ ಸೇರಿದಂತೆ ಎಲ್ಲಾ ಇತರಹ ಚಟುವಟಿಕೆಯನ್ನೂ ಸ್ಥಗಿತಗೊಳಿಸಬೇಕಾಗುತ್ತದೆ. ಹೀಗಾಗಿ ಈ ಭಾಗದ ಜನರ ಜೀವನ ಅಸ್ತವ್ಯಸ್ತಗೊಳ್ಳುವ  ಆತಂಕದಿಂದ ವರದಿ ಜಾರಿಗೆ ವಿರೋಧ ವ್ಯಕ್ತವಾಗುತ್ತಿದೆ.

**ಗಾಡ್ಗೀಳ್, ಕಸ್ತೂರಿರಂಗನ್ ಸಮಿತಿ ಹೇಳಿದ್ದೇನು ?**

- ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಈ ಹಿಂದೆ ಸಮಿತಿ ರಚಿಸಿತ್ತು. ಈ ಸಮಿತಿಯು ಅಗಸ್ಟ್ 31ರ 2011 ರಲ್ಲಿ ಪಶ್ಚಿಮ ಘಟ್ಟದ 1,29,037 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಬಹುದು ಎನ್ನುವ ಶೀಫಾರಸ್ಸು ಮಾಡಿತ್ತು. ಘಟ್ಟದ ಶೇ 64 ರಷ್ಟು ಪ್ರದೇಶದಲ್ಲಿ ಅಭಿವೃದ್ಧಿಗೆ ಕೆಲ ನಿಯಂತ್ರಣ ಹೇರಬೇಕು ಎಂದು ಶಿಫಾರಸ್ಸು ಮಾಡಿತ್ತು.
- ಕೇಂದ್ರ ಸರ್ಕಾರ ಗಾಡ್ಗೀಳ್ ವರದಿ ಪರಿಶೀಲನೆಗೆ 2013 ರ ಏಪ್ರಿಲ್ 15ರಂದು ಡಾ. ಕೆ. ಕಸ್ತೂರಿ ರಂಗನ್ ಸಮಿತಿ ರಚಿಸಿತ್ತು. ಈ ಸಮಿತಿ ಅದೇ ವರ್ಷದ ನ, 13 ರಂದು ವರದಿ ನೀಡಿ, ಘಟ್ಟದ ಶೇ. 37 ರಷ್ಟು ಅರಣ್ಯ ಪ್ರದೇಶವನ್ನು ಅಂದರೆ 59,940 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಿತ್ತು.

**ಪಶ್ಚಿಮ ಘಟ್ಟಗಳು ಬಗ್ಗೆ :**

- ಪಶ್ಚಿಮ ಘಟ್ಟಗಳು ಗುಜರಾತ ತಾಪಿ ನದಿಯಿಂದ ಕನ್ಯಾಕುಮಾರಿ ವರೆಗೆ ವ್ಯಾಪಿಸಿದೆ.
- ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಒಟ್ಟು ಆರು ರಾಜ್ಯಗಳು ಬರುತ್ತವೆ: ಗುಜರಾತ್ ಮಹಾರಾಷ್ಟ್ರ ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು.
- ಸರಾಸರಿ ಅಗಲ: 50 ರಿಂದ 80 ಕಿ.ಮೀ.
- ಪರ್ಯಾಯ ದ್ವೀಪದ ಹೆಚ್ಚಿನ ನದಿಗಳು ಪಶ್ಚಿಮ ಘಟ್ಟಗಳಲ್ಲಿ ತಮ್ಮ ಮೂಲವನ್ನು ಹೊಂದಿವೆ.
- ಪಶ್ಚಿಮ ಘಟ್ಟಗಳು ನಿರಂತರವಾಗಿರುತ್ತವೆ ಮತ್ತು ಪಾಸ್‌ಗಳ ಮೂಲಕ ಮಾತ್ರ ದಾಟಬಹುದು.
- ಸರಾಸರಿ ಎತ್ತರ: 900 ರಿಂದ 1,600 ಮೀಟರ್.
- ಅತಿ ಎತ್ತರದ ಶಿಖರ: ಅನ್ನೈ ಮುಡಿ (2695 ಮೀಟರ್)
- ಪಶ್ಚಿಮ ಘಟ್ಟಗಳು ಓರೋಗ್ರಾಫಿಕ್ ಪ್ರಕಾರದ ಮಳೆಯನ್ನು ಪಡೆಯುತ್ತವೆ. ನೈಋತ್ಯ ಮಾನ್ಸೂನ್ ಅರಬ್ಬಿ ಸಮುದ್ರದಿಂದ ಬರುತ್ತದೆ ಮತ್ತು ಭಾರೀ ಮಳೆಯನ್ನು ಉಂಟುಮಾಡುತ್ತದೆ.
- ಪಶ್ಚಿಮ ಘಟ್ಟಗಳನ್ನು ಸ್ಥಳೀಯವಾಗಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ: ಮಹಾರಾಷ್ಟ್ರದ ಸಹ್ಯಾದ್ರಿ. ಕರ್ನಾಟಕದ ನೀಲಗಿರಿ ಬೆಟ್ಟಗಳು ಮತ್ತು ತಮಿಳುನಾಡಿನ ಅನ್ನೈಮಲೈ ಬೆಟ್ಟಗಳು ಮತ್ತು ಕೇರಳದ ಏಲಕ್ಕಿ ಬೆಟ್ಟಗಳು.

## 'ಒಂದು ಜಿಲ್ಲೆ, ಒಂದು ಕೌಶಲ್ಯ' ಕಾರ್ಯಕ್ರಮಕ್ಕೆ ಚಾಲನೆ




ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವ ಯುವ ಕೌಶಲ್ಯ ದಿನದ ಅಂಗವಾಗಿ ಕರ್ನಾಟಕದಲ್ಲಿ ಅಭ್ಯಾಸ ಮಾಡುವ ಸಾಂಪ್ರದಾಯಿಕ ಕೌಶಲ್ಯಗಳನ್ನು ಪುನರುಜೀವನಗೊಳಿಸುವ ಉದ್ದೇಶದಿಂದ 'ಒಂದು ಜಿಲ್ಲೆ ಒಂದು ಕೌಶಲ್ಯ' ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಕಾರ್ಯಕ್ರಮವನ್ನು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಆಯೋಜಿಸಿತ್ತು.ಈ ನಿಗಮವು ರಾಜ್ಯದ ಪ್ರತಿ ಜಿಲ್ಲೆಯ ವಿವಿಧ ಸಾಂಪ್ರದಾಯಿಕ ಕಲೆಗಳು ಮತ್ತು ಕೌಶಲ್ಯಗಳನ್ನು ಗುರುತಿಸಿದೆ ಮತ್ತು ಈ ವಿಶೇಷ ಕೌಶಲ್ಯಗಳ ತಾಂತ್ರಿಕ ಉನ್ನತೀಕರಣ ಮತ್ತು ವಿನ್ಯಾಸದ ಮಧ್ಯಸ್ಥಿಕೆಗಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇಂಜಿನಿಯರಿಂಗ್, ಬಿಸಿಎ ಮತ್ತು ಮ್ಯಾನೇಜ್‌ಮೆಂಟ್‌ನ ಪದವೀಧರರಿಗೆ ಉಚಿತ ಲರ್ನಿಂಗ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮವಾದ ಇ-ಕೌಶಲ್ಯ ಕಾರ್ಯಕ್ರಮಕ್ಕೂ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಚಾಲನೆ ನೀಡಿದರು.

## ವಿಶ್ವ ಯುವ ಕೌಶಲ್ಯ ದಿನ- ಜುಲೈ 15

ಪ್ರತಿ ವರ್ಷ ಜುಲೈ 15ರಂದು ವಿಶ್ವ ಯುವ ಕೌಶಲ್ಯ ದಿನವನ್ನು ಆಚರಣೆ ಮಾಡಲಾಗುತ್ತದೆ. ಯುವಜನತೆಯಲ್ಲಿ ಕೌಶಲ್ಯ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಕೌಶಲ್ಯದ ಪ್ರಾಮುಖ್ಯತೆಯನ್ನು ಸಾರುವ ಉದ್ದೇಶದಿಂದ ಪ್ರತಿ ವರ್ಷ ವಿಶ್ವ ಯುವ ಕೌಶಲ್ಯ ದಿನವನ್ನು ಆಚರಣೆ ಮಾಡಲಾಗುತ್ತದೆ.




**ಹಿನ್ನೆಲೆ:**

2014 ರಲ್ಲಿ ಜುಲೈ 15 ರಂದು ವಿಶ್ವಸಂಸ್ಥೆಯ ಸಾಮನ್ಯ ಸಭೆಯಲ್ಲಿ, ವಿಶ್ವ ಯುವ ಕೌಶಲ್ಯ ದಿನವನ್ನಾಗಿ ಘೋಷಿಸಲಾಯಿತು. ಅಂದಿನಿಂದ ಪ್ರತಿ ವರ್ಷವೂ ವಿಶ್ವ ಯುವ ಕೌಶಲ್ಯ ದಿನವನ್ನ ಆಚರಣೆ ಮಾಡುತ್ತ ಬರಲಾಗುತ್ತಿದೆ. 2030 ರವೇಳೆಗೆ ಎಲ್ಲ ವರ್ಗದವರಿಗೂ ಸಂಪೂರ್ಣ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ವೃತ್ತಿಪರ ಕೌಶಲ್ಯ ಒದಗಿಸುವ ಗುರಿಯನ್ನು ವಿಶ್ವ ಸಂಸ್ಥೆ ಹೊಂದಿದೆ.

2022 ರ ಥೀಮ್: **'ಭವಿಷ್ಯಕ್ಕಾಗಿ ಯುವ ಕೌಶಲ್ಯಗಳನ್ನು ಪರಿವರ್ತಿಸುವುದು'. ("Transforming youth skills for the future').**

# ಆವಿಷ್ಕಾರ ಸೂಚ್ಯಂಕ: ಸತತ ಮೂರನೇ ಬಾರಿ ಪ್ರಥಮ ಸ್ಥಾನ ಪಡೆದ ಕರ್ನಾಟಕ




ನೀತಿ ಆಯೋಗದ ಮೂರನೇ ವರ್ಷದ ಅವಿಷ್ಕಾರ ಸೂಚ್ಯಂಕ ಪಟ್ಟಿಯಲ್ಲಿ 17 ಪ್ರಮುಖ ರಾಜ್ಯಗಳ ವಿಭಾಗದಲ್ಲಿ ಕರ್ನಾಟಕ 18.01 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ತೆಲಂಗಾಣ (17.66 ಅಂಕ) ಎರಡನೇ ಮತ್ತು ಹರಿಯಾಣ (16.35 ಅಂಕ) ಮೂರನೇ ಸ್ಥಾನದಲ್ಲಿದೆ. ನೀತಿ ಆಯೋಗದ ಭಾರತ ಆವಿಷ್ಕಾರ ಸೂಚ್ಯಂಕ 2021 (ಇಂಡಿಯಾ ಇನೋವೇಶನ್) ಪ್ರಾದೇಶಿಕ ಮಟ್ಟದಲ್ಲಿ ಆವಿಷ್ಕರಿಸುವ ಸಾಮರ್ಥ್ಯ ಮತ್ತು ಅದಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ಪರಿಶೀಲಿಸುತ್ತದೆ.

ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೆರಿ ಸೂಚ್ಯಂಕ ಬಿಡುಗಡೆ ಮಾಡಿದರು. ಆವಿಷ್ಕಾರ ಸೂಚ್ಯಂಕದಲ್ಲಿ ಕರ್ನಾಟಕವು ಸತತ ಮೂರನೇ ಬಾರಿಗೆ ಪ್ರಥಮ ಸ್ಥಾನ ಗಳಿಸಿದೆ.

ಪ್ರಥಮ ಹಾಗೂ ದ್ವಿತೀಯ ಆವಿಷ್ಕಾರ ಸೂಚ್ಯಂಕಗಳನ್ನು ಕ್ರಮವಾಗಿ ಅಕ್ಟೋಬರ್ 2019 ಮತ್ತು ಜನವರಿ 2021ರಲ್ಲಿ ಬಿಡುಗಡೆ ಮಾಡಲಾಗಿತ್ತು. ಆವಿಷ್ಕಾರದ ಮೂರನೇ ಆವೃತ್ತಿಯಲ್ಲಿ, ಜಾಗತಿಕ ಆವಿಷ್ಕಾರ ಸೂಚ್ಯಂಕದ ಸಮನಾಗಿ ದೇಶದಲ್ಲಿ ಅವಿಷ್ಕಾರದ ವಿಶ್ಲೇಷಣೆ ಮಾಡುವುದಕ್ಕೆ ಒತ್ತು ನೀಡಲಾಗಿದೆ.

**ಪ್ರಮುಖ ಅಂಶಗಳು:**

- ಆವಿಷ್ಕಾರ ಸೂಚ್ಯಂಕದಲ್ಲಿ ರಾಜ್ಯಗಳ ಸಾಧನೆಯನ್ನು ಲೆಕ್ಕ ಹಾಕಲು 17 ಮುಖ್ಯ ರಾಜ್ಯಗಳು, 10 ಈಶಾನ್ಯ ಹಾಗೂ ಬೆಟ್ಟ ಗುಡ್ಡದ ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳು ಮತ್ತು ನಗರಗಳು ಎಂದು ವಿಂಗಡಿಸಲಾಗಿದೆ.
- ಈಶಾನ್ಯ ಮತ್ತು ಗುಡ್ಡಗಾಡು ರಾಜ್ಯಗಳ ವಿಭಾಗದಲ್ಲಿ ಮಣಿಪುರ 19.37 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಈ ವಿಭಾಗದಲ್ಲಿ ಉತ್ತರಾಖಂಡ (17.67 ಅಂಕ) ಎರಡನೇ ಸ್ಥಾನದಲ್ಲಿದ್ದರೆ, ನಾಗಾಲ್ಯಾಂಡ್ (11.00 ಅಂಕ) ಕೊನೆಯ ಸ್ಥಾನದಲ್ಲಿದೆ.
- ಕೇಂದ್ರಾಡಳಿತ ಪ್ರದೇಶಗಳು ಮತ್ತು ನಗರ-ರಾಜ್ಯಗಳ ವಿಭಾಗದಲ್ಲಿ, ಚಂಡೀಗಢ (27,88 ಅಂಕ) ಅಗ್ರ ಸ್ಥಾನವನ್ನು ಪಡೆದರೆ, ಲಡಾಖ್ (5.91 ಅಂಕ) ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ.
- ಕೋವಿಡ್ ನಂತರದ ಕಾಲಘಟ್ಟದಲ್ಲಿ ಸಿದ್ದಪಡಿಸಿರುವ ಈ ಸೂಚ್ಯಂಕವನ್ನು ಹಿಂದಿದ್ದ 32 ಸೂಚ್ಯಂಕಗಳ ಬದಲು ಹೊಸದಾಗಿ ಅಳವಡಿಸಿ ಕೊಂಡಿರುವ 66 ಮಾನದಂಡಗಳ ಅನ್ವಯ ಸಿದ್ದಪಡಿಸಲಾಗಿದೆ. ಇದು ಜಾಗತಿಕ ನಾವೀನ್ಯತಾ ಸೂಚ್ಯಂಕಕ್ಕೆ ಅನುಗುಣವಾಗಿದೆ

ಎಂದು ನೀತಿ ಆಯೋಗವು ತಿಳಿಸಿದೆ.

**ನೀತಿ ಆಯೋಗದ ಬಗ್ಗೆ:**

- NITI AAYOG ಜನವರಿ 1, 2015 ರಂದು ಜಾರಿಗೆ ತರಲಾಯಿತು.
- ನೀತಿ ಆಯೋಗದ ಅಧ್ಯಕ್ಷರು: ಪ್ರಧಾನ ಮಂತ್ರಿ (ನರೇಂದ್ರ ಮೋದಿ)
- ಉಪಾಧ್ಯಕ್ಷ: ಪ್ರಧಾನ ಮಂತ್ರಿ ಅವರಿಂದ ನೇಮಕಗೊಂಡವರು
- ನೀತಿ ಆಯೋಗದ ಪ್ರಸ್ತುತ ಉಪಾಧ್ಯಕ್ಷ: ಸುಮನ್ ಬೇರಿ
- ನೀತಿ ಆಯೋಗವನ್ನು 'ಥಿಂಕ್ ಟ್ಯಾಂಕ್' ಎಂದು ಕರೆಯಲಾಗುತ್ತದೆ
- ನೀತಿ ಆಯೋಗದ ಸಿಇಒ: ಪರಮೇಶ್ವರನ್ ಅಯ್ಯರ್
- ನೀತಿ ಆಯೋಗದ ಮೊದಲ ಉಪಾಧ್ಯಕ್ಷ: ಅರವಿಂದ್ ಪನಗಾರಿಯಾ

## ಉದ್ಯಮಸ್ನೇಹಿ ವಾತಾವರಣ : ದೇಶದಲ್ಲಿ ಕರ್ನಾಟಕ ಟಾಪರ್




ಆಂಧ್ರಪ್ರದೇಶ, ಗುಜರಾತ್, ತೆಲಂಗಾಣ, ಹರಿಯಾಣ ಹಾಗೂ ಕರ್ನಾಟಕ ರಾಜ್ಯಗಳು ದೇಶದಲ್ಲೇ ಅತ್ಯಂತ ಉತ್ತಮ ಉದ್ಯಮಸ್ನೇಹಿ ವಾತಾವರಣ ಹೊಂದಿರುವ ಐದು ರಾಜ್ಯಗಳಾಗಿ ಹೊರಹೊಮ್ಮಿವೆ. ಕೇಂದ್ರ ವಿತ್ತ ಹಾಗೂ ವಾಣಿಜ್ಯ ಸಚಿವಾಲಯ 2022 ನೇ ಸಾಲಿನ ಉದ್ಯಮಸ್ನೇಹಿ ರಾಜ್ಯಗಳ ಪಟ್ಟಿ ಬಿಡುಗಡೆ ಮಾಡಿದ್ದು, ಅದರಲ್ಲಿ ಈ ರಾಜ್ಯಗಳು ಉನ್ನತ ಸ್ಥಾನ ಪಡೆದಿವೆ.

ಉದ್ಯಮಸ್ನೇಹಿ ವಾತಾವರಣವನ್ನು ಅಳೆಯಲು ಈ ಬಾರಿ ಉದ್ಯಮ ಸುಧಾರಣೆ ಕ್ರಿಯಾಯೋಜನೆ ( ಬಿಆರ್‌ಎಪಿ ) ಗೆ ಅನುಗುಣವಾಗಿ 15 ವಿಭಾಗಗಳನ್ನು ಮಾಡಿ ರಾಜ್ಯಗಳಿಗೆ ರ್‍ಯಾಂಕಿಂಗ್ ನೀಡಲಾಗಿದೆ. ಅದರಲ್ಲಿ ಕರ್ನಾಟಕವು' ಈಸ್ ಆಫ್ ಡೂಯಿಂಗ್ ಬಿಸಿನೆಸ್ ' ವಿಭಾಗದಲ್ಲಿ ಐದನೇ ಸ್ಥಾನ ಪಡೆದಿದೆ.

**ಪ್ರಮುಖ ಅಂಶಗಳು:**

- ಉದ್ದಿಮೆಗಳಿಗೆ ಮಾಹಿತಿಯ ಲಭ್ಯತೆ, ಏಕಗವಾಕ್ಷಿ ವ್ಯವಸ್ಥೆ, ಕಾರ್ಮಿಕ ಹಾಗೂ ಭೂಸುಧಾರಣೆ ಮುಂತಾದ ಅಂಶಗಳನ್ನು ರ್‍ಯಾಂಕಿಂಗ್ ಗೆ ಪರಿಗಣಿಸಲಾಗಿದೆ.
- 2015 ರಿಂದ ಕೇಂದ್ರ ಸರ್ಕಾರವು ಹೊಸ ಮಾನದಂಡಗಳಿಗೆ ಅನುಗುಣವಾಗಿ ಉದ್ಯಮಸ್ನೇಹಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪಟ್ಟಿ ಬಿಡುಗಡೆ ಮಾಡುತ್ತಿದೆ, ಈ ಬಾರಿ ಮಾನದಂಡಗಳನ್ನು ಇನ್ನಷ್ಟು ಸುಧಾರಣೆ ಮಾಡಿ ರ್‍ಯಾಂಕಿಂಗ್ ನೀಡಲಾಗಿದೆ,
- ಈ ಬಾರಿ ಅತ್ಯಂತ ಉದ್ಯಮ ಸ್ನೇಹಿ, ಉದ್ಯಮ ಸ್ನೇಹಿ, ಭರವಸೆಯ ರಾಜ್ಯಗಳು ಮತ್ತು ಉದಯೋನ್ಮುಖ ಉದ್ಯಮ ಸ್ನೇಹಿ ರಾಜ್ಯಗಳು ಎಂದು 4 ಭಾಗ ಮಾಡಲಾಗಿದೆ.
- 7 ರಾಜ್ಯಕ್ಕೆ ಅತ್ಯಂತ ಉತ್ತಮ ಉದ್ಯಮ ಸ್ನೇಹಿ ರಾಜ್ಯ ಪಟ್ಟ ನೀಡಲಾಗಿದೆ.

## ಸಾಲುಮರದ ತಿಮ್ಮಕ್ಕಗೆ ಸಂಪುಟ ದರ್ಜೆ ಸ್ಥಾನ : ಸರ್ಕಾರ ಆದೇಶ



ಪದ್ಮಶ್ರೀ ಪುರಸ್ಕೃತ ಸಾಲುಮರದ ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸಂಪುಟ ದರ್ಜೆಯ ಸ್ಥಾನ ನೀಡಿ ರಾಜ್ಯ ಸರ್ಕಾರವು ಆದೇಶಿಸಿದೆ . ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಾಲು ಮರದ ತಿಮ್ಮಕ್ಕ ಅವರಿಗೆ ಪರಿಸರ ರಾಯಭಾರಿ ಗೌರವ ನೀಡಿ ಸಂಪುಟ ದರ್ಜೆಯ ಸ್ಥಾನಮಾನ ನೀಡಿದ್ದಾರೆ.

**ಪ್ರಮುಖ ಅಂಶಗಳು:**


- ರಾಜ್ಯದ ಉದ್ದಕ್ಕೂ ಪರಿಸರ ರಕ್ಷಣೆಯ ಪ್ರಚಾರಮಾಡಲು ಈ ಸ್ಥಾನಮಾನ ನೀಡಲಾಗಿದೆ ಹೊರರಾಜ್ಯಕ್ಕೆ ತೆರಳಿದರೆ ಸರ್ಕಾರದಿಂದಲೇ ಖರ್ಚು ಭರಿಸಲಾಗುತ್ತದೆ
- ವಾರ್ತಾ ಇಲಾಖೆಯಿಂದ ಸಾಲುಮರದ ತಿಮಕ್ಕ ಅವರ ವೆಬ್ ಸೀರಿಸ್ ಮಾಡಲಾಗುವುದು ಮತ್ತು ಅವರಿಗೆ ಬೇಲೂರು ತಾಲೂಕಿನಲ್ಲಿ 10 ಎಕರೆ ಭೂಮಿ ಮಂಜೂರು ಮಾಡಲಾಗುವುದು ಎಂದು ಸಹ ಮುಖ್ಯಮಂತ್ರಿಗಳು ಅಶ್ವಾಸನೆ ನೀಡಿದ್ದಾರೆ, ಅಲ್ಲದ, ಸಾಲುಮರದ ತಿಮ್ಮಕ್ಕ ಅವರಿಗೆ ಬಿಡಿಎ ನಿವೇಶನ ನೀಡಲಾಗಿದ್ದು, ಆ ನಿವೇಶನದಲ್ಲಿ ಮನೆಯನ್ನೂ ನಿರ್ಮಿಸಿ ಕೊಡಲಾಗುವುದು ಎಂದು ಸರ್ಕಾರ ಹೇಳಿದೆ.

**ಸಾಲುಮರದ ತಿಮ್ಮಕ್ಕ ಅವರ ಬಗ್ಗೆ:**

- ತಿಮ್ಮಕ್ಕ ಅವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಜನಿಸಿದರು. ತಂದೆ ಚಿಕ್ಕರಂಗಯ್ಯ; ತಾಯಿ ವಿಜಯಮ್ಮ.
- ಕುದೂರಿನಿಂದ ಹುಲಿಕಲ್ ತನಕವಿರುವ ರಾಜ್ಯ ಹೆದ್ದಾರಿ 94 ರಲ್ಲಿ ತಿಮ್ಮಕ್ಕರವರು ಬೆಳಸಿದ ಆಲದ ಮರಗಳಿವೆ.
- 2010ರ ಸಾಲಿನ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ಲಭಿಸಿದೆ.
- 2019 ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ.
- 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್
- ರಾಷ್ಟ್ರೀಯ ಪೌರ ಪ್ರಶಸ್ತಿ – 1995,
- ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ – 1997

# ಅಂತರ್‌ರಾಷ್ಟ್ರೀಯ ಪ್ರಚಲಿತ ಘಟನೆಗಳು

## ವಿಶ್ವ ಜನಸಂಖ್ಯಾ ದಿನ– ಜುಲೈ 11:




ಜಾಗತಿಕ ಜನಸಂಖ್ಯೆಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ. ಈ ದಿನದ ಪ್ರಮುಖ ಉದ್ದೇಶವೆಂದರೆ ಜನಸಂಖ್ಯೆಯ ಬೆಳವಣಿಗೆಯು ಪ್ರಕೃತಿಯ ಸ್ಥಿರ ಅಭಿವೃದ್ಧಿಯ ಮೇಲೆ ಬೀರುವ ಎಲ್ಲಾ ನಕಾರಾತ್ಮಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು. ಜಾಗತಿಕವಾಗಿ, ಸೆಮಿನಾರ್‌ಗಳು, ಚರ್ಚೆಗಳು, ಶೈಕ್ಷಣಿಕ ಅಧಿವೇಶನಗಳು, ಸಾರ್ವಜನಿಕ ಸ್ಪರ್ಧೆಗಳು, ಘೋಷಣೆಗಳು, ಕಾರ್ಯಾಗಾರಗಳು, ಚರ್ಚೆಗಳು, ಹಾಡುಗಳು ಇತ್ಯಾದಿಗಳನ್ನು ಆಯೋಜಿಸುವ ಮೂಲಕ ಈ ದಿನವನ್ನು ಆಚರಿಸಲಾಗುತ್ತದೆ.

**ವಿಶ್ವ ಜನಸಂಖ್ಯಾ ದಿನ 2022: ಥೀಮ್: "8 ಶತಕೋಟಿ ಪ್ರಪಂಚ: ಎಲ್ಲರಿಗೂ ಚೇತರಿಸಿಕೊಳ್ಳುವ ಭವಿಷ್ಯದ ಕಡೆಗೆ – ಅವಕಾಶಗಳನ್ನು ಬಳಸಿಕೊಳ್ಳುವುದು ಮತ್ತು ಎಲ್ಲರಿಗೂ ಹಕ್ಕುಗಳು ಮತ್ತು ಆಯ್ಕೆಗಳನ್ನು ಖಾತರಿಪಡಿಸುವುದು"**

**ವಿಶ್ವ ಜನಸಂಖ್ಯಾ ದಿನ: ಇತಿಹಾಸ**

➢ ಜುಲೈ 11 ರಂದು ಪ್ರತಿ ವರ್ಷ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ. 1987 ರ ಜುಲೈ 11 ರಂದು ವಿಶ್ವ ಜನಸಂಖ್ಯೆಯು 500 ಕೋಟಿಯನ್ನು ತಲುಪಿತ್ತು. ಇದರ ಜನಸಂಖ್ಯಾ ಹೆಚ್ಚಳದ ಪರಿಣಾಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ವಿಶ್ವಸಂಸ್ಥೆಯು, ತನ್ನ ಅಂಗ ಅಂಸ್ಥೆಯಾದ' ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಮಂಡಳಿ'ಯ ಮೂಲಕ 1989 ಜುಲೈ 11 ರಂದು ಮೊದಲ ಬಾರಿ ಜನಸಂಖ್ಯಾ ದಿನವನ್ನು ಆಚರಿಸಲಾಯಿತು.

**2023 ರಲ್ಲಿ ಚೀನಾ ಹಿಂದಿಕ್ಕಲಿರುವ ಭಾರತ–ವಿಶ್ವಸಂಸ್ಥೆ**

ಭಾರತವು ಮುಂದಿನ ವರ್ಷ ( 2023) ವಿಶ್ವದ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಲಿದೆ. ಈ ಹಾದಿಯಲ್ಲಿ ಚೀನಾವನ್ನು ಹಿಂದಿಕ್ಕಲಿದೆ ' ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ. '2022 ರಲ್ಲಿ ಚೀನಾವು 142 ಕೋಟಿ ಜನಸಂಖ್ಯೆ ಹೊಂದಿದ್ದರೆ , ಭಾರತದ ಜನಸಂಖ್ಯೆ 141 ಕೋಟಿ ಇರಲಿದೆ .

**ವರದಿಯ ಪ್ರಮುಖ ಅಂಶಗಳು:**

➢ 2050 ರ ವೇಳೆಗೆ ದೇಶದ ಜನಸಂಖ್ಯೆಯು 166 ಕೋಟಿಗೆ ಹೆಚ್ಚಲಿದೆ ' ಎಂದು ವಿಶ್ವಸಂಸ್ಥೆಯ ಅರ್ಥಶಾಸ್ತ್ರ ಮತ್ತು ಸಾಮಾಜಿಕ ವ್ಯವಹಾರಗಳ ವಿಭಾಗ ಹಾಗೂ ಜನಸಂಖ್ಯಾ ಘಟಕ ಹೊರತಂದಿರುವ ' ದಿ ವರ್ಲ್ಡ್ ಪಾಪ್ಯುಲೇಷನ್ ಪ್ರಾಸ್ಪೆಕ್ಸ್ –2022 ವರದಿಯಲ್ಲಿ ಹೇಳಲಾಗಿದೆ .

- 2022 ರ ನವೆಂಬರ್ 15 ರ ವೇಳೆಗೆ ವಿಶ್ವದ ಜನಸಂಖ್ಯೆಯು 800 ಕೋಟಿಗೆ ಏರಿಕೆಯಾಗಲಿದೆ . 2030 ರ ವೇಳೆಗೆ ಇದು ಸುಮಾರು 850 ಕೋಟಿಗೆ ಹೆಚ್ಚಳವಾಗಬಹುದೆಂದು ಅಂದಾಜಿ ಸಲಾಗಿದ್ದು , 2050 ಕ್ಕೆ ಈ ಪ್ರಮಾಣವು 970 ಕೋಟಿಗೆ ಏರಲಿದೆ.
- 2080 ರ ವೇಳೆಗೆ ಜಗತ್ತಿನ ಜನಸಂಖ್ಯೆಯು ಗರಿಷ್ಠಮಟ್ಟ ಅಂದಾಜು 1,040 ಕೋಟಿ ತಲುಪುವ ನಿರೀಕ್ಷೆ ಇದ್ದು , 2100 ರವರೆಗೂ ಇದರಲ್ಲಿ ಸ್ಥಿರತೆ ಕಾಣಬಹುದು ' ಎಂದು ವಿವರಿಸಲಾಗಿದೆ
- "2050 ರ ವೇಳೆಗೆ ಹೆಚ್ಚಳವಾಗಬಹುದಾದ ವಿಶ್ವದ ಜನಸಂಖ್ಯೆಯಲ್ಲಿ ಕಾಂಗೋ ಗಣರಾಜ್ಯ, ಈಜಿಪ್ಟ್, ಇಥಿಯೋಪಿಯಾ, ಭಾರತ, ನೈಜೀರಿಯಾ, ಪಾಕಿಸ್ತಾನ, ಫಿಲಿಪೀನ್ಸ್ ಹಾಗೂ ತಾಂಜೇನಿಯಾದ ಕೊಡುಗೆಯೇ ಅರ್ಧಕ್ಕಿಂತ ಹೆಚ್ಚು ಇರಬಹುದು ಎಂದು ಊಹಿಸಲಾಗಿದೆ' ಎಂದು ವರದಿ ವಿವರಿಸಿದೆ.
- 2010 ರಿಂದ 2021 ರ ಅವಧಿಯಲ್ಲಿ ಒಟ್ಟು 10 ರಾಷ್ಟ್ರಗಳಲ್ಲಿ 10 ಲಕ್ಷಕ್ಕೂ ಅಧಿಕ ವಲಸಿಗರ ಸಂಖ್ಯೆ ದಾಖಲಾಗಿರಬಹುದೆಂದು ಅಂದಾಜಿಸಲಾಗಿದೆ.

## ನೆಲ್ಸನ್ ಮಂಡೇಲಾ ಅಂತರಾಷ್ಟ್ರೀಯ ದಿನ – ಜುಲೈ 18


ಜುಲೈ 18 ನೆಲ್ಸನ್ ಮಂಡೇಲಾ ಹುಟ್ಟಿದ ದಿನ. ಪ್ರತಿ ವರ್ಷ ಜುಲೈ 18ರಂದು ನೆಲ್ಸನ್ ಮಂಡೇಲಾ ದಿನವಾಗಿ ಆಚರಿಸಲಾಗುತ್ತಿದೆ. ನೆಲ್ಸನ್ ಮಂಡೇಲಾ ಹುಟ್ಟಿದ ದಿನವನ್ನು ನೆಲ್ಸನ್ ಮಂಡೇಲಾ ದಿನ ಎಂದು ಆಚರಿಸಲಾಗುತ್ತಿದೆ. ದಕ್ಷಿಣ ಆಫ್ರಿಕಾದ ಗಾಂಧಿ ಎಂದೇ ನೆಲ್ಸನ್ ಮಂಡೇಲಾ ಪ್ರಸಿದ್ಧರಾಗಿದ್ದರು. ಶಾಂತಿ, ವರ್ಣಭೇದ ನೀತಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ವೈವಿಧ್ಯತೆ, ಸಾಮರಸ್ಯಕ್ಕೆ ಮಂಡೇಲಾ ಅವರು ನೀಡಿದ ಕೊಡುಗೆಯನ್ನು ನೆನಪಿಸುವುದು ಹಾಗೂ ಇಂಥ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಜನರನ್ನು ಪ್ರೇರೇಪಿಸುವುದು ಈ ದಿನದ ಆಶಯವಾಗಿದೆ.

ನೆಲ್ಸನ್ ಮಂಡೇಲಾ ಜುಲೈ 18,1918ರಲ್ಲಿ ದಕ್ಷಿಣ ಆಫ್ರಿಕಾದ ಟ್ರಾನ್ ನಲ್ಲಿ ಜನಿಸಿದರು. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧ ಹೋರಾಡಿ ಕಪ್ಪು ಜನಾಂಗದವರನ್ನು ಮುಖ್ಯವಾಹಿನಿಗೆ ತಂದು ನಿಲ್ಲಿಸುವಲ್ಲಿ ಯಶಸ್ವಿಯಾದರು. 2009ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನೆಲ್ಸನ್ ಮಂಡೇಲಾ ಅವರು ಹುಟ್ಟಿದ ದಿನವಾದ ಜುಲೈ 18ಅನ್ನು ನೆಲ್ಸನ್ ಮಂಡೇಲಾ ಇಂಟರ್ ನ್ಯಾಷನಲ್ ದಿನವನ್ನಾಗಿ ಆಚರಿಸಬೇಕೆಂದು ಘೋಷಿಸಲಾಯಿತು. ಮಂಡೇಲಾ ಅವರು 2013 ಡಿಸೆಂಬರ್ 5 ರಂದು ನಿಧನರಾದರು. ನೆಲ್ಸನ್ ಮಂಡೇಲಾ **ಅಂತರಾಷ್ಟ್ರೀಯ ದಿನ 2022ರ ಥೀಮ್ "ನಿಮಗೆ ಏನು ಸಾಧ್ಯವೋ ಅದನ್ನು ಮಾಡು, ನಿನ್ನ ಬಳಿ ಏನಿದೆ, ನೀನು ಎಲ್ಲಿರುವೆ",**

**ಪ್ರಮುಖ ಅಂಶಗಳು:**

- UNGA 2014 ರಲ್ಲಿ "ನೆಲ್ಸನ್ ಮಂಡೇಲಾ ಪ್ರಶಸ್ತಿ" ಯನ್ನು ಪ್ರಾರಂಭಿಸಿತು.
- ಮಾನವೀಯತೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರಿಗೆ ಇದನ್ನು ನೀಡಲಾಗುತ್ತದೆ.
- ನೆಲ್ಸನ್ ಮಂಡೇಲಾ ಅವರು ವಕೀಲರು, ಮಾನವ ಹಕ್ಕುಗಳ ಕಾರ್ಯಕರ್ತ ಮತ್ತು ಶಾಂತಿಯ ಅಂತರರಾಷ್ಟ್ರೀಯ ಪ್ರಚಾರಕರು ಆಗಿದ್ದರು.
- ಅವರು ದಕ್ಷಿಣ ಆಫ್ರಿಕಾದ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಮೊದಲ ಅಧ್ಯಕ್ಷರಾಗಿದ್ದರು
- ನೆಲ್ಸನ್ ಮಂಡೇಲಾ ಅವರು ಅಕ್ಟೋಬರ್ 1993 ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದರು.

# 2022ರ ಜಾಗತಿಕ ಲಿಂಗ ಅಂತರ ಸೂಚ್ಯಂಕ ಭಾರತಕ್ಕೆ – 135ನೇ ಸ್ಥಾನ



ಲಿಂಗ ಸಮಾನತೆ ಕುರಿತಾದ ವರದಿಯೊಂದನ್ನು ವಿಶ್ವ ಆರ್ಥಿಕ ವೇದಿಕೆ ಬಿಡುಗಡೆ ಮಾಡಿದ್ದು, 146 ದೇಶಗಳಲ್ಲಿ ಭಾರತ 135 ನೇ ಸ್ಥಾನದಲ್ಲಿದೆ. ಆರೋಗ್ಯ ಮತ್ತು ಉಳಿವಿಕೆಗಳಲ್ಲಿ ಭಾರತದ ಸ್ಥಾನ ಅತ್ಯಂತ ಕೆಳಮಟ್ಟದಲ್ಲಿದೆ ಎಂದು ವರದಿ ಹೇಳಿದೆ. ಕಳೆದ ವರ್ಷದಂತೆಯೇ ಈ ವರ್ಷವೂ ಐಸ್‌ಲ್ಯಾಂಡ್ ಮೊದಲ ಸ್ಥಾನವನ್ನು ಉಳಿಸಿಕೊಂಡಿದ್ದು ನಂತರದ ಸ್ಥಾನಗಳಲ್ಲಿ ಫಿನ್‌ಲ್ಯಾಂಡ್. ನಾರ್ವೆ ನ್ಯೂಜಿಲೆಂಡ್ ಮತ್ತು ಸ್ವೀಡನ್ ದೇಶಗಳಿವೆ. ಕೇವಲ 11 ದೇಶಗಳು ಮಾತ್ರ ಭಾರತಕ್ಕಿಂತ ಕೆಳಗಿನ ಸ್ಥಾನಗಳನ್ನು ಪಡೆದುಕೊಂಡಿವೆ. 2021 ರಲ್ಲಿ ಭಾರತವು ಸೂಚ್ಯಂಕದಲ್ಲಿ ಒಟ್ಟು 156 ದೇಶಗಳಲ್ಲಿ 140 ನೇ ಸ್ಥಾನದಲ್ಲಿತ್ತು.

ನೆರೆಹೊರೆಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಸಾಧನೆಯು ಕಳಪೆ ಸ್ಥಾನದಲ್ಲಿದೆ. ಬಾಂಗ್ಲಾದೇಶ (71), ನೇಪಾಳ (96), ಶ್ರೀಲಂಕಾ (110). ಮಾಲ್ಡೀವ್ಸ್ (117) ಮತ್ತು ಭೂತಾನ್ (126) ನಂತರದ ಸ್ಥಾನದಲ್ಲಿದೆ.

ಇರಾನ್ (143), ಪಾಕಿಸ್ತಾನ (145) ಮತ್ತು ಅಫ್ಘಾನಿಸ್ತಾನ (146) ಈ ರಾಷ್ಟ್ರಗಳು ದಕ್ಷಿಣ ಏಷ್ಯಾದಲ್ಲಿ ಭಾರತಕ್ಕಿಂತ ಕಳಪೆ ಸ್ಥಾನ ಪಡೆದಿವೆ. ದಕ್ಷಿಣ ಏಷ್ಯಾವು ಲಿಂಗ ಸಮಾನತೆಯನ್ನು ತಲುಪಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ, ಇದು ಮುಂದಿನ 197 ವರ್ಷಗಳಲ್ಲಿ ಸಾಧ್ಯತೆ ಎಂದು ಅಂದಾಜಿಸಲಾಗಿದೆ.

## ಟಾಪ್ 10 ರಾಷ್ಟ್ರಗಳು :

ಜಗತ್ತಿನಲ್ಲಿ ಯಾವುದೇ ದೇಶವು ಪೂರ್ಣ ಲಿಂಗ ಸಮಾನತೆಯನ್ನು ಸಾಧಿಸಲಿಲ್ಲ ಆದರೂ 10 ಆರ್ಥಿಕತೆಗಳು ತಮ್ಮ ಲಿಂಗ ಅಂತರ ಅಸಮಾನತೆಯಲ್ಲಿ ಕನಿಷ್ಠ 80% ಅನ್ನು ಸಾಧಿಸಿವೆ. ಐಸ್ಲ್ಯಾಂಡ್ (90.8%) ಜಾಗತಿಕ ಶ್ರೇಯಾಂಕದಲ್ಲಿ ಅಗ್ರಸ್ಥಾನದಲ್ಲಿದೆ. 90% ಕ್ಕಿಂತ ಹೆಚ್ಚು ಲಿಂಗ ಅಂತರವನ್ನು ಮುಟ್ಟಿದ ಏಕೈಕ ಆರ್ಥಿಕತೆ ಐಸ್ಲ್ಯಾಂಡ್ ಆಗಿದೆ. ಇತರ ಸ್ಕ್ಯಾಂಡಿನೇವಿಯನ್ ದೇಶಗಳಾದ ಫಿನ್‌ಲ್ಯಾಂಡ್ (86%, 2ನೇ) ನಾರ್ವೆ (84.5% 3ನೇ) ಮತ್ತು ಸ್ವೀಡನ್ (82.2% 5ನೇ) ಅಗ್ರ ಐದು ಸ್ಥಾನಗಳಲ್ಲಿವೆ, ಇತರ ಯುರೋಪಿಯನ್ ರಾಷ್ಟ್ರಗಳಾದ ಐರ್ಲೆಂಡ್ (80.4%) ಮತ್ತು ಜರ್ಮನಿ (80.1%) ಕ್ರಮವಾಗಿ ಒಂಬತ್ತನೇ ಮತ್ತು ಹತ್ತನೇ ಸ್ಥಾನಗಳಲ್ಲಿ. ಉಪ–ಸಹಾರನ್ ಆಫ್ರಿಕನ್ ದೇಶಗಳು ರುವಾಂಡಾ (81.1%, 6ನೇ) ಮತ್ತು ನಮೀಬಿಯಾ (80.7%, 8ನೇ), ಜೊತೆಗೆ ಒಂದು ಲ್ಯಾಟಿನ್ ಅಮೇರಿಕನ್ ದೇಶ, ನಿಕರಾಗುವಾ (81%7ನೇ), ಮತ್ತು ಮತ್ತು ಪೂರ್ವ ಏಷ್ಯಾ ಮತ್ತು ಪೆಸಿಫಿಕ್, ನ್ಯೂಜಿಲೆಂಡ್ (84.%5ನೇ) ಸಹ ಟಾಪ್ 10 ರಲ್ಲಿ ಸ್ಥಾನಗಳನ್ನು ಪಡೆದುಕೊಂಡಿವೆ.

## ಭಾರತದ ಸಹಭಾಗಿತ್ವದಿಂದ I2U2 ಸಂಘಟನೆಗೆ ಮಹತ್ವದ ಬದಲಾವಣೆ




ಐ2 ಯು 2 ಸಂಘಟನೆ ರಚನೆ ಪ್ರಮುಖ ಹೆಜ್ಜೆಯಾಗಿದೆ. ಅದರಲ್ಲೂ ಸಂಘಟನೆಗೆ ಭಾರತದ ಸಹಭಾಗಿತ್ವ ಇರುವುದು ಜಾಗತಿಕ ಮಟ್ಟದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಲಿದೆ.' ಎಂದು ಇಸ್ರೇಲ್‌ನ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೇಜರ್ ಜನರಲ್ ಯಾಕೊವ್ ಅಮಿಡ್ರೋರ್ ಪ್ರತಿಪಾದಿಸಿದ್ದಾರೆ. 'ಐ 2ಯು 2 ಶೃಂಗಸಭೆಗೂ ಮುನ್ನ ಪಿಟಿಐ ಸುದ್ದಿಸಂಸ್ಥೆ ಜೊತೆ ಮಾತನಾಡಿದ ಅವರು, 'ಜಾಗತಿಕ ಹಿತಾಸಕ್ತಿ ರಕ್ಷಣೆ ದೃಷ್ಟಿಯಿಂದ ಮತ್ತಷ್ಟು ದೇಶಗಳು ಈ ಸಂಘಟನೆಯ ಸೇರುವಂತೆ ಈ ನಡೆ ಪ್ರೇರಣೆ ನೀಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜುಲೈ 13 ರಿಂದ 16 ರವರೆಗೆ ಸಂಘಟನೆಯ ಶೃಂಗಸಭೆ ವರ್ಚುವಲ್ ವಿಧಾನದಲ್ಲಿ ಸಭೆ ನಡೆಯಿತು. ಈ ಸಂದರ್ಭದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ ಭಾರತದಾದ್ಯಂತ ಸಮಗ್ರ ಆಹಾರ ಉದ್ಯಾನವನಗಳ ಸರಣಿಯನ್ನು ಅಭಿವೃದ್ಧಿ ಪಡಿಸಲು 2 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಘೋಷಿಸಿತು.

**I2 U2 ಸಂಘಟನೆ ಬಗ್ಗೆ :**

- I2U2 ನಾಲ್ಕು ರಾಷ್ಟ್ರಗಳು– ಭಾರತ, ಇಸ್ರೇಲ್, UAE ಮತ್ತು US ಗಳಿಂದರಚಿತವಾದ ಹೊಸ ಗುಂಪು, ಅದಕ್ಕೆ ಇಂಟರ್‌ನ್ಯಾಶನಲ್ ಫೋರಮ್ ಫಾರ್ ಎಕನಾಮಿಕ್ ಕೋಅಪರೇಶನ್ ಎಂಬ ಹೆಸರನ್ನು ನೀಡಲಾಯಿತು. 2022 ಅಕ್ಟೋಬರ್‌ನಲ್ಲಿ ಈ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ.
- ಗೋಲನ್ ಹೈಟ್ಸ್' ಎಂದು ಕರೆಯಲ್ಪಡುವ ಪ್ರದೇಶವು ಕೆಲವೊಮ್ಮೆ ಈ ಸಂಘಟನೆಗೆ ಸಂಬಂಧಿಸಿದಂತೆ ಸುದ್ದಿಯಲ್ಲಿ ಕಾಣಿಸಿಕೊಳ್ಳುತ್ತದೆ ಇದು ಮಧ್ಯಪ್ರಾಚ್ಯದ ಇಸ್ರೇಲ್‌ನಲ್ಲಿ ಕಂಡು ಬರುತ್ತದೆ.

**<u>ಅಬ್ರಹಾಂ ಒಪ್ಪಂದ :</u>**

- 2021 ರಲ್ಲಿ ಇಸ್ರೇಲ್ ಮತ್ತು UAE ನಡುವಿನ ಅಬ್ರಹಾಂ ಒಪ್ಪಂದಗಳ ನಂತರ, ಕಡಲ ಭದ್ರತೆ, ಮೂಲಸೌಕರ್ಯ ಮತ್ತು ಪ್ರದೇಶದ ಸಾರಿಗೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಲು ರಚಿಸಲಾಯಿತು.
- ಆ ಸಮಯದಲ್ಲಿ ಇದನ್ನು 'ಆರ್ಥಿಕ ಸಹಕಾರಕ್ಕಾಗಿ ಅಂತರರಾಷ್ಟ್ರೀಯ ವೇದಿಕೆ' ಎಂದು ಕರೆಯಲಾಯಿತು.
- ಇದನ್ನು 'ಪಶ್ಚಿಮ ಏಷ್ಯದ ಕ್ವಾಡ್;' ಎಂದು ಕರೆಯಲಾಗುತ್ತಿದೆ.

**<u>ಸ್ಥಾಪನೆಯ ಉದ್ದೇಶ :</u>**

- ಏಷ್ಯಾದಲ್ಲಿ ಆರ್ಥಿಕ ಮತ್ತು ರಾಜಕೀಯ ಸಹಕಾರವನ್ನು ವಿಸ್ತರಿಸುವುದರ ಮೇಲೆ ಕೇಂದ್ರೀಕರಿಸಿದೆ.
- ನೀರು, ಆಹಾರ ಭದ್ರತೆ, ಇಂಧನ ಆರೋಗ್ಯ, ಸಾರಿಗೆ ಮತ್ತು ಬಾಹ್ಯಾಕಾಶ ಸೇರಿದಂತೆ ಪರಸ್ಪರ ಗುರುತಿಸಲಾದ ಆರು ಕ್ಷೇತ್ರಗಳಲ್ಲಿ ಹೂಡಿಕೆಗಳನ್ನು ಉತ್ತೇಜಿಸುವ ಉದ್ದೇಶದಿಂದ ಈ ಗುಂಪನ್ನು ಸ್ಥಾಪಿಸಲಾಗಿದೆ.

**<u>ಭಾರತಕ್ಕೆ I2 U2 ನ ಪ್ರಾಮುಖ್ಯತೆ ಏನು? :</u>**

- I2U2 ಭಾರತದ ಭೌಗೋಳಿಕ ರಾಜಕೀಯ ಅಸ್ತಿತ್ವವನ್ನು ವಿಶೇಷವಾಗಿ ಪಶ್ಚಿಮ ಏಷ್ಯಾದಲ್ಲಿ ಬಲಪಡಿಸುತ್ತದೆ. ಭಾರತವು ಕಾರ್ಯತಂತ್ರವಾಗಿ ಮತ್ತು ಆರ್ಥಿಕವಾಗಿ ವಿಶ್ವದ ಪ್ರಮುಖ ನಾಯಕವಾಗಿ ಗುರುತಿಸಿಕೊಳ್ಳಲು ಸಹಕಾರಿ ಆಗುತ್ತದೆ.

# ಈ ವರ್ಷದ ಅತಿದೊಡ್ಡ ಸೂಪರ್ ಮೂನ್ –ಜುಲೈ 13 :




ಈ ವರ್ಷದ ಅತಿದೊಡ್ಡ ಸೂಪರ್ ಮೂನ್ ಜುಲೈ 13 ರಂದು ಕಾಣಿಸಿದೆ. ವಿಶ್ವದ ಅನೇಕ ದೇಶಗಳಲ್ಲಿ ಈ ವಿಶೇಷ ವಿದ್ಯಮಾನವನ್ನು ವೀಕ್ಷಿಸಿದ್ದಾರೆ. ಜುಲೈ 12 ರಿಂದ ಮೂರು ದಿನಗಳ ಕಾಲ ಹುಣ್ಣಿಮೆ ಚಂದ್ರನ ಮನೋಹರ ದೃಶ್ಯವನ್ನು ಕಾಣಬಹುದು. ಭಾರತೀಯ ಕಾಲಮಾನದಲ್ಲಿ ಜುಲೈ 13 ರ ಮಧ್ಯ ರಾತ್ರಿ ಪರಿಪೂರ್ಣ ಸೂಪರ್ ಮೂನ್ ದರ್ಶನ ಆಗುತ್ತದೆ.

**ಸೂಪರ್ ಮೂನ್ ಎಂದರೆ? :** ಹುಣ್ಣಿಮೆ ಅಥವಾ ಪೌರ್ಣಿಮೆ ದಿನದಂದು ಭೂಮಿಯ ಒಂದು ಬದಿಯಲ್ಲಿ ಸೂರ್ಯ ಇದ್ದರೆ, ಅದಕ್ಕೆ ತದ್ವಿರುದ್ಧವಾಗಿ ಹಿಂಬದಿಯಲ್ಲಿ ಚಂದ್ರನಿರುತ್ತಾನೆ. ಅಂದರೆ ಅಂದು 'ಸೂರ್ಯ ಮತ್ತು ಚಂದ್ರನ ಮಧ್ಯ ಭೂಮಿ' ಇರುತ್ತದೆ. ಸೂರ್ಯನ ಪ್ರಕಾಶದಲ್ಲಿ ಇಡೀ ಚಂದ್ರ ಹೊಳೆಯು ತ್ತಿರುವುದನ್ನು ಭೂಮಿಯಿಂದ ಕಾಣಬಹುದು.

**ಪ್ರಮುಖ ಅಂಶಗಳು :**

➢ ಸೂರ್ಯನನ್ನು ಭೂಮಿ ಸುತ್ತುಹಾಕಲು 365 ದಿನ ತೆಗೆದುಕೊಳ್ಳುತ್ತದೆ. ಚಂದ್ರ ಭೂಮಿಯ ಪ್ರದಕ್ಷಣೆಗೆ 27 ದಿನ ಬೇಕಾಗುತ್ತದೆ. ಹೀಗೆ ಸುತ್ತು ಹಾಕುವಾಗ ಭೂಮಿಗೆ ಚಂದ್ರ ಸಮೀಪ ಬರುವುದು 3,63,600 ಕಿ ಮೀ ದೂರದಲ್ಲಿ, ಈ ಅಂತರವನ್ನು ಪೆರಿಜೀ (Perigee) ಎನ್ನುತ್ತಾರೆ.

➢ ಅತಿ ದೂರ ಎಂದರೆ 4,05,500 ಕಿಮೀ ಅತಿ ಕಡಿಮೆ ದೂರವಾದ ಪೆರಜಿಯ ಶೇ. 90ರಷ್ಟು ಅಂತರಕ್ಕೆ ಹುಣ್ಣಿಮೆಯೆಂದು ಚಂದ್ರ ಬಂದರೆ ಅದಕ್ಕೆ ಸೂಪರ್ ಮೂನ್ ಎನ್ನುವುದು.

➢ **ಬಕ್ ಸೂಪರ್ ಮೂನ್;** ಈ ಬಾರಿಯ ಸೂಪರ್ ಮೂನ್ ಅನ್ನು ಬಕ್ ಸೂಪರ್ ಮೂನ್, ಥಂಡರ್ ಸೂಪರ್ ಮೂನ್, ಹೇ ಮೂನ್, ಮೀಡ್ ಮೂನ್ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಆಯಾ ಪ್ರದೇಶಗಳ ವೈಶಿಷ್ಟ್ಯತೆಗೆ ತಕ್ಕಂತೆ ಈ ಹೆಸರು ಕೊಡಲಾಗಿದೆ. ಬಕ್ ಎಂಬುದು ಜಿಂಕೆ ಜಾತಿಯ ಕಾಡುಪ್ರಾಣಿ, ಈ ಸೂಪರ್ ಮೂನ್ ಅವಧಿಯಲ್ಲಿ ಈ ಪ್ರಾಣಿಗಳಿಗೆ ಕೊಂಬು ಬೆಳೆಯುತ್ತದಂತೆ. ಹೀಗಾಗಿ, ಇದಕ್ಕೆ ಬಕ್ ಸೂಪರ್ ಮೂನ್ ಎಂದು ಕರೆಯುತ್ತಾರೆ.

➢ ಸೂರ್ಯ, ಭೂಮಿ ಮತ್ತು ಚಂದ್ರರು ಬಹುತೇಕ ಒಂದೇ ಸರಳ ರೇಖೆಯಲ್ಲಿ ಬಂದಾಗ ಚಂದ್ರನ ಗ್ರಹಣಗಳು ಹುಣ್ಣಿಮೆಯಲ್ಲಿ ಸಂಭವಿಸುತ್ತವೆ.

➢ **ಬ್ಲಡ್ ಮೂನ್** ಎಂದರೆ ಇದು ಆಳವಾದ ಕೆಂಪು ಹೊಳಪನ್ನು ಹೊಂದಿರುವ ಸಂಪೂರ್ಣ ಚಂದ್ರಗ್ರಹಣವಾಗಿದೆ. ಭೂಮಿ ವಾತಾವರಣದಲ್ಲಿರುವ ಧೂಳಿನ ಕಾರಣದಿಂದಾಗಿ ಗೋಚರಿಸುವ ಬಣ್ಣವು ಕೆಂಪಾಗಿ ಕಾಣಿಸುತ್ತದೆ.

➢ ವಜ್ರದ ಉಂಗುರದ ರೀತಿಯ ಗ್ರಹಣವು ಸಂಪೂರ್ಣ ಸೂರ್ಯಗ್ರಹಣದ ಸಂದರ್ಭದಲ್ಲಿ ಸಂಭವಿಸುತ್ತದೆ.

# ಯುನೈಟೆಡ್ ಕಿಂಗ್‌ಡಂ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೋರಿಸ್ ಜಾನ್ಸನ್



ಭಾರೀ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ರಾಜೀನಾಮೆ ಘೋಷಿಸಿದ್ದಾರೆ. ಬೋರಿಸ್ ಜಾನ್ಸನ್ ಅವರ ವಿರುದ್ಧ ಸರ್ಕಾರದ ಸುಮಾರು 40 ಮಂದಿ ರಾಜೀನಾಮೆ ನೀಡಿದ್ದರು. ಹೀಗಾಗಿ ಸರ್ಕಾರ ಅಲ್ಪತಮಕ್ಕೆ ಕುಸಿತದಿತ್ತು ಮೂರು ವರ್ಷಗಳ ಕಾಲ ಪ್ರಧಾನಿಯಾಗಿದ್ದ ಬೋರಿಸ್ ಜಾನ್ಸನ್ ಕೊನೆಗೂ ರಾಜೀನಾಮೆ ನೀಡಿದ್ದಾರೆ. 2019 ರಲ್ಲಿ ಪ್ರಧಾನಿ ಹುದ್ದೆಗೆ ಏರಿದ್ದ ಬೋರಿಸ್ ಜಾನ್ಸನ್ ಹಗರಣ, ವಿವಾದಗಳಲ್ಲೇ ಹೆಚ್ಚಿನ ಸಮಯ ಕಳೆದಿದ್ದರು. ಇವರ ಸಚಿವ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಭಾರತ ಇನ್ಫೋಸಿಸ್ ನಾರಾಯಣ ಮೂರ್ತಿ ಅವರ ಅಳಿಯ ಮಾಜಿ ಸಚಿವ ರಿಷಿ ಸುನಕ್ ಅವರು ಕನ್ಸರ್ವೇಟಿವ್ ಪಕ್ಷದ ನಾಯಕ ಸ್ಥಾನದ ಜೊತೆಗೆ ಪ್ರಧಾನಿ ಹುದ್ದೆಯ ಅಕಾಂಕ್ಷಿಗಳ ಪಟ್ಟಿಯಲ್ಲೂ ಮುನ್ನಡೆ ಕಾಯ್ದುಕೊಂಡಿದ್ದಾರೆ. ಇವರು ಆರ್ಥಿಕ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.

**ಬೋರಿಸ್ ಜಾನ್ಸನ್ ರಾಜೀನಾಮೆ ಏಕೆ? :**

ಸಂಸದ ಕ್ರಿಸ್ಟೋಫರ್ ಪಿಂಚರ್ ವಿರುದ್ಧದ ಹಿಂದಿನ ಲೈಂಗಿಕ ದೌರ್ಜನ್ಯ ಆರೋಪಗಳ ಬಗ್ಗೆ ಜಾನ್ಸನ್ ಅವರ ಕಛೇರಿ ಗೊತ್ತಿದ್ದು ತಪ್ಪು ಮಾಹಿತಿ ನೀಡಿದೆ ಎಂದು ಹಿರಿಯ ಮಾಜಿ ನಾಗರಿಕ ಸೇವಕ ಆರೋಪಿಸಿದ ನಂತರ ಸರ್ಕಾರದಿಂದ ಬೃಹತ್ ಪ್ರಮಾಣದಲ್ಲಿ ರಾಜೀನಾಮೆಗಳು ಬಂದವು. ಫೆಬ್ರುವರಿಯಲ್ಲಿ, ಜಾನ್ಸನ್ ಪಿಂಚರ್ ಅವರನ್ನು ಉಪ ಮುಖ್ಯ ಸಚಿವರಾಗಿ ನೇಮಕ ಮಾಡಿದರು ಎಂಬ ಇತ್ತೀಚಿನ ಬಹಿರಂಗಪಡಿಸುವಿಕೆಗಳು ಜಾನ್ಸನ್ ರಾಜೀನಾಮೆಗೆ ಕಾರಣವಾಯಿತು.

**ಬೋರಿ ಜಾನ್ಸನ್ ಅವರ ಬಗ್ಗೆ :**

- ಪೂರ್ಣ ಹೆಸರು ಅಲೆಕ್ಸಾಂಡರ್ ಬೋರಸ್ ಡಿ ಫೆಫೆಲ್ ಜಾನ್ಸನ್.
- ಜನನ ಜೂನ್ 19, 1964, ನ್ಯೂಯಾರ್ಕ್ ಸಿಟಿ, ಯುಎಸ್.
- ಅಮೇರಿಕನ್ ಮೂಲದ ಬ್ರಿಟಿಷ್ ಪತ್ರಕರ್ತ ಮತ್ತು ಕನ್ಸರ್ವೇಟಿವ್ ಪಕ್ಷದ ರಾಜಕಾರಣಿ ಜುಲೈ 2019 ರಲ್ಲಿ ಯುನೈಟೆಡ್ ಕಿಂಗ್‌ಡಂನ ಪ್ರಧಾನ ಮಂತ್ರಿಯಾದರು.
- ಅವರು ಲಂಡನ್‌ನ ಎರಡನೇ ಚುನಾಯಿತ ಮೇಯರ್ ಆಗಿ (2008–16) ಮತ್ತು 2016–18ರ ಅವಧಿಯಲ್ಲಿ ಪ್ರಧಾನ ಮಂತ್ರಿ ಥೆರೆಸಾ ಮೇ ಅಡಿಯಲ್ಲಿ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.
- ಕೃತಿಗಳು : Lend Me Your Ears (2003), a collection of essays; Seventy-two Virgins (2004), a novel; and The Dream of Rome (2006),

# ಟ್ವಿಟರ್ ಖರೀದಿಸುವ ಒಪ್ಪಂದವನ್ನು ಕೈಬಿಟ್ಟ– ಎಲೋನ್ ಮಸ್ಕ್ :




ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಲೋನ್ ಮಸ್ಕ್ ಟ್ವಿಟ್ಟರ್ ಖರೀದಿ ಒಪ್ಪಂದವನ್ನು ರದ್ದುಗೊಳಿಸುವುದಾಗಿ ಟ್ವಿಟರ್ ಮಂಡಳಿಗೆ ತಿಳಿಸಿದ್ದಾರೆ. ಈ ಬೆಳವಣಿಗೆಯ ಬಳಿಕ ಮೈಕ್ರೋಬ್ಲಾಗಿಂಗ್ ಸೈಟ್ ಅನ್ನು $ 44 ಶತಕೋಟಿಗೆ ಖರೀದಿಸುವ ಅವರ ಒಪ್ಪಂದವು ಅಪಾಯದಲ್ಲಿದೆ ಎಂಬಂತೆ ತೋರುತ್ತದೆ. ಆದರೆ, ಎಲೋನ್ ಮಸ್ಕ್ ಅವರಿಂದ ಪ್ರತಿ ಷೇರಿಗೆ $ 54.20 ಪಡೆದುಕೊಳ್ಳುವ ಸಂಪೂರ್ಣ ಭರವಸೆ ತಮಗಿದೆ ಟ್ವಿಟರ್ ಮಂಡಳಿಯು ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಇದಕ್ಕಾಗಿ ನ್ಯಾಯಾಲಯದ ಮೊರೆ ಹೋಗಿ ಕಾನೂನು ಕ್ರಮ ಕೈಗೊಂಡು ಒಪ್ಪಂದವನ್ನು ಜಾರಿಗೆ ತರುವುದಾಗಿ ಟ್ವಿಟರ್ ಹೇಳಿದೆ.

**ಎಲೋನ್ ಮಸ್ಕ್ ವಿರುದ್ಧ ನ್ಯಾಯಾಲಯದ ತಟ್ಟಲು ನಿರ್ಧರಿಸಿದ ಟ್ವಿಟ್ಟರ್ :**

ಒಪ್ಪಂದದ ಸಮಯದಲ್ಲಿ ಟ್ವಿಟರ್ ಒಪ್ಪಂದದಲ್ಲಿ ತಪ್ಪಾದ ಮಾಹಿತಿಯನ್ನು ನೀಡಿದೆ ಎಂದು ಎಲೋನ್ ಪರವಾಗಿ US ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಕಮಿಷನ್ (SEC) ಗೆ ತಿಳಿಸಿದೆ. ಇದರಿಂದಾಗಿ $ 44 ಶತಕೋಟಿ ಟ್ವಿಟರ್ ಒಪ್ಪಂದವನ್ನು ಕೈಬಿಡಲಾಗುತ್ತಿದೆ. ಎಲೋನ್ ಮಸ್ಕ್ ಅವರು ಟ್ವಿಟರ್ ಅನ್ನು 44 ಶತಕೋಟಿ ಡಾಲರ್ ಅಥವಾ 3.5 ಲಕ್ಷ ಕೋಟಿಗೆ ಖರೀದಿಸುವ ಒಪ್ಪಂದವನ್ನು ಅಂತ್ಯಗೊಳಿಸಿದ್ದಕ್ಕಾಗಿ ಎಲೋನ್ ಮಸ್ಕ್ ವಿರುದ್ಧ ನ್ಯಾಯಾಲಯದ ಮೊರೆ ಹೋಗಲು ಇದೀಗ ಟ್ವಿಟರ್ ನಿರ್ಧರಿಸಿದೆ.




SEC ನಲ್ಲಿ, ಎಲೋನ್ ಮಸ್ಕ್ ಮತ್ತು ಅವರ ತಂಡವು ಕಳೆದ 2 ತಿಂಗಳುಗಳಿಂದ ಟ್ವಿಟರ್‌ನಲ್ಲಿರುವ ನಕಲಿ ಮತ್ತು ಸ್ಪ್ಯಾಮ್ ಖಾತೆಗಳ ಸಂಖ್ಯೆ ಮತ್ತು ಆ ಖಾತೆಗಳನ್ನು ಹೇಗೆ ಪತ್ತೆಹಚ್ಚಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಕುರಿತು ಟ್ವಿಟರ್ ಅನ್ನು ನಿರಂತರವಾಗಿ ಸಂಪರ್ಕಿಸುತ್ತಿದೆ ಎಂದು ಎಲೋನ್ ಮಸ್ಕ್ ತನ್ನ ವಾದ ಮಂಡಿಸಿದ್ದಾರೆ. ಆದರೆ, ಪ್ರತಿ ಬಾರಿ ಟ್ವಿಟರ್ ಮಾಹಿತಿ ನೀಡುವುದರಿಂದ ದೂರ ಸರಿಯುತ್ತಿದೆ ಮತ್ತು ಅರ್ಧ ಮಾಹಿತಿಯನ್ನು ನೀಡುತ್ತಿದೆ ಎಂದು ಅವರು ಹೇಳಿದ್ದಾರೆ.

Twitter CEO: ಪರಾಗ್ ಅಗರವಾಲ್; Twitter ಆರಂಭ : 21 ಮಾರ್ಚ್ 2006:

Twitter ನ ಪ್ರಧಾನ ಕಛೇರಿ: ಸ್ಯಾನ್ ಸ್ಯಾನ್ ಫ್ರಾನ್ಸಿಸ್ಕೋ, ಕ್ಯಾಲಿಫೋರ್ನಿಯಾ, ಯುನೈಟೆಡ್ ಸ್ಟೇಟ್ಸ್

# ಲಂಕಾ ಆರ್ಥಿಕ ಬಿಕ್ಕಟ್ಟು



ಶ್ರೀಲಂಕಾದಲ್ಲಿ ಕಳೆದ 2–3 ವರ್ಷಗಳಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ.ಈಗ್ಗೆ ಐದಾರು ತಿಂಗಳಿಂದ ಆಹಾರದ ಅಭಾವ ವಿಪರೀತವಾಗಿದೆ.ಪೆಟ್ರೋಲ್ ಸಿಗುತ್ತಿಲ್ಲ, ವಿದ್ಯುತ್ ಕಡಿತದ ಸಮಸ್ಯೆ ಇದೆ.ಶ್ರೀಲಂಕಾದ ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಹಣವೇ ಬಹುತೇಕ ಬರಿದಾಗಿದೆ.ಆರ್ಥಿಕ ಪರಿಸ್ಥಿತಿ ಚೇತರಿಸಿಕೊಳ್ಳುವ ಯಾವ ಆಶಯವೂ ಇಲ್ಲದಂತಾಯಿತು.ಇವೆಲ್ಲವೂ ಜನರ ಆಕ್ರೋಶಕ್ಕೆ ಎಡೆ ಮಾಡಿಕೊಟ್ಟು, ಕಳೆದ ಎರಡರ ಮೂರು ತಿಂಗಳಿಂದ ಜನರು ಇಲ್ಲಿ ಪ್ರತಿಭಟನೆಗಳನ್ನು ನಡೆಸುತ್ತಾ ಬಂದಿದ್ದಾರೆ.ಮೊದಲಿಗೆ ಮಹಿಂದಾ ರಾಜಪಕ್ಷೆ ಈ ಆರ್ಥಿಕ ದುರವಸ್ಥೆಯ ಹೊಣೆ ಹೊತ್ತು ರಾಜೀನಾಮೆ ನೀಡಿದರು. ಅದರಿಂದ ಪ್ರತಿಭಟನೆ ಶಮನವಾಗಬಹುದೆಂದು ಹೊಂದಿದ್ದ ನಿರೀಕ್ಷೆ ಹುಸಿಯಾಯಿತು.ಗೋಟಬಯ ರಾಜಪಕ್ಷೆ ಅಧ್ಯಕ್ಷರಾಗಿ ಮುಂದುವರಿದಂತೆ ಜನರ ಪ್ರತಿಭಟನೆಯೂ ಮುಂದುವರಿಯಿತು. ಶ್ರೀಲಂಕಾದ ಆರ್ಥಿಕತೆಯನ್ನು ದಿವಾಳಿ ಮಾಡಿದ ರಾಜಪಕ್ಷೆ ವಿರುದ್ಧ ಶ್ರೀಲಂಕಾದಲ್ಲಿ ಸಾರ್ವಜನಿಕ ದಂಗೆ ನಡೆದಿತ್ತು. ರಾಷ್ಟ್ರಪತಿ ನಿವಾಸಕ್ಕೆ ಪ್ರತಿಭಟನಾಕಾರರು ನುಗ್ಗಿದ ಬೆನ್ನಲ್ಲಿಯೇ ರಾಜಪಕ್ಷೆ ಇಡೀ ಕುಟುಂಬದೊಂದಿಗೆ ಪಲಾಯನ ಮಾಲೀಗೆ ಮಾಡಿದ್ದರು. ಪ್ರತಿಭಟನೆಗೆ ಮಣಿದು ಶ್ರೀಲಂಕಾ ಅಧ್ಯಕ್ಷ ಗೋಟಬಯ್ ರಾಜಪಕ್ಷೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.ನಂತರ ಶ್ರೀಲಂಕಾದ ನೂತನ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಆಯ್ಕೆಯಾಗಿದ್ದಾರೆ. ಇವರು ಶ್ರೀಲಂಕಾದ ಎಂಟನೇ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಪ್ರಧಾನಿ ರಾನಿಲ್ ವಿಕ್ರಮಸಿಂಘೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ನೂತನ ಪ್ರಧಾನಿಯಾಗಿ ದಿನೇಶ್ ಗುಣವರ್ಧನೆ ಅವರನ್ನು ನೇಮಿಸಲಾಗಿದೆ.

### ಶ್ರೀಲಂಕಾದ ಈ ಪರಿಸ್ಥಿತಿಗೆ ಕಾರಣಗಳು:

❖ ಕೊಲಂಬೊದಲ್ಲಿನ ಚರ್ಚ್‌ಗಳಲ್ಲಿ ಏಪ್ರಿಲ್ 2019 ರ ಈಸ್ಟರ್ ಬಾಂಬ್ ಸ್ಫೋಟಗಳು 253 ಸಾವುನೋವುಗಳಿಗೆ ಕಾರಣವಾಯಿತು, ಇದರ ಪರಿಣಾಮವಾಗಿ, ಪ್ರವಾಸಿಗರ ಸಂಖ್ಯೆಯು ತೀವ್ರವಾಗಿ ಕುಸಿಯಿತು, ಇದು ವಿದೇಶಿ ವಿನಿಮಯ ಸಂಗ್ರಹದಲ್ಲಿ ಕುಸಿತಕ್ಕೆ ಕಾರಣವಾಯಿತು.

ಶ್ರೀಲಂಕಾದ ಆರ್ಥಿಕತೆ ಪ್ರವಾಸೋದ್ಯಮದ ಮೇಲೆ ಅವಲಂಬಿತವಾಗಿದೆ.

❖ 2019 ರಲ್ಲಿ ಗೋಟಬಯ್ ರಾಜಪಕ್ಷೆ ನೇತೃತ್ವದ ಸರ್ಕಾರವು ತಮ್ಮ ಪ್ರಚಾರದ ಸಮಯದಲ್ಲಿ ರೈತರಿಗೆ ಕಡಿಮೆ ತೆರಿಗೆ ದರಗಳು ಭರವಸೆ ನೀಡಿತು.

❖ 2020 ರಲ್ಲಿ ಕೋವಿಡ್ –19 ಸಾಂಕ್ರಾಮಿಕವು ಕೆಟ್ಟ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು

❖ ಲಾಕ್ ಡೌನ್ ಕಾರಣದಿಂದ ಚಹಾ, ರಬ್ಬರ್, ಸಾಂಬಾರ ಪದಾರ್ಥಗಳು ಮತ್ತು ಉಡುಪುಗಳ ರಫ್ತು ನಷ್ಟವನ್ನು ಅನುಭವಿಸಿತು.

❖ ಲಾಕ್ ಡೌನ್ ಕಾರಣದಿಂದ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೊಡೆತ ನೀಡಿತು ಇದು ಆರ್ಥಿಕತೆಯು ಮೇಲೆ ತುಂಬಾ ಪ್ರಭಾವ ಬೀರಿತು.

❖ ಸರ್ಕಾರಿ ವೆಚ್ಚಗಳ ಏರಿಕೆಯಿಂದಾಗಿ, 2020–21ರಲ್ಲಿ ವಿತ್ತೀಯ ಕೊರತೆಯು 10% ಮೀರಿದೆ ಮತ್ತು GDP ಅನುಪಾತಕ್ಕೆ ಸಾಲವು 2019 ರಲ್ಲಿ 94% ರಿಂದ 2021 ರಲ್ಲಿ 119% ಕ್ಕೆ ಏರಿತು.

❖ ವಿದೇಶಿ ವಿನಿಮಯ (ಫಾರೆಕ್ಸ್) ಮೀಸಲು ಕೊರತೆಯಿಂದಾಗಿ ಶ್ರೀಲಂಕಾದಲ್ಲಿ ಬಿಕ್ಕಟ್ಟು ಉಂಟಾಗಿದೆ, ಇದು ಫೆಬ್ರವರಿ 2022 ರ ಅಂತ್ಯದ ವೇಳೆಗೆ ಕಳೆದ ಎರಡು ವರ್ಷಗಳಲ್ಲಿ 70% ರಷ್ಟು 2 ಶತಕೋಟಿ ಡಾಲರ್‌ಗೆ ಇಳಿದಿದೆ.

❖ ಏತನ್ಮಧ್ಯೆ, ದೇಶವು 2022 ಕ್ಕೆ ಸುಮಾರು USD 7 ಬಿಲಿಯನ್ ವಿದೇಶಿ ಸಾಲದ ಬಾಧ್ಯತೆಗಳನ್ನು ಹೊಂದಿದೆ.

❖ 2021 ರಲ್ಲಿ, ಎಲ್ಲಾ ರಸಗೊಬ್ಬರ ಆಮದುಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು ಮತ್ತು ಶ್ರೀಲಂಕಾ ರಾತ್ರೋರಾತ್ರಿ 100% ಸಾವಯವ ಕೃಷಿ ರಾಷ್ಟ್ರವಾಗಲಿದೆ ಎಂದು ಘೋಷಿಸಲಾಯಿತು. ಈ ರೀತಿಯ ಏಕಾಏಕಿ ನಿರ್ಧಾರದಿಂದ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ತೀವ್ರವಾಗಿ ಕುಸಿಯಿತು ಇದು ಆಹಾರ ಉತ್ಪಾದನೆಯ ಮೇಲೆ ಹೆಚ್ಚು ಪರಿಣಾಮ ಬೀರಿತು.

❖ ಮೂಲಸೌಕರ್ಯ ಯೋಜನೆಗಳಿಗಾಗಿ ಶ್ರೀಲಂಕಾ 2005 ರಿಂದ ಬೀಜಿಂಗ್‌ನಿಂದ ಹೆಚ್ಚು ಸಾಲವನ್ನು ಪಡೆದುಕೊಂಡಿದೆ, ಅವುಗಳನ್ನು ತೀರಿಸಲಾಗದ ಪರಿಸ್ಥಿತಿಗೆ ಬಂದು ನಿಂತಿದೆ. ಚೀನಾಕ್ಕೆ ಶ್ರೀಲಂಕಾದ ಒಟ್ಟು ಸಾಲವು 8 ಬಿಲಿಯನ್ ಡಾಲರ್ ಆಗಿದೆ, ಅದರ ಒಟ್ಟು ಬಾಹ್ಯ ಸಾಲದ ಆರನೇ ಒಂದು ಭಾಗವಾಗಿದೆ.

❖ ಶ್ರೀಲಂಕಾ ತನ್ನ ಹಂಬನತೋಟಾ ಬಂದರನ್ನು 2017 ರಲ್ಲಿ ಚೀನಾದ ಕಂಪನಿಗೆ ಗುತ್ತಿಗೆ ನೀಡಿತು, ಬೀಜಿಂಗ್‌ನಿಂದ ಇದನ್ನು ನಿರ್ಮಿಸಲು ಬಳಸಿದ 1.4 ಶತಕೋಟಿ ಡಾಲರ್ ಸಾಲವನ್ನು ಪೂರೈಸಲು ಸಾಧ್ಯವಾಗಲಿಲ್ಲ.

**ಭಾರತದಿಂದ ಲಂಕಾಗೆ ಸಹಾಯ**

➢ ಶ್ರೀಲಂಕಾದ ಆರ್ಥಿಕ ದುಸ್ಥಿತಿಗೆ ಚೀನಾ ಸಾಲ ಶೂಲವಾಗಿ ಪರಿಣಮಿಸಿರುವುದು ಒಂದು ಕಾರಣ. ಸಾಲದ ಕಂತು ಕಟ್ಟಲೂ ಲಂಕಾ ಬಳಿ ದುಡ್ಡಿಲ್ಲ. ದುರ್ಬಲವಾಗಿರುವ ಶ್ರೀಲಂಕಾವನ್ನು ಚೀನಾ ದುರ್ಬಳಕೆ ಮಾಡಿಕೊಳ್ಳುವ ಎಲ್ಲಾ ಅಪಾಯವೂ ಇದೆ. ಚೀನಾವೇನಾದರೂ ಶ್ರೀಲಂಕಾದಲ್ಲಿ ಮಿಲಿಟರಿ ನೆಲೆ ಸ್ಥಾಪಿಸಿದರೆ ಭಾರತದ ಮಗ್ಗುಲಲ್ಲಿ ಅಪಾಯದ ಕತ್ತಿ ಸಿಕ್ಕಿಸಿದಂತೆ ಆಗುತ್ತದೆ.

➢ ಈ ಹಿನ್ನೆಲೆಯಲ್ಲಿ ಆರ್ಥಿಕವಾಗಿ ದುಸ್ಥಿತಿಯಲ್ಲಿರುವ ಶ್ರೀಲಂಕಾಗೆ ಭಾರತ 3.8 ಬಿಲಿಯನ್ ಡಾಲರ್ (ಸುಮಾರು 30 ಸಾವಿರ ಕೋಟಿ ರೂಪಾಯಿ) ಸಾಲದ ನೆರವು ಒದಗಿಸಲು ಮುಂದಾಗಿದೆ. ಇದು ಈ ಒಂದು ವರ್ಷಕ್ಕೆ ಮಾತ್ರ. ಮುಂದಿನ ವರ್ಷ ಭಾರತದ ನೆರವು ಇನ್ನೂ ಹೆಚ್ಚಬಹುದು.

➢ "ಶ್ರೀಲಂಕಾಗೆ ನಮ್ಮ ಬೆಂಬಲ ಸದಾ ಇರುತ್ತದೆ. ಪರಿಸ್ಥಿತಿ ತೀರಾ ಬಿಗಡಾಯಿಸಿಹೋಗದಂತೆ ನಿಭಾಯಿಸಲು ಸಾಧ್ಯವಾಗಿದ." ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ತಿಳಿಸಿದ್ದಾರೆ.

**ಲಂಕಾ ಗತಿಯೇ ಭಾರತಕ್ಕೂ ಆಗುತ್ತಾ?**

➢ ಶ್ರೀಲಂಕಾದಂತೆ ಪಾಕಿಸ್ತಾನ ದೇಶದಲ್ಲೂ ಆರ್ಥಿಕ ದಿವಾಳಿತನದ ಸುಳಿವು ಕಾಣುತ್ತಿದೆ. ಭಾರತಕ್ಕೂ ಇದೇ ಗತಿ ಬರುತ್ತೆ ಎಂದು ಹಲವರು ಶಂಕಿಸಿದ್ದಾರೆ, ಅಥವಾ ಆತಂಕ ಪಡುತ್ತಿದ್ದಾರೆ. ವಾಸ್ತವವಾಗಿ ಅವಲೋಕಿಸಿದರೆ ಸದ್ಯದ ಮಟ್ಟಿಗಂತೂ ಭಾರತಕ್ಕೆ ಅಂಥ ಅಪಾಯ ಕಾಣುತ್ತಿಲ್ಲ.

❖ ಭಾರತದಲ್ಲಿ ವಿದೇಶಿ ಮೀಸಲು ನಿಧಿ 600 ಬಿಲಿಯನ್ ಡಾಲರ್ (ಸುಮಾರು 48 ಲಕ್ಷ ಕೋಟಿ ರೂಪಾಯಿ) ಇದೆ. ಇಡೀ ಒಂದು ವರ್ಷ ನಾವು ಆಮದು ಮಾಡಿಕೊಳ್ಳಲು ಸಾಕಾಗುವಷ್ಟು ಹಣ ಈ ಮೀಸಲು ನಿಧಿಯಲ್ಲಿ ಇದೆ. 2013ರಲ್ಲಿ ಇದ್ದ ಭಾರತದ ವಿದೇಶೀ ಸಾಲದ ಪ್ರಮಾಣಕ್ಕೆ ಹೋಲಿಸಿದರೆ 2021ರಲ್ಲಿ ಶೇ. 50ರಷ್ಟು ಹೆಚ್ಚಾಗಿರುವುದು. ಆದರೆ ಜಿಡಿಪಿಯಲ್ಲಿ ಆಗಿರುವ ಏರಿಕೆಯನ್ನು ಪರಿಗಣಿಸಿದರೆ ವಿದೇಶಿ ಸಾಲದ ಆತಂಕ ಪಡುವ ಮಟ್ಟದಲ್ಲಿ ಇಲ್ಲ.

**ಹಣದುಬ್ಬರ**

ಭಾರತದಲ್ಲಿ ಹಣದುಬ್ಬರ ಸುಮಾರು ಶೇ.7ಕ್ಕೆ ಬಂದು ನಿಂತಿದೆ.ಸದ್ಯದ ಸ್ಥಿತಿಯಲ್ಲಿ ಹಣದುಬ್ಬರ ತಾಳಿಕೆ ಸ್ಥಿತಿ ಶೇ.6 ಎಂದು ಆರ್‌ಬಿಐ ನಿಗದಿ ಮಾಡಿದ ಮಟ್ಟ ದಾಟಿ ಹೋಗಿದ್ದೇವೆ. ಆದರೂ ಕೂಡ ಬೇರೆ ದೇಶಗಳಿಗೆ ಹೋಲಿಸಿದರೆ ಹಣದುಬ್ಬರ ಭಾರತದಲ್ಲಿ ಪರವಾಗಿಲ್ಲ ಎನ್ನಬಹುದು.ಕೋವಿಡ್, ಲಾಕ್ ಡೌನ್ ಮತ್ತು ಈಗ ಯುದ್ಧ ಈ ಎಲ್ಲಾ ಕಾರಣಗಳಿಂದಾಗಿ ಹಣದುಬ್ಬರ ಎಲ್ಲಾ ದೇಶಗಳಲ್ಲೂ ತಾಂಡವವಾಡುತ್ತಿರುವುದು ನಿಜ.

## ಅಂತರರಾಷ್ಟ್ರೀಯ ಚಂದ್ರ ದಿನ– ಜುಲೈ 20



ಜುಲೈ 20 ರಂದು ರಾಷ್ಟ್ರೀಯ ಚಂದ್ರನ ದಿನವು 1969 ರಲ್ಲಿ ಚಂದ್ರನ ಮೇಲೆ ಮೊದಲ ಬಾರಿಗೆ ನಡೆದ ದಿನವನ್ನು ನೆನಪಿಸುತ್ತದೆ.ಜುಲೈ 20, 1969 ರಂದು, ಅಪೊಲೊ 11 ಮೊದಲ ಮಾನವರನ್ನು ಚಂದ್ರನತ್ತ ಸಾಗಿಸಿತು. ಚಂದ್ರನ ಮೇಲೆ ಇಳಿದ ಆರು ಗಂಟೆಗಳ ನಂತರ, ಅಮೇರಿಕನ್ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆಗೆ ಕಾಲಿಟ್ಟರು. ಅವರು ಬಾಹ್ಯಾಕಾಶ ನೌಕೆಯ ಹೊರಗೆ ಎರಡೂವರೆ ಗಂಟೆಗಳ ಕಾಲ ಕಳೆದರು. ನಂತರ ಬಜ್ ಆಲ್ಡ್ರಿನ್ ಚಂದ್ರನ ಮೇಲ್ಮಗೆ ಹೆಜ್ಜೆ ಹಾಕಿದರು.

**ಹಿನ್ನೆಲೆ:**

➢ ಜುಲೈ 16, 1969 ರಂದು ಬೆಳಿಗ್ಗೆ 9:32 ಕ್ಕೆ, ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ನೀಲ್ ಆರ್ಮ್‌ಸ್ಟ್ರಾಂಗ್ ಸೇರಿದಂತೆ ಮೂರು ಗಗನಯಾತ್ರಿಗಳೊಂದಿಗೆ ಅಪೊಲೊ 11 ಬಾಹ್ಯಾಕಾಶ ನೌಕೆಯ ಸಹಾಯದಿಂದ ಕಕ್ಷೆಯನ್ನು ತಲುಪಿದರು. ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಕುಳಿಗಳ ಮೇಲ್ಮಗೆ ಕಾಲಿಟ್ಟಾಗ, "ಅದು ಮನುಷ್ಯನಿಗೆ ಒಂದು ಸಣ್ಣ ಹೆಜ್ಜೆ, ಮನುಕುಲಕ್ಕೆ ಒಂದು ದೈತ್ಯ ಜಿಗಿತ" ಎಂಬ ಪದಗಳೊಂದಿಗೆ ಭೂಮಿಯ ಮೇಲಿನ ಪ್ರತಿಯೊಂದು ರಾಷ್ಟ್ರವೂ ಸಾಮೂಹಿಕ ನೆಮ್ಮದಿಯ ನಿಟ್ಟುಸಿರು ಬಿಟ್ಟಂತೆ ತೋರುತ್ತಿತ್ತು.

## ಶಿಂಜೋ ಅಬೆ ಗೆ–'ಕಾಲರ್ ಆಫ್ ದಿ ಸುಪ್ರೀಮ್ ಆರ್ಡರ್ ಆಫ್ ದಿ ಕ್ರೈಸಾಂಥೆಮಮ್'

ಮಾಜಿ ಪ್ರಧಾನಿ ಶಿಂಜೊ ಅಬೆ ಅವರಿಗೆ ಮರಣೋತ್ತರವಾಗಿ ದೇಶದ ಅತ್ಯುನ್ನತ ಅಲಂಕಾರ "ಕಾಲರ್ ಆಫ್ ದಿ ಸುಪ್ರೀಮ್ ಆರ್ಡರ್ ಆಫ್ ದಿ ಕ್ರೈಸಾಂಥೆಮಮ್" ನೀಡಿ ಗೌರವಿಸುವ ನಿರ್ಧಾರವನ್ನು ಜಪಾನ್ ಸರ್ಕಾರ ಘೋಷಿಸಿತು. ಯುದ್ಧಾನಂತರದ ಸಂವಿಧಾನದ ಅಡಿಯಲ್ಲಿ ಶಿಂಜೊ ಅಬೆ ಈ ಗೌರವವನ್ನು ಪಡೆದ ನಾಲ್ಕನೇ ಮಾಜಿ ಪ್ರಧಾನಿಯಾಗಲಿದ್ದಾರೆ. ಅವರಿಗಿಂತ ಮೊದಲು, ಮಾಜಿ ಪ್ರಧಾನಿಗಳಾದ ಶಿಗರು ಯೋಶಿಡಾ, ಐಸಾಕು ಸಾಟೊ ಮತ್ತು ಯಸುಹಿರೊ ನಕಸೋನೆ ಅವರಿಗೆ ಅದೇ ಗೌರವವನ್ನು ನೀಡಲಾಯಿತು.

**ಗ್ರಾಂಡ್ ಕಾರ್ಡನ್ ಆಫ್ ದಿ ಆರ್ಡರ್ ಗೌರವದ ಬಗ್ಗೆ**

- ಜಪಾನ್‌ನ ಚಕ್ರವರ್ತಿ ಮೀಜಿ 1876 ರಲ್ಲಿ ಈ 'ಗ್ರಾಂಡ್ ಕಾರ್ಡನ್ ಆಫ್ ದಿ ಆರ್ಡರ್' ಅನ್ನು ಪರಿಚಯಿಸಿದರು. ನಂತರ 1888 ರಲ್ಲಿ, ಕಾಲರ್ ಆಫ್ ದಿ ಆರ್ಡರ್ ಅನ್ನು ಇದಕ್ಕೆ ಸೇರಿಸಲಾಯಿತು.
- ಇದನ್ನು ವ್ಯಕ್ತಿ ಬದುಕಿದ್ದಾಗ ಅಥವಾ ಮರಣೋತ್ತರವಾಗಿ ನೀಡುವ ಹಕ್ಕನ್ನು ಜಪಾನ್ ಸರ್ಕಾರ ಹೊಂದಿದೆ.
- ಕ್ರೈಸಾಂಥೆಮಮ್‌ನ ಸುಪ್ರೀಂ ಆರ್ಡರ್‌ನ ಕಾಲರ್ ಅನ್ನು ಶುದ್ಧ ಚಿನ್ನದಿಂದ ತಯಾರಿಸಲಾಗುತ್ತದೆ ಮತ್ತು ಇದನ್ನು ಜಪಾನಿನ ಚಕ್ರವರ್ತಿ ಧರಿಸುತ್ತಾರೆ
- ಸಾಮ್ರಾಜ್ಯಶಾಹಿ ಕುಟುಂಬವನ್ನು ಹೊರತುಪಡಿಸಿ, ಕೇವಲ ಏಳು ಜಪಾನೀ ನಾಗರಿಕರು ತಮ್ಮ ಜೀವಿತಾವಧಿಯಲ್ಲಿ ಕಾಲರ್‌ನಿಂದ ಗೌರವಿಸಲ್ಪಟ್ಟಿದ್ದಾರೆ. ಅಂತಹ ಕೊನೆಯ ಪ್ರಶಸ್ತಿಯು 1928 ರಲ್ಲಿ ಮಾಜಿ ಪ್ರಧಾನಿ ಸೈಯೋಂಜಿ ಕಿನ್ಮೋಚಿಗೆ ಆಗಿತ್ತು. ಇತರ ಎಂಟು ಜನರಿಗೆ ಮರಣೋತ್ತರವಾಗಿ ಕಾಲರ್‌ನಿಂದ ಗೌರವಿಸಲಾಗಿದೆ; ಅಂತಹ ಕೊನೆಯ ಪ್ರಶಸ್ತಿಯು 2022 ರಲ್ಲಿ ಮಾಜಿ ಪ್ರಧಾನಿ ಶಿಂಜೋ ಅಬೆ ಅವರಿಗೆ ನೀಡಲಾಗಿದೆ.

## ಮಿಸೆಸ್ ಯೂನಿವರ್ಸ್ ಡಿವೈನ್ ಕ್ರೌನ್ ಮೂಡಿಗೆರಿಸಿಕೊಂಡ– ಪಲ್ಲವಿ ಸಿಂಗ್

ದಕ್ಷಿಣ ಕೊರಿಯಾದ ಯೂಸು ನಗರದಲ್ಲಿ ನಡೆದ ಫೈನಲ್‌ನಲ್ಲಿ ಭಾರತದ ಪಲ್ಲವಿ ಸಿಂಗ್ ಮಿಸೆಸ್ ಯೂನಿವರ್ಸ್ ಡಿವೈನ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಅವರು ಭಾರತದ ಕಾನ್ಪುರದಿಂದ ಬಂದವರು ಮತ್ತು 110 ದೇಶಗಳಿಂದ ಭಾಗವಹಿಸಿದ ಈ ಸ್ಪರ್ಧೆಯಲ್ಲಿ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಇದು ಭಾರತಕ್ಕೆ ಹೆಮ್ಮೆಯ ಕ್ಷಣ.ಪಲ್ಲವಿ ಸಿಂಗ್ ಅವರು ಮಿಸೆಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಏಷ್ಯಾದ ಸ್ಪರ್ಧಿಯಾಗಿದ್ದರು ಮತ್ತು ಎಲ್ಲಾ ಹಂತಗಳಲ್ಲಿ ಉತ್ತಮ ಸಾಧನೆ ಮಾಡಲು ಭಾರತೀಯ ಮಹಿಳೆಯರ ಬಲವಾದ ಇಚ್ಛೆ ಮತ್ತು ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

ಪಲ್ಲವಿ ಸಿಂಗ್ 2020 ರಲ್ಲಿ ಜೈಪುರದಲ್ಲಿ ನಡೆದ ಮಿಸೆಸ್ ಇಂಡಿಯಾ ಪ್ರಶಸ್ತಿಯನ್ನು ಗೆದ್ದರು. ನಂತರ ಅವರು ಅಕ್ಟೋಬರ್ 2021 ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯಾ–ಮಟ್ಟದ ಸ್ಪರ್ಧೆಯಲ್ಲಿ ಮಿಸೆಸ್ ಇಂಡೋ–ಏಷ್ಯಾ ಯೂನಿವರ್ಸ್ ಪ್ರಶಸ್ತಿಯನ್ನು ಗೆದ್ದರು.ಅವರು ಮಿಸೆಸ್ ಯೂನಿವರ್ಸ್‌ನಲ್ಲಿ ಭಾರತ ಮತ್ತು ಏಷ್ಯಾದ ಸ್ಪರ್ಧಿಯಾಗಿದ್ದರು. ಸ್ಪರ್ಧೆಯಲ್ಲಿ ಅವಳು ಕಿರೀಟವನ್ನು ಮುಡಿಗೆರಿಸಿಕೊಂಡರು.

# ಗೀತಾ ಗೋಪಿನಾಥ್ IMF 'ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞರ ಗೋಡೆ'ಯಲ್ಲಿ ಕಾಣಿಸಿಕೊಂಡ ಮೊದಲ ಮಹಿಳೆ



ಭಾರತ ಮೂಲದ ಗೀತಾ ಗೋಪಿನಾಥ್ ಅವರು ಅಂತರರಾಷ್ಟ್ರೀಯ ಹಣಕಾಸು ನಿಧಿಯ (IMF) ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞರ ಗೋಡೆಯ ಮೇಲೆ ಕಾಣಿಸಿಕೊಂಡ ಮೊದಲ ಮಹಿಳೆ ಮತ್ತು ಎರಡನೇ ಭಾರತೀಯರಾಗಿದ್ದಾರೆ. 2003 ಮತ್ತು 2006 ರ ನಡುವೆ IMF ನ ಮುಖ್ಯ ಅರ್ಥಶಾಸ್ತ್ರಜ್ಞ ಮತ್ತು ಸಂಶೋಧನಾ ನಿರ್ದೇಶಕರಾಗಿದ್ದ ರಘುರಾಮ್ ರಾಜನ್ ಈ ಗೌರವವನ್ನು ಸಾಧಿಸಿದ ಮೊದಲ ಭಾರತೀಯರಾಗಿದ್ದಾರೆ.

**ಗೀತಾ ಗೋಪಿನಾಥ್ ಅವರ ಬಗ್ಗೆ**

➢ ಗೋಪಿನಾಥ್ ಅವರನ್ನು ಅಕ್ಟೋಬರ್ 2018 ರಲ್ಲಿ IMF ಮುಖ್ಯ ಅರ್ಥಶಾಸ್ತ್ರಜ್ಞರಾಗಿ ನೇಮಿಸಲಾಯಿತು ಮತ್ತು ನಂತರ ಕಳೆದ ವರ್ಷ ಡಿಸೆಂಬರ್‌ನಲ್ಲಿ **IMF** ನ ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕರಾಗಿ ಬಡ್ತಿ ನೀಡಲಾಯಿತು.

➢ ಗೋಪಿನಾಥ್ ವಾಷಿಂಗ್ಟನ್ ಮೂಲದ ಜಾಗತಿಕ ಸಾಲದಾತರ ಮೊದಲ ಮಹಿಳಾ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

➢ ಗೋಪಿನಾಥ್ ಅವರ ಸಂಶೋಧನೆಯು ಹಲವು ಉನ್ನತ ಅರ್ಥಶಾಸ್ತ್ರ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿದೆ. IMF ಮುಖ್ಯಸ್ಥರಾಗಿ ನೇಮಕಗೊಳ್ಳುವ ಮೊದಲು ಅರ್ಥಶಾಸ್ತ್ರಜ್ಞೆ, ಅವರು ಹಾರ್ವರ್ಡ್‌ರ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಇಂಟರ್ನ್ಯಾಷನಲ್ ಸ್ಟಡೀಸ್ ಮತ್ತು ಅರ್ಥಶಾಸ್ತ್ರದ ಜಾನ್ ಜ್ವಾನ್ಸಾ ಪ್ರೊಫೆಸರ್ ಆಗಿದ್ದರು.

➢ 2005 ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಸೇರುವ ಮೊದಲು, ಅವರು ಚಿಕಾಗೋ ವಿಶ್ವವಿದ್ಯಾಲಯದ ಬೂತ್ ಸ್ಕೂಲ್ ಆಫ್ ಬ್ಯುಸಿನೆಸ್‌ನಲ್ಲಿ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿದ್ದರು.

## IMF ಬಗ್ಗೆ:

ಇಂಟರ್ನ್ಯಾಷನಲ್ ಮಾನಿಟರಿ ಫಂಡ್ **(IMF)** ಒಂದು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಾಗಿದ್ದು, 190 ದೇಶಗಳನ್ನು ಸದಸ್ಯರನ್ನಾಗಿ ಒಳಗೊಂಡಿದೆ.

➢ ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕಿ: ಗೀತಾ ಗೋಪಿನಾಥ್

➢ ವ್ಯವಸ್ಥಾಪಕ ನಿರ್ದೇಶಕಿ: ಕ್ರಿಸ್ಟಲಿನಾ ಜಾರ್ಜಿವಾ

➢ ಪ್ರಧಾನ ಕಛೇರಿ: ವಾಷಿಂಗ್ಟನ್, D.C. U.S

➢ ಮುಖ್ಯ ಅರ್ಥಶಾಸ್ತ್ರಜ್ಞ: ಪಿಯರೆ–ಒಲಿವಿಯರ್ ಗೌರಿಂಚಸ್

➢ ವರದಿ/ಸೂಚ್ಯಂಕಗಳು: World Economic Outlook ಮತ್ತು Global Financial Stability Report ಅನ್ನು ಬಿಡುಗಡೆ ಮಾಡುತ್ತದೆ.

# ಅಂತರಾಷ್ಟ್ರೀಯ ಹುಲಿ ದಿನ– ಜುಲೈ 29




ಹುಲಿ ಸಂರಕ್ಷಣೆ ಮತ್ತು ಸಾರ್ವಜನಿಕರಲ್ಲಿ ಹುಲಿಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ 2010 ರ ಜುಲೈ 29ರಂದು ಮೊದಲ ಬಾರಿಗೆ ಅಂತಾರಾಷ್ಟ್ರೀಯ ಹುಲಿ ದಿನವನ್ನು ರಷ್ಯಾದ ಸೆಂಟ್ ಪೀಟರ್ ಬರ್ಗ್‌ನಲ್ಲಿ ಆಚರಿಸಲಾಯಿತು. ಇಂದಿನ ದಿನಗಳಲ್ಲಿ ಹುಲಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಮತ್ತು ಹುಲಿ ಸಂರಕ್ಷಣೆಯನ್ನು ಉತ್ತೇಜಿಸುವುದು ಈ ಆಚರಣೆಯ ಪ್ರಮುಖ ಉದ್ದೇಶವಾಗಿದೆ.

**ನಾಲ್ಕು ವರ್ಷಕ್ಕೊಮ್ಮೆ ಹುಲಿ ಗಣತಿ!**

- 2018ರ ಹುಲಿ ಗಣತಿ ಪ್ರಕಾರ ದೇಶದಲ್ಲಿ 2967 ಹುಲಿಗಳು ಇರುವುದಾಗಿ ತಿಳಿದು ಬಂದಿದೆ. ಆ ಮೂಲಕ ಜಗತ್ತಿನಲ್ಲಿ ಹುಲಿ ಸಂತತಿಗೆ ಅತ್ಯಂತ ಸುರಕ್ಷಿತ ಸ್ಥಳವಾಗಿ ಭಾರತ ಗುರುತಿಸಿಕೊಂಡಿದೆ. ಈ ಬಾರಿ ಗಣತಿಗೆ 1400 ಕ್ಯಾಮೆರಾ ಟ್ರಾಪ್‌ಗಳನ್ನು ಬಳಸಲಾಗಿತ್ತು. ಪ್ರಪಂಚದ 13 ದೇಶಗಳ ಕಾಡುಗಳಲ್ಲಿ ಮಾತ್ರ ಹುಲಿಗಳು ಕಂಡು ಬರುತ್ತವೆ.
- ವಿಶ್ವದಲ್ಲೇ ಅತಿ ಹೆಚ್ಚು ಹುಲಿಗಳು ಏಷ್ಯಾ ಖಂಡದಲ್ಲೇ ಇರುವುದು ಗಮನಾರ್ಹ. 2006ರಿಂದ ನಾಲ್ಕು ವರ್ಷಕ್ಕೊಮ್ಮೆ ವೈಜ್ಞಾನಿಕ ರೀತಿಯಲ್ಲಿ ದೇಶದಲ್ಲಿ ಹುಲಿ ಗಣತಿ ನಡೆಸಲಾಗುತ್ತದೆ. 2006, 2010, 2014 ಹಾಗೂ 2018ರಲ್ಲಿ ಗಣತಿ ಆಗಿದೆ. ನಾಲ್ಕು ವರ್ಷಗಳಿಗೆ ಹೋಲಿಸಿದರೆ ಹುಲಿಗಳ ಸಂಖ್ಯೆಯಲ್ಲಿ ಶೇ. 33ರಷ್ಟು ಹೆಚ್ಚಳವಾಗಿದೆ. 741 ಹುಲಿಗಳು ಹೆಚ್ಚಿವೆ.

2018ರ ಗಣತಿ ಪ್ರಕಾರ ಮಧ್ಯಪ್ರದೇಶದಲ್ಲಿ 526 ಹುಲಿಗಳಿದ್ದು, ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ 524 ಹುಲಿಗಳಿದ್ದು, ಎರಡನೇ ಸ್ಥಾನದಲ್ಲಿದೆ. ಉತ್ತರಾಖಂಡದಲ್ಲಿ 442 ಹುಲಿಗಳಿದ್ದು ಮೂರನೇ ಸ್ಥಾನದಲ್ಲಿದೆ. 2014ರಲ್ಲಿ ರಾಜ್ಯದಲ್ಲಿ 406 ಹುಲಿಗಳಿದ್ದವು.

**ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ:**

ದೇಶದಲ್ಲಿ ಹುಲಿಗಳ ಸಂರಕ್ಷಣೆಗಾಗಿ 1973ರಲ್ಲಿ ಪ್ರಾಜೆಕ್ಟ್ ಟೈಗರ್ ಅಸ್ತಿತ್ವಕ್ಕೆ ಬಂತು. ನಂತರ ಇದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವಾಗಿ ಬದಲಾಗಿ ಹುಲಿಗಳ ಉಳಿವಿಗಾಗಿ ಕೆಲಸ ಮಾಡುತ್ತಿದೆ. ಸ್ಪೆಷಲ್ ಟೈಗರ್ ಪ್ರೊಟೆಕ್ಷನ್ ಫೋರ್ಸ್ ದೇಶದಲ್ಲೇ ಮೊದಲ ಬಾರಿಗೆ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಜಾರಿಗೆ ತರಲಾಗಿದೆ. ಕರ್ನಾಟಕದ ಹುಲಿ ಸಂರಕ್ಷಿತ 5 ಪ್ರದೇಶಗಳಿವೆ ಬಂಡೀಪುರ, ನಾಗರಹೊಳೆ, ಬಿಆರ್‌ಟಿ, ಭದ್ರಾ ಹಾಗೂ ಕಾಳಿ .

# ವಿಶ್ವ ಮೆದುಳಿನ ದಿನ– ಜುಲೈ 22




ವಿಶ್ವ ನರವಿಜ್ಞಾನ ಸಂಸ್ಥೆಯ (WFN) ಪ್ರತಿ ಜುಲೈ 22 ರಂದು ವಿಶ್ವ ಮೆದುಳಿನ ದಿನವನ್ನು ಆಚರಿಸುತ್ತದೆ, ಪ್ರತಿ ವರ್ಷವೂ ವಿಭಿನ್ನ ವಿಷಯವನ್ನು ಕೇಂದ್ರೀಕರಿಸುತ್ತದೆ, WHO ಪ್ರಕಾರ, ಉತ್ತಮ ಮೆದುಳಿನ ಆರೋಗ್ಯವು ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಸಾಮರ್ಥ್ಯಗಳನ್ನು ಅರಿತುಕೊಳ್ಳುವ ಮತ್ತು ಜೀವನದ ಸಂದರ್ಭಗಳನ್ನು ನಿಭಾಯಿಸಲು ಅವರ ಅರಿವಿನ, ಭಾವನಾತ್ಮಕ, ಮಾನಸಿಕ ಮತ್ತು ನಡವಳಿಕೆಯ ಕಾರ್ಯವನ್ನು ಉತ್ತಮಗೊಳಿಸುವ ಸ್ಥಿತಿಯಾಗಿದೆ.

2022 ರ ವಿಶ್ವ ಮೆದುಳಿನ ದಿನದ ಥೀಮ್ ”ಎಲ್ಲರಿಗೂ ಮಿದುಳಿನ ಆರೋಗ್ಯ” “Brain Health for all"

WBD 2022 ಅಭಿಯಾನವು ಜಾಗತಿಕವಾಗಿ ಐದು ಪ್ರಮುಖ ಸಂದೇಶಗಳ ಮೇಲೆ ಕೇಂದ್ರೀಕರಿಸುತ್ತದೆ:

- ಜಾಗೃತಿ: ಮಾನಸಿಕ, ಸಾಮಾಜಿಕ ಮತ್ತು ದೈಹಿಕ ಯೋಗಕ್ಷೇಮಕ್ಕೆ ಮೆದುಳಿನ ಆರೋಗ್ಯಅತ್ಯಗತ್ಯ
- ತಡೆಗಟ್ಟುವಿಕೆ: ಅನೇಕ ಮೆದುಳಿನ ಕಾಯಿಲೆಗಳನ್ನು ತಡೆಗಟ್ಟಬಹುದು
- ವಕಾಲತ್ತು: ಅತ್ಯುತ್ತಮ ಮೆದುಳಿನ ಆರೋಗ್ಯಕ್ಕಾಗಿ ಜಾಗತಿಕ ಪ್ರಯತ್ನಗಳು ಅಗತ್ಯವಿದೆ
- ಶಿಕ್ಷಣ: ಎಲ್ಲರಿಗೂ ಶಿಕ್ಷಣವು ಮೆದುಳಿನ ಆರೋಗ್ಯಕ್ಕೆ ಪ್ರಮುಖವಾಗಿದೆ
- ಪ್ರವೇಶ: ಸಂಪನ್ಮೂಲಗಳು, ಚಿಕಿತ್ಸೆ ಮತ್ತು ಪುನರ್ವಸತಿಗೆ ಸಮಾನ ಪ್ರವೇಶವು ಮೆದುಳಿನ ಆರೋಗ್ಯಕ್ಕೆ ಅತ್ಯಗತ್ಯ

**ವಿಶ್ವ ಮೆದುಳಿನ ದಿನ, 2014 ರಲ್ಲಿ ಸ್ಥಾಪನೆಯಾಗಿದ್ದು, ಮೆದುಳಿನ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸಮರ್ಪಿಸಲಾಗಿದೆ.**

**ಮೆದುಳಿನ ಬಗ್ಗೆ ಕೆಲವು ಮಾಹಿತಿ:**

- ಮೆದುಳು ಮೂರು ಭಾಗಗಳನ್ನು ಹೊಂದಿದೆ.
  1) ಮುಮ್ಮೆದಳು 2)ಮಧ್ಯದ ಮೆದುಳು 3) ಹಿಮ್ಮೆದುಳು
- ಮಹಾಮಸ್ತಿಷ್ಕ (ಸೆರಬ್ರಂ) : ಇದು ಮೆದುಳಿನ ಅತ್ಯಂತ ದೊಡ್ಡ ಭಾಗವಾಗಿದೆ.

**ಮಾನವನ ಮೆದುಳಿನ ತೂಕ**

1. ಆಗತಾನೆ ಜನಿಸಿದ ಮಗು– 350 ಗ್ರಾಂ. ಗಳು 2. ಒಂದು ವರ್ಷದ ಮಗು =1000 ಗ್ರಾಂ. ಗಳು
3. ಪ್ರಾಯದ ಗಂಡಸು –1400 ಗ್ರಾಂ. ಗಳು 4. ಪ್ರಾಯದ ಮಹಿಳೆ – 1260 ಗ್ರಾಂ, ಗಳು

## World Federation of Neurology ಸಂಸ್ಥೆಯ ಬಗ್ಗೆ:

**ಕೇಂದ್ರ ಕಛೇರಿ ಸ್ಥಳ:** ಲಂಡನ್, ಯುನೈಟೆಡ್ ಕಿಂಗ್‌ಡಮ್; **ವಿಶ್ವ ನರವಿಜ್ಞಾನ ಸಂಸ್ಥೆ ಸ್ಥಾಪನೆ:** 22 ಜುಲೈ 1957; **ವಿಶ್ವ ನರವಿಜ್ಞಾನ ಸಂಸ್ಥೆಯ ಅಧ್ಯಕ್ಷ:** ಪ್ರೊ. ವೋಲ್ಫ್ಗ್ಯಾಂಗ್ ಗ್ರಿಸೊಲ್.

# 26-ಜುಲೈ: ಕಾರ್ಗಿಲ್ ವಿಜಯ್ ದಿವಸ್




ಭಾರತೀಯರು ಎಂದು ಮರೆಯದ ಅವಿಸ್ಮರಣೀಯ ದಿನಗಳಲ್ಲಿ ಜುಲೈ 26 ಕೂಡಾ ಹೌದು. ಕಾರ್ಗಿಲ್ ಯುದ್ಧ ಭಾರತೀಯ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಜಮ್ಮು ಕಾಶ್ಮೀರದ ಕಾರ್ಗಿಲ್‌ನಲ್ಲಿ ನಡೆದ ಈ ಯುದ್ಧದಲ್ಲಿ ಪಾಕಿಸ್ತಾನವನ್ನು ನಮ್ಮ ಭಾರತದ ವೀರ ಯೋಧರು ಸದೆ ಬಡೆದು ಅವರು ಆಕ್ರಮಿಸಿಕೊಂಡಿದ್ದ ಜಾಗವನ್ನು ವಶಕ್ಕೆ ಪಡೆದ ದಿನವಾಗಿದೆ.

1999ನೇ ಇಸವಿಯ ಜುಲೈ 26ರಂದು ಭಾರತೀಯ ಸೈನಿಕರು ಅಪರೇಶನ್ ವಿಜಯ್ ಮೂಲಕ ಕಾರ್ಗಿಲ್-ಡ್ರಾಸ್ ವಲಯದಲ್ಲಿ ಪ್ರದರ್ಶಿಸಿದ ಶೌರ್ಯದ ನೆನಪಿಗಾಗಿ ಈ ದಿನವನ್ನು ಈ ದಿನವನ್ನು ಕಾರ್ಗಿಲ್ ವಿಜಯ ದಿವಸ್ ಎಂದು ಆಚರಿಸಲಾಗುತ್ತದೆ. ಕಾರ್ಗಿಲ್ ಯುದ್ಧದಲ್ಲಿ ಭಾರತ ವಿಜಯ ಪತಾಕೆಯನ್ನು ಹಾರಿಸಿ 23 ವರ್ಷ ತುಂಬುತ್ತದೆ. ಯುದ್ಧದಲ್ಲಿ ಹುತಾತ್ಮರಾದ ಸೈನಿಕರನ್ನು ಸ್ಮರಿಸಲು ದೇಶವು ಪ್ರತಿ ವರ್ಷ ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಗುತ್ತದೆ.

1999 ಮೇ ತಿಂಗಳಿನಲ್ಲಿ ಆರಂಭವಾದ ಕಾರ್ಗಿಲ್ ಯುದ್ಧ ಜುಲೈ ಅಂತ್ಯದ ತನಕ ಅಂದರೆ ಸುಮಾರು ಎರಡು ತಿಂಗಳ ಕಾಲ ನಡೆಯಿತು. ಈ ಯುದ್ಧದಲ್ಲಿ ಭಾರತೀಯ ಸೇನೆಯ ಅಧಿಕಾರಿಗಳು ಸೇರಿದಂತೆ ಸುಮಾರು 527 ಭಾರತೀಯ ಯೋಧರು ಹುತಾತ್ಮರಾದರು.

**ಪಾಕ್ ಕುತಂತ್ರದಿಂದ ಯುದ್ಧ ಆರಂಭ**

1. ಚಳಿಗಾಲ ಮುಗಿದ ಬಳಿಕ ಇಲ್ಲಿಗೆ ಮತ್ತೆ ಗಡಿ ಕಾಯುವುದಕ್ಕೆ ಹೋಗುವುದು ಹಿಂದಿನಿಂದ ನಡೆದುಕೊಂಡು ಬಂದಪದ್ಧತಿಯಾಗಿತ್ತು. 1999 ರಲ್ಲಿ ಈ ಸಂದರ್ಭವನ್ನೇ ಬಳಸಿಕೊಂಡ ಪಾಕಿಸ್ತಾನ, ಕಾಶ್ಮೀರದ ಹೋರಾಟಗಾರರ ಹೆಸರಿನಲ್ಲಿ ಪಾಕ್ ಸೈನಿಕರು, ಭಾರತದ ಪ್ರಮುಖ ಭಾಗಗಳನ್ನು ತನ್ನ ವಶಕ್ಕೆ ಪಡೆದುಕೊಂಡಿತು. ಇದನ್ನು ಭಾರತೀಯ ಸೇನೆಗೆ ಕುರಿಗಾಹಿಗಳು ಮಾಹಿತಿ ನೀಡಿದರು. ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಚರಣೆ: ಪಾಕಿಸ್ತಾನದ ಕುತಂತ್ರಕ್ಕೆ ಉತ್ತರ ನೀಡಲು ಭಾರತ ಸರ್ಕಾರ ಇಪ್ಪತ್ತು ಸಾವಿರ ಭಾರತೀಯ ಸೈನಿಕರನ್ನ ಸಜ್ಜುಗೊಳಿಸಿ ಮೇ 3ರಿಂದ ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಚರಣೆ ಆರಂಭ ಮಾಡಿತು.

**ಆಪರೇಷನ್ ಸಫೇದ್ ಸಾಗರ್**

➢ ಕಾರ್ಗಿಲ್ ಯುದ್ಧದ ವೇಳೆ ಕಾಶ್ಮೀರದ ಪಾಕ್ ಆಕ್ರಮಿತ ಪ್ರದೇಶಗಳ ಮೇಲೆ ಭಾರತೀಯ ವಾಯು ಸೇನೆಯು ಆಪರೇಷನ್ ಸಫೇದ್ ಸಾಗರ್ ಹೆಸರಲ್ಲಿ ಮೇ 26ರಂದು ದಾಳಿ ಆರಂಭಿಸಿತು. MIG 21, 27 ಎರಡು ಯುದ್ಧ ವಿಮಾನಗಳನ್ನು ಭಾರತ ಕಳೆದುಕೊಂಡಿತು.

ಭಾರತೀಯರು ಎಂದು ಮರೆಯದ ಅವಿಸ್ಮರಣೀಯ ದಿನಗಳಲ್ಲಿ ಜುಲೈ 26 ಕೂಡಾ ಹೌದು. ಕಾರ್ಗಿಲ್ ಯುದ್ಧ ಭಾರತೀಯ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಜಮ್ಮು ಕಾಶ್ಮೀರದ ಕಾರ್ಗಿಲ್‌ನಲ್ಲಿ ನಡೆದ ಈ ಯುದ್ಧದಲ್ಲಿ ಪಾಕಿಸ್ತಾನವನ್ನು ನಮ್ಮ ಭಾರತದ ವೀರ ಯೋಧರು ಸದೆ ಬಡೆದು ಅವರು ಆಕ್ರಮಿಸಿಕೊಂಡಿದ್ದ ಜಾಗವನ್ನು ವಶಕ್ಕೆ ಪಡೆದ ದಿನವಾಗಿದೆ. 1999ನೇ ಇಸವಿಯ ಜುಲೈ 26ರಂದು ಭಾರತೀಯ ಸೈನಿಕರು ಅಪರೇಶನ್ ವಿಜಯ್ ಮೂಲಕ ಕಾರ್ಗಿಲ್–ಡ್ರಾಸ್ ವಲಯದಲ್ಲಿ ಪ್ರದರ್ಶಿಸಿದ ಶೌರ್ಯದ ನೆನಪಿಗಾಗಿ ಈ ದಿನವನ್ನು ಈ ದಿನವನ್ನು ಕಾರ್ಗಿಲ್ ವಿಜಯ ದಿವಸ್ ಎಂದು ಆಚರಿಸಲಾಗುತ್ತದೆ. ಕಾರ್ಗಿಲ್ ಯುದ್ಧದಲ್ಲಿ ಭಾರತ ವಿಜಯ ಪತಾಕೆಯನ್ನು ಹಾರಿಸಿ 23 ವರ್ಷ ತುಂಬುತ್ತದೆ. ಯುದ್ಧದಲ್ಲಿ ಹುತಾತ್ಮರಾದ ಸೈನಿಕರನ್ನು ಸ್ಮರಿಸಲು ದೇಶವು ಪ್ರತಿ ವರ್ಷ ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಗುತ್ತದೆ.

1999 ಮೇ ತಿಂಗಳಿನಲ್ಲಿ ಆರಂಭವಾದ ಕಾರ್ಗಿಲ್ ಯುದ್ದ ಜುಲೈ ಅಂತ್ಯದ ತನಕ ಅಂದರೆ ಸುಮಾರು ಎರಡು ತಿಂಗಳ ಕಾಲ ನಡೆಯಿತು. ಈ ಯುದ್ಧದಲ್ಲಿ ಭಾರತೀಯ ಸೇನೆಯ ಅಧಿಕಾರಿಗಳು ಸೇರಿದಂತೆ ಸುಮಾರು 527 ಭಾರತೀಯ ಯೋಧರು ಹುತಾತ್ಮರಾದರು.

## ಪಾಕ್ ಕುತಂತ್ರದಿಂದ ಯುದ್ಧ ಆರಂಭ

1. ಚಳಿಗಾಲ ಮುಗಿದ ಬಳಿಕ ಇಲ್ಲಿಗೆ ಮತ್ತೆ ಗಡಿ ಕಾಯುವುದಕ್ಕೆ ಹೋಗುವುದು ಹಿಂದಿನಿಂದ ನಡೆದುಕೊಂಡು ಬಂದಪದ್ಧತಿಯಾಗಿತ್ತು. 1999 ರಲ್ಲಿ ಈ ಸಂದರ್ಭವನ್ನೇ ಬಳಸಿಕೊಂಡ ಪಾಕಿಸ್ತಾನ, ಕಾಶ್ಮೀರದ ಹೋರಾಟಗಾರರ ಹೆಸರಿನಲ್ಲಿ ಪಾಕ್ ಸೈನಿಕರು, ಭಾರತದ ಪ್ರಮುಖ ಭಾಗಗಳನ್ನು ತನ್ನ ವಶಕ್ಕೆ ಪಡೆದುಕೊಂಡಿತು. ಇದನ್ನು ಭಾರತೀಯ ಸೇನೆಗೆ ಕುರಿಗಾಹಿಗಳು ಮಾಹಿತಿ ನೀಡಿದರು. ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಚರಣೆ: ಪಾಕಿಸ್ತಾನದ ಕುತಂತ್ರಕ್ಕೆ ಉತ್ತರ ನೀಡಲು ಭಾರತ ಸರ್ಕಾರ ಇಪ್ಪತ್ತು ಸಾವಿರ ಭಾರತೀಯ ಸೈನಿಕರನ್ನ ಸಜ್ಜುಗೊಳಿಸಿ ಮೇ 3ರಿಂದ ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಚರಣೆ ಆರಂಭ ಮಾಡಿತು.

## ಆಪರೇಷನ್ ಸಫೇದ್ ಸಾಗರ್

➢ ಕಾರ್ಗಿಲ್ ಯುದ್ಧದ ವೇಳೆ ಕಾಶ್ಮೀರದ ಪಾಕ್ ಆಕ್ರಮಿತ ಪ್ರದೇಶಗಳ ಮೇಲೆ ಭಾರತೀಯ ವಾಯು ಸೇನೆಯು ಆಪರೇಷನ್ ಸಫೇದ್ ಸಾಗರ್ ಹೆಸರಲ್ಲಿ ಮೇ 26ರಂದು ದಾಳಿ ಆರಂಭಿಸಿತು. MIG 21, 27 ಎರಡು ಯುದ್ದ ವಿಮಾನಗಳನ್ನು ಭಾರತ ಕಳೆದುಕೊಂಡಿತು. ಮೇ 27ರಂದು MIG–27 ಯುದ್ಧ ವಿಮಾನವನ್ನು ಪಾಕಿಸ್ತಾನ ಹೊಡೆದುರಳಿಸಿತು. ಅದರಲ್ಲಿದ್ದ ಲೆಫ್ಟಿನೆಂಟ್ ಕಂಬಂಪತಿ ನಚಿಕೇತ ಅವರನ್ನು ಪಾಕ್ ಸೆರೆ ಹಿಡಿಯಿತು. ಯುದ್ಧದ ಬಳಿಕ ಅವರನ್ನು ಬಿಡುಗಡೆ ಮಾಡಿತು.

## ಆಪರೇಷನ್ ತಲವಾರ್

➢ ನೌಕಾ ಪಡೆಯು 'ಆಪರೇಷನ್ ತಲವಾರ್' ಹೆಸರಿನಲ್ಲಿ ಪಾಕಿಸ್ತಾನದ ವಾಣಿಜ್ಯ ನಗರ ಕರಾಚಿಯ ಮೇಲೆ ಕಣ್ಣಿಟ್ಟಿತ್ತು. ಅರಬ್ಬಿ ಸಮುದ್ರದಲ್ಲಿ ತನ್ನ ಹಿಡಿತ ಹೆಚ್ಚಿಸಿದ್ದ ನೌಕಾ ಪಡೆಯು ಪಾಕಿಸ್ತಾನಕ್ಕೆ ಪೆಟ್ರೋಲಿಯಂ ಉತ್ಪನ್ನ ಹೋಗದಂತೆ ತಡೆದಿತ್ತು. ಪಾಕಿಸ್ತಾನಿಗಳನ್ನು ಬಗ್ಗು ಬಡಿದ ಭಾರತೀಯ ಸೈನಿಕರು, ಜುಲೈ 24 ರಂದು ಪಾಕಿಗಳನ್ನು ಹಿಮ್ಮೆಟ್ಟಿಸಿ ಭಾರತ ಯುದ್ಧ ಗೆದ್ದಿತು. ಜುಲೈ 14ರಂದು ಅಂದಿನ ಪ್ರಧಾನಿ ವಾಜಪೇಯಿ ಅವರು ಯುದ್ಧದಲ್ಲಿ ಭಾರತ ಗೆದ್ದಿದೆ ಎಂದು ಘೋಷಿಸಿದರು. ಜುಲೈ 24ರಂದು ಭಾರತೀಯ ಸೇನೆಯು ಕಾರ್ಗಿಲ್ ಯುದ್ಧ ಮುಗಿದ ಬಗ್ಗೆ ಅಧಿಕೃತ ಘೋಷಣೆ ಮಾಡಿತು. ಬಳಿಕ ಪ್ರತಿವರ್ಷ ಜೂನ್ 26ರಂದು ವಿಜಯ್ ದಿವಸ್ ಆಚರಣೆ ಆರಂಭವಾಯಿತು.

# ವಿಶ್ವ ಚೆಸ್ ದಿನ– ಜುಲೈ 20



ಚೆಸ್ ದಿನವನ್ನು ಜುಲೈ 20 ರಂದು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಈ ದಿನ ಜನಪ್ರಿಯ ಚೆಸ್ ಆಟಗಾರ ವಿಶ್ವನಾಥನ್ ಆನಂದ್, ರಮೇಶ್‌ಬಾಬು ಪ್ರಜ್ಞಾನಂದ, ಮ್ಯಾಗ್ನಸ್ ಕಾರ್ಲೈನ್ ಅವರಂತಹ ಚೆಸ್ ಆಟಗಾರರನ್ನು ನೆನಪಿಸುತ್ತದೆ. "**ನೀವು ದುರ್ಬಲ ಆಟಗಾರನನ್ನು ಎದುರಿಸಲು ತಯಾರಿ ನಡೆಸುತ್ತಿರುವಾಗ ಅತಿಯಾದ ಆತ್ಮವಿಶ್ವಾಸದ ಅಪಾಯ ಯಾವಾಗಲೂ ಇರುತ್ತದೆ.**"**– ವಿಶ್ವನಾಥನ್ ಆನಂದ್**

**ಪ್ರಮುಖ ಅಂಶಗಳು:**

- ಚದುರಂಗ ಫಲಕವು ಒಟ್ಟು 64 ಚೌಕಗಳನ್ನು ಹೊಂದಿದೆ.
- ಆಟಗಾರನು ತನ್ನ ರಾಜನ ವಿರುದ್ಧ ದಾಳಿಯನ್ನು ಎದುರಿಸಲು ಸಾಧ್ಯವಾಗದಿದ್ದಾಗ ಅದನ್ನು ಚೆಕ್‌ಮೇಟ್ ಕರೆಯುತ್ತಾರೆ.
- ವಿಶ್ವದ ಅತ್ಯಂತ ಕಿರಿಯ ಚೆಸ್ ಗ್ರಾಂಡ್ ಮಾಸ್ಟರ್ ಮ್ಯಾಗ್ನಸ್ ಕಾರ್ಲೈನ್
- ಭಾರತದ ಅತ್ಯಂತ ಕಿರಿಯ ಚೆಸ್ ಗ್ರಾಂಡ್ ಮಾಸ್ಟರ್ ಪರಿಮಾರ್ಜನ್ ನೇಗಿ
- ಚೆಸ್‌ನಲ್ಲಿ ಭಾರತದ ಮೊದಲ ಮಹಿಳಾ ಗ್ರಾಂಡ್‌ಮಾಸ್ಟರ್ ಸಿ ಎಸ್ ವಿಜಯಲಕ್ಷ್ಮಿ
- 1988 ರಲ್ಲಿ, ಭಾರತದ ಮೊದಲ ಗ್ರಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್

**ವಿಶ್ವ ಚೆಸ್ ದಿನದ ಹಿನ್ನೆಲೆ:**

- ಡಿಸೆಂಬರ್ 12, 2019 ರಂದು, ವಿಶ್ವಸಂಸ್ಥೆಯ ಸಾಮಾನ್ಯ ಸಭೆ ವಿಶ್ವ ಚೆಸ್ ದಿನವನ್ನು ಗುರುತಿಸಿತು. ಪ್ಯಾರಿಸ್‌ನಲ್ಲಿ 1924ರ ಇದೇ ದಿನ ಅಂತರಾಷ್ಟ್ರೀಯ ಚೆಸ್ ಒಕ್ಕೂಟ (FIDE) ಸ್ಥಾಪನೆಯಾಗಿತ್ತು. ಈ ದಿನವನ್ನು ಅಂತರಾಷ್ಟ್ರೀಯ ಚೆಸ್ ದಿನವನ್ನಾಗಿ ಆಚರಿಸುವ ಪ್ರಸ್ತಾವನೆಯನ್ನು ಯುನೆಸ್ಕೋ ಮುಂದಿಟ್ಟಿತ್ತು.ಹಾಗೂ ವಿಶ್ವ ಚೆಸ್ ದಿನವನ್ನಾಗಿ ಆಚರಿಸುವಪ್ರಸ್ತಾವನೆಯನ್ನು ಅಂಗೀಕರಿಸಿತು.
- ಚೆಸ್ ಫೆಡರೇಷನ್ ಸ್ಥಾಪನೆಯಾದ ಬಳಿಕ 1966 ರಿಂದೀಚೆಗೆ ಪ್ರತಿ ವರ್ಷ ಈ ಆಚರಣೆ ನಡೆಯುತ್ತ ಬಂದಿದೆ. ಈ ಫೆಡರೇಷನ್ ಈಗ 199 ಸದಸ್ಯ ರಾಷ್ಟ್ರಗಳ ಫೆಡರೇಷನ್ ಆಗಿ ಬೆಳೆದಿದೆ. ಇದು ಪ್ರತಿ ವರ್ಷ ಜುಲೈ 20ರಂದು ನಡೆಯುವ ವಾರ್ಷಿಕ ಆಚರಣೆ.
- ಒಂದು ಕಾಲದಲ್ಲಿ "ಚದುರಂಗ" ಎಂದು ಕರೆಯಲ್ಪಡುವ ಚೆಸ್ ಆಟವು ಸುಮಾರು 1500 ವರ್ಷಗಳಷ್ಟು ಹಿಂದೆ ಭಾರತದಲ್ಲಿ ಹುಟ್ಟಿಕೊಂಡಿದೆ ಎಂದು ನಂಬಲಾಗಿದೆ.

International Chess Federation (FIDE) ಬಗ್ಗೆ :

- ಅಂತರಾಷ್ಟ್ರೀಯ ಚೆಸ್ ಒಕ್ಕೂಟ ಅಧ್ಯಕ್ಷ: ಅರ್ಕಾಡಿ ಡೊರ್ಕೋವಿಚ್
- ಅಂತರಾಷ್ಟ್ರೀಯ ಚೆಸ್ ಒಕ್ಕೂಟ ಸ್ಥಾಪನೆ: 20 ಜುಲೈ 1924, ಪ್ಯಾರಿಸ್, ಫ್ರಾನ್ಸ್
- ಅಂತರಾಷ್ಟ್ರೀಯ ಚೆಸ್ ಒಕ್ಕೂಟದ ಪ್ರಧಾನ ಕಛೇರಿ: ಲೌಸನ್ನೆ, ಸ್ವಿಟ್ಸರ್ಲೆಂಡ್.

# ಕ್ರೀಡೆ

## ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಮೆಂಟ್ 2022 ಮುಕ್ತಾಯ

2022 ರ ಮಲೇಷ್ಯಾ ಓಪನ್ (ಪ್ರಾಯೋಜಕತ್ವದ ಕಾರಣಗಳಿಗಾಗಿ ಅಧಿಕೃತವಾಗಿ ಪೆಟ್ರೋನಾಸ್ ಮಲೇಷಿಯಾ ಓಪನ್ 2022 ಎಂದು ಕರೆಲಾಗುತ್ತದೆ) ಬ್ಯಾಡ್ಮಿಂಟನ್ ಪಂದ್ಯಾವಳಿಯಾಗಿದ್ದು, ಇದು ಮಲೇಷ್ಯಾದ ಕೌಲಾಲಂಪುರ್‌ನ ಅಕ್ಸಿಯಾಟಾ ಅರೆನಾದಲ್ಲಿ 28 ಜೂನ್‌ನಿಂದ 3 ಜುಲೈ 2022 ರ ವರೆಗೆ ನಡೆಯಿತು ಇದರ ಒಟ್ಟು ಪ್ರಶಸ್ತಿ ಮೊತ್ತ 5675,000 US ಡಾಲರ್.

2022ರ ಮಲೇಷ್ಯಾ ಓಪನ್ 2022 ವಿಶ್ವ ಬ್ಯಾಡ್ಮಿಂಟನ್ ಒಕ್ಕೂಟದ ವರ್ಲ್ಡ್ ಟೂರನ್ ಹನ್ನೆರಡನೇ ಪಂದ್ಯಾವಳಿಯಾಗಿದೆ ಮತ್ತು ಇದು 1937 ರಿಂದ ಮಲೇಷ್ಯಾ ಓಪನ್ ಚಾಂಪಿಯನ್‌ಶಿಪ್‌ನ ಭಾಗವಾಗಿದೆ.

ಈ ಪಂದ್ಯಾವಳಿಯನ್ನು ವಿಶ್ವ ಬ್ಯಾಡ್ಮಿಂಟನ್ ಒಕ್ಕೂಟದ ಅನುಮತಿಯೊಂದಿಗೆ ಮಲೇಷ್ಯಾದ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಯೋಜಿಸಲಾಗುತ್ತದೆ.

| ವಿಜೇತರ ಪಟ್ಟಿ | : ವಿಜೇತ |
|---|---|
| ಪುರುಷರು ಸಿಂಗಲ್ಸ್ ಪ್ರಶಸ್ತಿ | ವಿಕ್ಟರ್ ಆಕ್ಸೆಲ್ಸೆನ್ (ಡೆನ್ಮಾರ್ಕ್) |
| ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ | ರಾಚನೋಕ್ ಇಂಟನಾನ್ (ಥೈಲ್ಯಾಂಡ್) |
| ಪುರುಷರ ಡಬಲ್ಸ್ ಚಾಂಪಿಯನ್ಸ್ | ಜಪಾನಿನ ಟಕುರೊ ಹಾಕಿ/ ಯುಗೊ ಕೊಬಯಾಶಿ |
| ಮಹಿಳೆಯರ ಡಬಲ್ಸ್ ಚಾಂಪಿಯನ್ಸ್ | ಇಂಡೋನೇಷ್ಯಾದ ಆಪ್ರಿಯಾನಿರ ಹಾಯು ಮತ್ತು ಸಿತಿ ಫಾಡಿಯಾ ಸಿಲ್ವಾ ರಾಮದಂತಿ |
| ಮಿಶ್ರ ಡಬಲ್ಸ್ | ಚೀನಾದ ಝೆಂಗ್ ಸಿವೆ ಮತ್ತು ಹುವಾಂಗ್ ಯಾಕಿಯೊಂಗ್ |

## ಓವರ್‌ವೊಂದರಲ್ಲಿ ಅತಿಹೆಚ್ಚು ರನ್‌ಗಳಿಸಿ ವಿಶ್ವ ದಾಖಲೆ ಮಾಡಿದ– ಬುಮ್ರಾ



ಭಾರತದ ಹಾಗೂ ಇಂಗ್ಲೆಂಡ್ ತಂಡಗಳ ನಡುವಿನ 5ನೇ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿ ಟೀಂ ಇಂಡಿಯಾ ಹಂಗಾಮಿ ನಾಯಕ ಜಸ್ಪ್ರೀತ್ ಬುಮ್ರಾ ಸ್ಫೋಟಕ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಎಜ್‌ಬಾಸ್ಟನ್ ಟೆಸ್ಟ್ ಪಂದ್ಯದಲ್ಲಿ ಬುಮ್ರಾ ಇಂಗ್ಲೆಂಡ್ ವೇಗಿ ಸ್ಟುವರ್ಟ್‌ಬ್ರಾಡ್ ಓವರ್‌ವೊಂದರಲ್ಲಿ ಬರೋಬ್ಬರಿ 29 ರನ್ ಬಾರಿಸುವ ಮೂಲಕ ವಿಶ್ವದಾಖಲೆ ನಿರ್ಮಿಸಿದ್ದಾರೆ. ಬುಮ್ರಾ ಟೆಸ್ಟ್ ಕ್ರಿಕೆಟ್‌ನಲ್ಲಿ ಓವರ್‌ವೊಂದರಲ್ಲಿ ಅತಿ ಹೆಚ್ಚು ರನ್ ಗಳಿಸಿದ ವಿಶ್ವದಾಖಲೆ ಬರೆದಿದ್ದಾರೆ.

ಈ ಮೊದಲು ಕ್ರಿಕೆಟ್ ದಿಗ್ಗಜ ಬ್ರಿಯಾನ್ ಲಾರಾ, ಆಸ್ಟ್ರೇಲಿಯಾದ ಬೈಲಿ ಹಾಗೂ ದಕ್ಷಿಣ ಆಫ್ರಿಕಾದ ಕೇಶವ್ ಮಹರಾಜ್ ಟೆಸ್ಟ್ ಪಂದ್ಯದ ಓವರ್‌ವೊಂದರಲ್ಲಿ 28 ರನ್ ಬಾರಿಸಿದ್ದರು. ಆದರೆ ಇದೀಗ ಬುಮ್ರಾ 29 ರನ್ ಚಚ್ಚುವ ಮೂಲಕ ಹೊಸ ವಿಶ್ವದಾಖಲೆ ನಿರ್ಮಿಸಿದ್ದಾರೆ.

# ಡೈಮಂಡ್ ಲೀಗ್ ಸ್ಪರ್ಧೆಯಲ್ಲಿ ನೀರಜ್ ಚೋಪ್ರಾಗೆ–ಬೆಳ್ಳಿ ಪದಕ :

2020ರ ಒಲಿಂಪಿಕ್ ನಲ್ಲಿ ಭಾರತಕ್ಕೆ ಚಿನ್ನ ತಂದು ಕೊಟ್ಟ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಅವರು ಜೂನ್ 30 ರಂದು ಸ್ಟಾಕ್‌ಹೋಮ್‌ನಲ್ಲಿ ನಡೆದ ಪ್ರತಿಷ್ಠಿತ ಡೈಮಂಡ್ ಲೀಗ್ ನಲ್ಲಿ 89–94 ಮೀ. ಓಪನಿಂಗ್ ಥ್ರೋ ಮೂಲಕ ಹೊಸ ರಾಷ್ಟ್ರೀಯ ದಾಖಲೆ ಮಾಡಿ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿದ್ದಾರೆ. ಸ್ಟಾಕ್‌ಹೋಮ್‌ನಲ್ಲಿ ಆಡಿದ ಡೈಮಂಡ್ ಲೀಗ್‌ನಲ್ಲಿ ನೀರಜ್ 89–94 ಮೀಟರ್ ದೂರ ಎಸೆದಿದ್ದು, ಆ ಮೂಲಕ ಜೂನ್ 14 ರಂದು ತಾವು ನಿರ್ಮಿಸಿದ್ದ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಮುರಿದಿದ್ದಾರೆ.

**ಮುಖ್ಯ ಅಂಶಗಳು:**

- ಡೈಮಂಡ್ ಲೀಗ್‌ನಲ್ಲಿ ಗ್ರೆನಡಾದ ಹಾಲಿ ವಿಶ್ವ ಚಾಂಪಿಯನ್ ಚಿಒತಿರ್ಸನ್ ಪೀಟರ್ಸ್ ತಮ್ಮ ಮೂರನೇ ಪ್ರಯತ್ನದಲ್ಲಿ 90–31 ಮೀ ಜಾವೆಲಿನ್ ಎಸೆಯುವ ಮೂಲಕ ಚಿನ್ನದ ಪದಕ ಗೆದ್ದುಕೊಂಡರು. ಜೊತೆಗೆ ಡೈಮಂಡ್ ಟ್ರೋಫಿ ಮತ್ತು 40,000 ಸಾವಿರ ಡಾಲರ್ ಪಡೆದರು.
- ಮುಂದಿನ ತಿಂಗಳು ಯುಎಸ್‌ಎಯ ಯುಜೇನ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಶಿಪ್‌ಗೆ ಮುನ್ನ ಚೋಪ್ರಾ ಅವರ ಶ್ರೇಷ್ಠ ಸ್ಪರ್ಧೆಯು ಸ್ವೀಡಿಷ್ ರಾಜಧಾನಿಯಲ್ಲಿ ಪ್ರತಿಷ್ಠಿತ ಏಕದಿನ ಕೂಟಲಾಗಿದೆ.
- ಚೋಪ್ರಾ ಅವರು ಅಥ್ಲೆಟಿಕ್ಸ್‌ನಲ್ಲಿ ಒಲಂಪಿಕ್ ಚಿನ್ನದ ಪದಕ ಮೊದಲ ಭಾರತೀಯರಾಗಿದ್ದಾರೆ.

**ಡೈಮಂಡ್ ಲೀಗ್ ಸ್ಪರ್ಧೆಯ ಬಗ್ಗೆ :**

- ಡೈಮಂಡ್ ಲೀಗ್ ಎಂಬುದು ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಿಗಾಗಿ ಅಗ್ರ ಹದಿನಾಲ್ಕು ಆಹ್ವಾನಿತ ಆಥ್ಲೆಟಿಕ್ಸ್ ಸಭೆಗಳ ವಾರ್ಷಿಕ ಸಂಗ್ರಹವಾಗಿದೆ.
- ವಿಶ್ವ ಆಥ್ಲೆಟಿಕ್ಸ್ (ಹಿಂದೆ ಎಂದು ಕರೆಯಲಾಗುತ್ತಿತ್ತು) ಏಕದಿನ ಸಭೆಯ ಸ್ಪರ್ಧೆಗಳು ಸರಣಿಯನ್ನು ಅಗ್ರಸ್ಥಾನದಲ್ಲಿ ಇರಿಸುತ್ತವೆ.
- ಮೊದಲ ಸೀಸನ್ 2010 ರಲ್ಲಿ ಪ್ರಾರಂಭವಾಯಿತು.

**ನೀರಜ್ ಚೋಪ್ರಾ ಬಗ್ಗೆ :**

- ಜನ್ಮ ಸ್ಥಳ: ಹರಿಯಾಣ
- ಕ್ರೀಡೆ ವಿಭಾಗ: ಜಾವೆಲಿನ್ ಥ್ರೋ
- ವೈಯಕ್ತಿಕ ಶ್ರೇಷ್ಠ ಥ್ರೋ 88.07 ಮೀ (ನ್ಯಾಷನಲ್ ರೆಕಾರ್ಡ್)

**ನೀರಜ್ ಚೋಪ್ರಾ ಅವರ ಮಹತ್ವದ ಸಾಧನೆ :**

- 2020 ರ ಟೋಕಿಯೋ ಒಲಿಂಪಿಕ್ಸ್ : ಚಿನ್ನದ ಪದಕ
- 2018ರ ಏಷ್ಯನ್ ಗೇಮ್ಸ್ ಚಿನ್ನದ ಪದಕ
- 2016ರ ವಿಶ್ವ ಕಿರಿಯರ ಚಾಂಪಿಯನ್
- ಕಿರಿಯರ ವಿಶ್ವ ದಾಖಲೆಯ ಜಾವೆಲಿನ್ ಥ್ರೋ ಪಟು

## ಗುಜರಾತ್‌ನಲ್ಲಿ 36ನೇ ರಾಷ್ಟ್ರೀಯ ಕ್ರೀಡಾಕೂಟ :

ಸೆಪ್ಟೆಂಬರ್ ತಿಂಗಳಲ್ಲಿ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ. ಗುಜರಾತ್ ಪಂದ್ಯಗಳನ್ನು ಆಯೋಜಿಸಲಿದೆ. ಈ ಬಹು ಕ್ರೀಡಾ ಕೂಟವನ್ನು ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 10 ರವರೆಗೆ ಆಯೋಜಿಸಲಾಗಿದೆ.

ಗುಜರಾತ್‌ನ ಐದು ನಗರಗಳಲ್ಲಿ (ಅಹಮದಾಬಾದ್, ರಾಜ್‌ಕೋಟ್, ಸೂರತ್, ಭಾವನಗರ ಮತ್ತು ವಡೋದರಾ) ಕ್ರೀಡಾಕೂಟ ನಡೆಯಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಕ್ರೀಡಾಕೂಟದ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭ ನಡೆಯಲಿದೆ. 7 ವರ್ಷಗಳ ನಂತರ ಈ ಆಟಗಳನ್ನು ದೇಶದಲ್ಲಿ ಆಯೋಜಿಸಲಾಗುತ್ತಿದೆ. ಈ ಹಿಂದೆ ಕೇರಳ 2015 ರಲ್ಲಿ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸಿತ್ತು.

ಭಾರತೀಯ ಒಲಿಂಪಿಕ್ ಆಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಅವರು ಸಾಮಾಜಿಕ ಪೋಸ್ಟ್‌ನಲ್ಲಿ ಈ ಘೋಷಣೆ ಮಾಡಿದ್ದಾರೆ. ಈ ಮೊದಲು ಈ ಆಟಗಳನ್ನು ಗೋವಾದಲ್ಲಿ ನಡೆಸಬೇಕಿತ್ತು. ಆದರೆ 2020 ರಲ್ಲಿ ಕರೋನಾವನ್ನು ಉಲ್ಲೇಖಿಸಿ ಗೋವಾ ಸರ್ಕಾರವು ಕ್ರೀಡಾಕೂಟವನ್ನು ಆಯೋಜಿಸುವುದನ್ನು ಹಿಂತೆಗೆದುಕೊಂಡಿತು.

**ರಾಷ್ಟ್ರೀಯ ಕ್ರೀಡಾಕೂಟದ ಬಗ್ಗೆ :**

- ಇದು ರಾಷ್ಟ್ರೀಯ ಕ್ರೀಡಾಕೂಟದ 36 ನೇ ಆವೃತ್ತಿಯಾಗಿದೆ. ಗುಜರಾತ್‌ನ ಐದು ನಗರಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ 34 ಕ್ಕೂ ಹೆಚ್ಚು ಕ್ರೀಡೆಗಳನ್ನು ಒಳಗೊಂಡಿದೆ.
- ಮೊದಲ ಬಾರಿಗೆ ಈ ಆಟಗಳನ್ನು ಲಾಹೋರ್‌ನಲ್ಲಿ (ಇಂದಿನ ಪಾಕಿಸ್ತಾನದ ರಾಜಧಾನಿ) 1924 ರಲ್ಲಿ ನಡೆಸಲಾಯಿತು.
- ಒಳಾಂಗಣ ಮತ್ತು ಹೊರಾಂಗಣ ಸ್ಪರ್ಧೆಗಳಲ್ಲಿ ರಾಷ್ಟ್ರದಾದ್ಯಂತದ ಕ್ರೀಡಾಪಟುಗಳು ಅಥ್ಲೆಟಿಕ್ಸ್, ಹಾಕಿ, ಪುಟ್ಬಾಲ್, ವಾಲಿಬಾಲ್, ಲಾನ್ ಟೆನ್ನಿಸ್, ಟೇಬಲ್ ಟೆನ್ನಿಸ್, ಜೂಡೋ, 'ಕುಸ್ತಿ, ಕಬಡ್ಡಿ, ಖೋ-ಖೋ, ಮಲ್ಲಕಂಭ ಮತ್ತು ಯೋಗ ಸೇರಿದಂತೆ ಕ್ರೀಡೆಗಳಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಲಿದ್ದಾರೆ.
- 2023 ರ 37ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಮೇಘಾಲಯ ರಾಜ್ಯ ಆಯೋಜಿಸಲಿದೆ.

ಕರ್ನಾಟಕ 22ನೇ ರಾಷ್ಟ್ರೀಯ ಕ್ರೀಡಾಕೂಟ 1966 ರಲ್ಲಿ ಹಾಗೂ 1997 ರಲ್ಲಿ 29ನೇ ರಾಷ್ಟ್ರೀಯ ಕ್ರೀಟಾಕೂಟವನ್ನು ಆಯೋಜಿಸಿತ್ತು.

ಗುಜರಾತ್ ಮುಖ್ಯಮಂತ್ರಿ: ಶ್ರೀ ಭೂಪೇಂದ್ರ ಪಟೇಲ್

ಗುಜರಾತ್ ಯುವಜನ, ಕ್ರೀಡೆ ಮತ್ತು ಸಂಸ್ಕೃತಿ ಸಚಿವರು : ಶ್ರೀ ಹರ್ಷ ಸಾಂಘ್ವಿ

## ಚಟುಕು ಪ್ರಚಲಿತ ಘಟನೆಗಳು

- ✓ ಐತಿಹಾಸಿಕ ನೇತಾಜಿ ಸುಭಾಷ ಚಂದ್ರ ಬೋಸ್ ದ್ವೀಪವನ್ನು ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್‌ನಿಂದ ಅಂಡಮಾನ್ ಮತ್ತು ನಿಕೋಬಾರ್ ಆಡಳಿತ ಮಂಡಳಿಗೆ ಇದನ್ನು ವರ್ಗಾಯಿಸಲಾಗಿದೆ. ದ್ವೀಪದ ಮೂಲಸೌಕರ್ಯ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿ ದೃಷ್ಟಿಯಿಂದ ಇದನ್ನು ಆಡಳಿತ ಮಂಡಳಿಗೆ ವರ್ಗಾಯಿಸಲಾಯಿತು.
- ✓ ಜಮ್ಮು ಚಲನಚಿತ್ರೋತ್ಸವದ ಎರಡನೇ ಆವೃತ್ತಿಯು ಸೆಪ್ಟೆಂಬರ್ 3 ರಿಂದ ನಡೆಯಲಿದ್ದು, ಎರಡು ದಿನದ ಕಾರ್ಯಕ್ರಮದಲ್ಲಿ 54 ದೇಶಗಳ ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ಇಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಸೆಪ್ಟೆಂಬರ್ 2019 ರಲ್ಲಿ ಕೇಂದ್ರಾಡಳಿತ ಪ್ರದೇಶದ ಚಳಿಗಾಲದ ರಾಜಧಾನಿ ಜಮ್ಮುವಿನಲ್ಲಿ ನಡೆಸಲಾಯಿತು. ಜಮ್ಮು ಚಲನಚಿತ್ರೋತ್ಸವವನ್ನು "ವೋಮೇಧ' ಸಂಸ್ಥೆ ಆಯೋಜಿಸುತ್ತಿದೆ.
- ✓ ಬಾಂಗ್ಲಾದೇಶದ ಪರ್ವತಾರೋಹಿ ವಾಸಿಫಾನನ್ ಜಗತ್ತಿನ ಎರಡನೇ ಅತಿ ಎತ್ತರದ ಪರ್ವತ ಶಿಖರವಾದ ಭಾರತದ (ಪಾಕಿಸ್ತಾನದ ಆಡಳಿತದಲ್ಲಿರುವ) ಕೆಎ2 ಅನ್ನು ಏರಿದ ಮೊದಲ ವ್ಯಕ್ತಿಯಾಗಿದ್ದಾರೆ. ಅವಳು 8611 ಮೀಟರ್ (28,251 ಅಡಿ) ಎತ್ತರವಿರುವ ಕೆಎ2 ಪರ್ವತ ಶಿಖರವನ್ನು ಏರಿದ್ದಾಳ. 2012 ರಲ್ಲಿ ವಸಿಫಾ ನಜ್ರನ್ ಮೌಂಟ್ ಎವರೆಸ್ಟ್ ಅನ್ನು ಏರಿದರು. ಈ ಸಾಧನೆ ಮಾಡಿದ ಎರಡನೇ ಬಾಂಗ್ಲಾದೇಶದ ಮಹಿಳೆ.
- ✓ ಭೋಪಾಲ್‌ನಲ್ಲಿ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್ ಅವರನ್ನು ಗೌರವಿಸುವ ಬೃಹತ್ ಪ್ರತಿಮೆಯನ್ನು ಸ್ಥಾಪಿಸಲಾಗುವುದು. ಪ್ರತಿಮೆಯ ತಳದಲ್ಲಿ ಆಜಾದ್ ಅವರ ಹುಟ್ಟೂರಾದ ಭಾಬ್ರಾದಿಂದ ಮಣ್ಣನ್ನು ಬಳಸಲಾಗುತ್ತದೆ. ಅಮರ್ ಶಹೀದ್ ಚಂದ್ರಶೇಖರ್ ಆಜಾದ್ ಅವರ 116 ನೇ ವಾರ್ಷಿಕೋತ್ಸವದಂದು, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಭೋಪಾಲ್‌ನಲ್ಲಿ ಮಾತನಾಡಿದರು.
- ✓ ಇತ್ತೀಚೆಗೆ ಕಾನ್ಪುರ್ IIT ಸಂಸ್ಥೆಯು NIRMAN ವೇಗವರ್ಧಕ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಆರೋಗ್ಯಮತ್ತು ಕೃಷಿ ಕ್ಷೇತ್ರಗಳಲ್ಲಿ ತೊಡಗಿರುವ ಉತ್ಪಾದನಾ ಸ್ಟಾರ್ಟ್‌ಅಪ್‌ಗಳ ಸವಾಲುಗಳನ್ನು ಎದುರಿಸಲು ಅವರಿಗೆ ಸಹಾಯ ಮಾಡುವ ಮೇಲೆ ಈ ಕಾರ್ಯಕ್ರಮವು ಕೇಂದ್ರೀಕರಿಸುತ್ತದೆ.
- ✓ ಅಂಡಮಾನ್ ಸಮುದ್ರದಲ್ಲಿ ಜಪಾನ್ ಕಡಲಸ್ವಯಂ ರಕ್ಷಣಾಪಡೆ ಮತ್ತು ಭಾರತೀಯ ನೌಕಾಪಡೆಯ ನಡುವೆ ಕಡಲ ಪಾಲುದಾರಿಕೆ ವ್ಯಾಯಾಮವನ್ನು (MPX) ನಡೆಸಲಾಯಿತು. ಕಾರ್ಯಾಚರಣೆಯ ಪರಸ್ಪರ ಕ್ರಿಯೆಯ ಭಾಗವಾಗಿ ಸಮುದ್ರಯಾನ ಚಟುವಟಿಕೆಗಳು, ವಿಮಾನ ಕಾರ್ಯಾಚರಣೆಗಳು ಮತ್ತು ಯುದ್ಧತಂತ್ರದ ತಂತ್ರಗಳನ್ನು ಒಳಗೊಂಡಂತೆ ವಿವಿಧ ವ್ಯಾಯಾಮಗಳನ್ನು ಕೈಗೊಂಡವು.
- ✓ Paytm ನ ಪೋಷಕ One97 ಕಮ್ಯುನಿಕೇಷನ್ಸ್ ನಕುಲ್ ಜೈನ್ ಅವರನ್ನು Paytm ಪಾವತಿ ಸೇವೆಗಳ ಲಿಮಿಟೆಡ್ (PPSL) ನ CEO ಆಗಿ ನೇಮಿಸಿದೆ. ಈಗ PPSL ಹಂಗಾಮಿ ಸಿಇಒ ಆಗಿ ಸೇವೆ ಸಲ್ಲಿಸುತ್ತಿರುವ ಪ್ರವೀಣ್ ಶರ್ಮಾ ಅವರು ತಮ್ಮ ಇತರ ಕರ್ತವ್ಯಗಳ ಜೊತೆಗೆ ಸಂಸ್ಥೆಯ ವಾಣಿಜ್ಯ ಚಟುವಟಿಕೆಗಳ ಮೇಲ್ವಿಚಾರಣೆಗೆ ಬಡ್ತಿ ಪಡೆದಿದ್ದಾರೆ.Paytm ನ MD ಮತ್ತು CEO ವಿಜಯ್ ಶೇಖರ್ ಶರ್ಮಾ, Paytm ಸ್ಥಾಪನೆ ಆಗಸ್ಟ್ 2010, ಪ್ರಧಾನ ಕಛೇರಿ ಉತ್ತರ ಪ್ರದೇಶದ ನೋಯ್ಡಾದಲ್ಲಿದೆ.

- ಕೆನರಾಬ್ಯಾಂಕ್ ತನ್ನಮೊಬೈಲ್‌ಬ್ಯಾಂಕಿಂಗ್ ಅಪ್ಲಿಕೇಶನ್ 'ಕೆನರಾ ಂಟ2" ಅನ್ನುಪ್ರಾರಂಭಿಸಿದೆ. ಬ್ಯಾಂಕಿಂಗ್ ಅಪ್ಲಿಕೇಶನ್ ತನ್ನ ಗ್ರಾಹಕರ ಬ್ಯಾಂಕಿಂಗ್ ಅಗತ್ಯಗಳನ್ನು ಪೂರೈಸಲು 250 ಕ್ಕೂ ಹೆಚ್ಚು ವೈಶಿಷ್ಟಗಳಿಗೆ ಒಂದು ಪರಿಹಾರವಾಗಿದೆ. ಈ ಅಪ್ಲಿಕೇಶನ್ 11 ಭಾಷೆಗಳಲ್ಲಿ ಲಭ್ಯವಿದೆ.ಕೆನರಾ ಬ್ಯಾಂಕ್ ಪ್ರಧಾನ ಕಛೇರಿ ಬೆಂಗಳೂರಿನಲ್ಲಿದೆ. ಕೆನರಾ ಬ್ಯಾಂಕ್ CEO ಲಿಂಗಂ ವೆಂಕಟ್ ಪ್ರಭಾಕರ್, ಕೆನರಾ ಬ್ಯಾಂಕ್ ಸ್ಥಾಪಕರು: ಅಮ್ಮೆಂಬಲ್ ಸುಬ್ಬಾ ರಾವ್ ಪೈ, ಕೆನರಾ ಬ್ಯಾಂಕ್ ಸ್ಥಾಪನೆ: 1 ಜುಲೈ 1906.
- ಮಧ್ಯಪ್ರದೇಶದ ಬುರ್ಹಾನ್‌ಪುರ ಜಿಲ್ಲೆ ದೇಶದ ಮೊದಲ 'ಹರ್ ಘರ್ ಜಲ್' ಪ್ರಮಾಣೀಕೃತ ಜಿಲ್ಲೆಯಾಗಿದೆ. ಇದನ್ನು 'ದಖಿನ್ನ ದರ್ವಾಜಾ' ಎಂದೂ ಕರೆಯುತ್ತಾರೆ. 2019 ರಲ್ಲಿ 'ಜಲ್ ಜೀವನ್ ಮಿಷನ್' ಪ್ರಾರಂಭವಾದ ನಂತರ, ಬುಹಾನ್‌ಪುರದ ಪಂಚಾಯತ್ ಪ್ರತಿನಿಧಿಗಳು, ಪಾನಿ ಸಮಿತಿಗಳು ಮತ್ತು ಜಿಲ್ಲಾ ಅಧಿಕಾರಿಗಳು ಅದರ ಎಲ್ಲಾ 1,01,905 ಗ್ರಾಮೀಣ ಕುಟುಂಬಗಳಿಗೆ 34 ತಿಂಗಳ ಅವಧಿಯಲ್ಲಿ ಕ್ರಿಯಾತ್ಮಕ ಟ್ಯಾಪ್ ವಾಟರ್ ಸಂಪರ್ಕಗಳನ್ನು ಸಾಧಿಸಲು ಪ್ರಯತ್ನಗಳನ್ನು ನಡೆಸಿದರು.
- ಅಲ್ಬೇನಿಯಾದ ಒಂಬತ್ತನೇ ಅಧ್ಯಕ್ಷ, ನಿವೃತ್ತ ಮಿಲಿಟರಿ ಕಮಾಂಡರ್ ಬಜಾಮ್ ಬೇಗಜ್ ಅವರು ಇಲ್ಲಿನ ಸಂಸತ್ತಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಸಂಘರ್ಷಕ್ಕಿಂತ ರಾಜಕೀಯ ಪಕ್ಷಗಳ ನಡುವಿನ ಸಹಕಾರಕ್ಕಾಗಿ ಪ್ರತಿಪಾದಿಸುತ್ತೇನೆ ಎಂದು ಹೇಳಿದರು. ಅಲ್ಬೇನಿಯಾದ ರಾಜಧಾನಿ ಟಿರಾನಾ.
- ಭಾರತೀಯ ಚಿತ್ರರಂಗದದಿಗ್ಗಜ ನಟ ದಿಲೀಪ್ ಕುಮಾರ್ ಎಂದೇ ಖ್ಯಾತರಾಗಿರುವ ಯೂಸುಫ್ ಖಾನ್ ಅವರ ಕುರಿತಾದ ಹೊಸ ಪುಸ್ತಕವನ್ನು ಲೇಖಕ ಫೈಸಲ್ ಫಾರೂಕಿ ಬಿಡುಗಡೆ ಮಾಡಿದ್ದಾರೆ. ಪುಸ್ತಕದ ಶೀರ್ಷಿಕೆ "ಇನ್ ದಿ ಶಾಡೋ ಅಫ್ ಎ ಲೆಜೆಂಡ್: ದಿಲೀಪ್ ಕುಮಾರ್, ಫಾರೂಕಿ ಭಾರತದ ಪ್ರಮುಖ ವಿಮರ್ಶೆ ಮತ್ತು ರೇಟಿಂಗ್ ಪ್ಲಾಟ್‌ಫಾರ್ಮ್‌ಗಳಲ್ಲಿ ಒಂದಾದ Mouthshut.com ನ ಸಂಸ್ಥಾಪಕ ಮತ್ತು CEO ಆಗಿದ್ದಾರೆ.
- ನೀರಜ್ ಚೋಪ್ರಾ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ಬಾರಿಗೆ ಬೆಳ್ಳಿ ಗೆದ್ದು ಇತಿಹಾಸ ನಿರ್ಮಿಸಿದ್ದಾರೆ. ನಾಲ್ಕನೇ ಸುತ್ತಿನಲ್ಲಿ ನೀರಜ್ ಚೋಪ್ರಾ ತಮ್ಮ 88.13 ಮೀ ಎಸೆತದ ನಂತರ ಗೆಲುವಿನ ನಗೆ ಬೀರಿದರು. ಯುಎಸ್‌ನ ಯುಜೀನ್‌ನಲ್ಲಿ ನಡೆದ ಪುರುಷರ ಜಾವೆಲಿನ್ ಥ್ರೋ ಫೈನಲ್‌ನಲ್ಲಿ ನಡೆಯಿತು.
- ಜುಲೈ 25, 2022 ರಂದು ಪ್ರಾರಂಭವಾಗುವ ಮೊದಲ ಖೇಲೋ ಇಂಡಿಯಾ ಫೆನ್ಸಿಂಗ್ ಮಹಿಳಾ ಲೀಗ್ ಅನ್ನು ನವದೆಹಲಿಯ ಟಾಲ್ಕಟೋರಾ ಒಳಾಂಗಣ ಕ್ರೀಡಾಂಗಣವು ಆಯೋಜಿಸುತ್ತದೆ. ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಪ್ರಕಾರ ಮಹಿಳೆಯರಿಗಾಗಿ ಮೊದಲ ರೀತಿಯ ರಾಷ್ಟ್ರೀಯ ಫೆನ್ಸಿಂಗ್ ಸ್ಪರ್ಧೆಯು ಈ ತಿಂಗಳ 29 ರವರೆಗೆ ನಡೆಯಲಿದೆ. ಇದು ಮೂರು ಹಂತಗಳಲ್ಲಿ ನಡೆಯಲಿದೆ.
- 1ನೇ ಖೇಲೋ ಇಂಡಿಯಾ ಫೆನ್ಸಿಂಗ್ ಮಹಿಳಾ ಲೀಗ್ ಇತ್ತೀಚೆಗೆ ನವದೆಹಲಿಯ ಟಾಲ್ಕಟೋರಾ ಒಳಾಂಗಣ ಕ್ರೀಡಾಂಗಣದಲ್ಲಿ ಪ್ರಾರಂಭವಾಯಿತು. ಮಹಿಳೆಯರಿಗಾಗಿ ಇದು ಮೊದಲ ರಾಷ್ಟ್ರೀಯ ಫೆನ್ಸಿಂಗ್ ಸ್ಪರ್ಧೆಯಾಗಿದೆ.20 ರಾಜ್ಯಗಳಾದ್ಯಂತ 300 ಕ್ಕೂ ಹೆಚ್ಚು ಮಹಿಳೆಯರು ಇದರಲ್ಲಿ ಭಾಗವಹಿಸುತ್ತಿದ್ದಾರೆ.ಟೋಕಿಯೊ ಒಲಿಂಪಿಯನ್ ಮತ್ತು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್ (ಟಿಒಪಿಎಸ್) ಅಥ್ಲೇಟ್ ಭವಾನಿ ದೇವಿ ಕೂಡ ಭಾಗವಹಿಸಿದ್ದಾರೆ.